Swabhimani Sahakari
Pages - 40, ₹12
Volume -14
Issue - 12
December - 2017

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಭಿಮ್ಮನೆ ಬಂದಳೋ?
ಎಲ್ಲಿ ಮೋಹನ ಗಿರಿಯ ಬೆಡಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
ಎಲ್ಲಿ ನೆಲವನು ತಣಿಸಿ, ಜನಮನ ಹೊಲದ ಕಳೆ ಕಳೆ ಕಳೆವಳೋ?
ಅಲ್ಲಿ ಆ ಕಡೆ ನೋಡಲಾ!
ಅಲ್ಲಿ ಕೊಡಗರ ನಾಡಲಾ!
ಅಲ್ಲಿ ಕೊಡವರ ಬೀಡಲಾ!

–ಪಂಜೆ ಮಂಗೇಶರಾಯರು

ಡಿಸೆಂಬರ್ 4:
ಕೊಡಗಿನಲ್ಲಿ
ಹುತ್ತರಿ ಸಂಭ್ರಮ



ಸೌಹಾರ್ದ ಸಹಕಾರಿಗಳ ಸಂಖ್ಯೆ : 4190 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1090



# ಸಪ್ತಾಹದ ಅರ್ಥಪೂರ್ಣ ಆಚರಣೆ : ಸಹಕಾರ ಕ್ಷೇತ್ರದ ಅಭಿವೃದ್ಧಿಯ ದಿಕ್ಸೂಚಿ

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಈದ್-ಮಿಲಾದ್ ಹಾಗೂ ಕ್ರಿಸ್‌ಮಸ್ ಹಬ್ಬದ ಶುಭಾಷಯಗಳು.

64ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ರಾಜ್ಯದಾದ್ಯಂತ ಅತ್ಯಂತ ಪರಿಣಾಮಕಾರಿಯಾಗಿ ಆಚರಿಸಲಾಗಿದೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು, ಸಹಕಾರ ಮಂತ್ರಿಗಳು, ಸಚಿವ ಸಂಪುಟದ ಅನೇಕ ಸಚಿವರು, ಶಾಸಕರು, ಸಹಕಾರಿಗಳ ನಿಬಂಧಕರು, ಅವರ ಅಧಿಕಾರಿಗಳು, ಪ್ರಮುಖ ಸಹಕಾರಿ ಗಣ್ಯರು ಸೇರಿದಂತೆ ಬಹುಪಾಲು ಸಹಕಾರಿಗಳು ಈ ಸಪ್ತಾಹ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಸಹಕಾರ ಕ್ಷೇತ್ರದ ಸಾಧನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ. ಸವಾಲುಗಳ ಬಗ್ಗೆ ಚರ್ಚೆಯಾಗಿದೆ. ಸಹಕಾರ ಕ್ಷೇತ್ರ ಅಳವಡಿಸಿಕೊಳ್ಳಬಹುದಾದ ಆಧುನಿಕ ತಾಂತ್ರಿಕತೆಯ ಬಗ್ಗೆ ಮತ್ತು ಸಹಕಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಯುವಕರು ಹಾಗೂ ಮಹಿಳೆಯರು ಮತ್ತು ಸಮಾಜದ ಹಿಂದುಳಿದ ವರ್ಗದ ಜನರು ಪಾಲ್ಗೊಳ್ಳುವಂತಾಗಲು ಕ್ರಿಯಾ ಯೋಜನೆಗಳ ಬಗ್ಗೆ ಚರ್ಚಿಸಲಾಗಿದೆ. ಸಹಕಾರ ಕ್ಷೇತ್ರದ ಬಗ್ಗೆ ಜನರಲ್ಲಿ ವಿಶ್ವಾಸಾರ್ಹತೆ ಹೆಚ್ಚಿಸುವ ಕಾರ್ಯಗಳು ನಡೆದಿರುವುದು ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಪೂರಕ ಎಂದು ಭಾವಿಸುತ್ತೇನೆ.

ಸಪ್ತಾಹದ ಧ್ಯೇಯ ಮೊದಲ್ಗೊಂಡು 7 ದಿನಗಳಲ್ಲಿ 7 ವಿಷಯಗಳ ಬಗ್ಗೆ ಹಾಗೂ ಸಹಕಾರ ಕ್ಷೇತ್ರದ ಸಮಗ್ರ ವಿಷಯಗಳ ಬಗ್ಗೆ ಚಿಂತನೆಗಳು ನಡೆದಿವೆ. ಸಮುದ್ರ ಮಂಥನದಲ್ಲಿ ಬರುವ ಅಮೃತದಂತೆ ಅನೇಕ ಉತ್ತಮ ವಿಷಯಗಳ ಜೊತೆಗೆ ಹಾಲಾಹಲವು ಬರುವಂತೆ ಅನೇಕ ಸವಾಲುಗಳು ಹಾಗೂ ಅವುಗಳ ನಿರ್ವಹಣೆಯ ಬಗ್ಗೆ ಕ್ರಿಯಾ ಯೋಜನೆಗಳ ಸಿದ್ಧತೆ ಬಗ್ಗೆ ಚಿಂತನೆ ನಡೆದಿದೆ. ಇದರಿಂದಾಗಿ ಸಹಕಾರಿಗಳ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಆತ್ಮಸ್ಥೈರ್ಯ ಹೆಚ್ಚಿರುವುದು ಸಂತೋಷದ ವಿಷಯ. ಸಹಕಾರ ಸಪ್ತಾಹದ ಆಚರಣೆಯ ಜೊತೆಗೆ ನಮ್ಮ ಉತ್ಸಾಹಗಳು ನಿಲ್ಲಬಾರದು. ಈ ಕ್ಷೇತ್ರದ ಅಭಿವೃದ್ಧಿಗೆ ಇತ್ತೀಚಿಗೆ ಅನೇಕ ಸವಾಲುಗಳು ಎದುರಾಗಿವೆ. ವಿಶೇಷವಾಗಿ ಕ್ರೆಡಿಟ್ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯವರಿಂದ ನೋಟೀಸುಗಳು, ಜಿಎಸ್‌ಟಿ ಅಳವಡಿಸುವಲ್ಲಿ ತಾಂತ್ರಿಕ ಹಾಗೂ ವ್ಯವಹಾರಿಕ ತೊಂದರೆಗಳ ನಿವಾರಣೆ, ಸಹಕಾರಿ ಸಂಸ್ಥೆಗಳನ್ನು ಒಬ್ಬ ವ್ಯಕ್ತಿಯಂತೆ ಪರಿಗಣಿಸಿ ಬ್ಯಾಂಕುಗಳಿಗೆ ನೀಡಿರುವಂತೆ ವಿಶೇಷ ಸೌಲಭ್ಯಗಳನ್ನು ನೀಡದಿರುವುದು ಹೀಗೆ ಹಲವಾರು ವಿಷಯಗಳಲ್ಲಿ ಸಹಕಾರ ಕ್ಷೇತ್ರ ಸೌಲಭ್ಯ ವಂಚಿತವಾಗಿದೆ ಎಂದು ಭಾಸವಾಗುತ್ತಿದೆ. ಈ ಬಗ್ಗೆ ಕೇಂದ್ರ ಸರಕಾರದ ಗಮನ ಸೆಳೆಯುವ ಕಾರ್ಯಗಳು ಸಮರೋಪಾದಿಯಲ್ಲಿ ನಡೆಯುವುದು ಅವಶ್ಯಕವೆಂದು ನಾನು ಭಾವಿಸಿದ್ದೇನೆ.

ದಿನಾಂಕ : 18-11-2017ರಂದು ತುಮಕೂರಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ತುಮಕೂರು ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಿದ ಸಹಕಾರ ಸಪ್ತಾಹ ಆಚರಣೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಜನರಿಗೆ ಉತ್ತಮ ಅಭಿಪ್ರಾಯ ಹಾಗೂ ವಿಶ್ವಾಸಾರ್ಹತೆ ಹೆಚ್ಚುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರು, ಸಂಸದರಾದ ಶ್ರೀ ಮುದ್ದುಹನುಮೇಗೌಡರವರು, ಶಾಸಕರಾದ ಶ್ರೀ ರಫೀಕ್ ಅಹ್ಮದ್‌ರವರು ಮತ್ತು ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ.ಅಯ್ಯಪ್ಪರವರು ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಮತ್ತು ಸಹಕಾರಿ ಮುಖಂಡರು ಮತ್ತು 3000ಕ್ಕೂ ಹೆಚ್ಚು ಸಹಕಾರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದ್ದಾರೆ. ಮುಕ್ತ ಮನಸ್ಸಿನಿಂದ ಮೆಚ್ಚಿಕೊಂಡಿದ್ದಾರೆ. ಇದು ಅತ್ಯಂತ ಸಂತೋಷ ಹಾಗೂ ನಮಗೆಲ್ಲ ಹೊಸ ಉತ್ಸಾಹ ನೀಡಿದೆ.

ಸಪ್ತಾಹದ ಯಶಸ್ವಿ ಆಚರಣೆಗೆ ಪ್ರೋತ್ಸಾಹ ನೀಡಿ ಸಹಕರಿಸಿದ ತುಮಕೂರಿನ ಎಲ್ಲಾ ಸಹಕಾರಿ ಸಂಸ್ಥೆಗಳಿಗೆ, ಸಹಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ ಮತ್ತು ಮುಂಬರುವ ದಿನಗಳಲ್ಲಿ ಇದೇ ರೀತಿಯ ಸಹಕಾರವನ್ನು ಅಪೇಕ್ಷಿಸುತ್ತದೆ.

“ವಿಶೇಷವಾಗಿ ಕ್ರೆಡಿಟ್ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯವರಿಂದ ನೋಟೀಸುಗಳು, ಜಿಎಸ್‌ಟಿ ಅಳವಡಿಸುವಲ್ಲಿ ತಾಂತ್ರಿಕ ಹಾಗೂ ವ್ಯವಹಾರಿಕ ತೊಂದರೆಗಳ ನಿವಾರಣೆ, ಸಹಕಾರಿ ಸಂಸ್ಥೆಗಳನ್ನು ಒಬ್ಬ ವ್ಯಕ್ತಿಯಂತೆ ಪರಿಗಣಿಸಿ ಬ್ಯಾಂಕುಗಳಿಗೆ ನೀಡಿರುವಂತೆ ವಿಶೇಷ ಸೌಲಭ್ಯಗಳನ್ನು ನೀಡದಿರುವುದು ಹೀಗೆ ಹಲವಾರು ವಿಷಯಗಳಲ್ಲಿ ಸಹಕಾರ ಕ್ಷೇತ್ರ ಸೌಲಭ್ಯ ವಂಚಿತವಾಗಿದೆ ಎಂದು ಭಾಸವಾಗುತ್ತಿದೆ.”

**ಬಿ.ಹೆಚ್. ಕೃಷ್ಣಾರೆಡ್ಡಿ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ತುಮಕೂರಿನಲ್ಲಿ 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಯಶಸ್ವಿ ಆಚರಣೆ .............. 6–16

ಸಂಯುಕ್ತ ಸಹಕಾರಿ ಸಮಾಚಾರಗಳು ................ 17–21

ಸಂಯುಕ್ತ ಸಹಕಾರಿಯ ನಿರ್ದೇಶಕರ ವ್ಯಕ್ತಿ ಪರಿಚಯ ........... ........................................................................ 22–24

ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 30–32

ನಿಮ್ಮ ಪ್ರಶ್ನೆ – ನಮ್ಮ ಉತ್ತರ ................................ 33

ಸೌಹಾರ್ದ ಸಹಕಾರಿ ಕಾಯಿದೆ ಮತ್ತು ಸಂಯುಕ್ತ ಸಹಕಾರಿಯ ಮಂಡಲಿ ........................................... 34

ಸವಾಲುಗಳನ್ನು ಮೀರಿ ಬೆಳೆಯಲು ಸಮರ್ಥವಾಗಿದೆ ಸಹಕಾರ ಕ್ಷೇತ್ರ ........................................................ 36

ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ .............................. 37

ಡಿಜಿಟಲೀಕರಣದ ಮೂಲಕ ಮಹಿಳೆಯರ ಸಬಲೀಕರಣ ... ...................................................................... 38

ಆರ್.ಬಿ.ಐ. ನ್ಯೂಸ್ ........................................ 39–40

# ಸಂಪಾದಕೀಯ

## ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ : ಪ್ರಜ್ಞಾವಂತಿಕೆಯನ್ನು ಹೆಚ್ಚಿಸುವ, ಕರ್ತವ್ಯ ಹಾಗೂ ಜವಾಬ್ಧಾರಿಗಳ ಅರಿವು ಮೂಡಿಸುವ ಮತ್ತು ವ್ಯಕ್ತಿತ್ವ ವಿಕಸನದ ಅರ್ಥಪೂರ್ಣ ತರಬೇತಿ

ಸಹಕಾರ ಕ್ಷೇತ್ರಕ್ಕೆ 114 ವರ್ಷಗಳ ಇತಿಹಾಸ. 6 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು, 30 ಕೋಟಿಗೂ ಹೆಚ್ಚು ಸದಸ್ಯರು, ಒಂದು ಸಂಸ್ಥೆಯಲ್ಲಿ ಕನಿಷ್ಠ 11 ಜನ ನಿರ್ದೇಶಕರೆಂದರೆ 66 ಲಕ್ಷಕ್ಕೂ ಹೆಚ್ಚು ನಿರ್ದೇಶಕರು ಈ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತದಲ್ಲಿ ಅನೇಕ ಸಾಧನೆಗಳಾಗಿವೆ. ಸಹಕಾರ ಕ್ಷೇತ್ರ ಒಂದು ಪ್ರಬಲ ಆರ್ಥಿಕ ವ್ಯವಸ್ಥೆಯಾಗಿ ಬೆಳೆದಿದೆ. ಸಹಕಾರ ಕ್ಷೇತ್ರ ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬ ನಂಬಿಕೆಗೆ ಪಾತ್ರವಾಗಿದೆ. ಸಹಕಾರ ಸಂಸ್ಥೆಗಳು ರಾಷ್ಟ್ರದ ಸಂಕಷ್ಟ ಪರಿಸ್ಥಿತಿಗಳಲ್ಲೂ ಉತ್ತಮವಾಗಿ ಕೆಲಸ ನಿರ್ವಹಿಸಬಲ್ಲವು ಎಂಬುದು ಸಾಬೀತಾಗಿದೆ. ಸರಕಾರದ ಅನೇಕ ಯೋಜನೆಗಳ ಅನುಷ್ಠಾನದ ಸಾಧನೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಆದರೂ ಕೂಡ ಸಹಕಾರ ಸಂಸ್ಥೆಗಳು ಸರಕಾರದ ಹಾಗೂ ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಪೂರ್ಣಪ್ರಮಾಣದಲ್ಲಿ ಸಂಪಾದಿಸದಿರುವುದು ವಿಷಾದನೀಯ. ಸಾರ್ವಜನಿಕ ವೇದಿಕೆಯಲ್ಲಿ ಸಹಕಾರ ಕ್ಷೇತ್ರವನ್ನು ಹೊಗಳಿ ಕೊಂಡಾಡುವ ರಾಜಕಾರಣಿಗಳು, ಅಧಿಕಾರಿಗಳು, ಆರ್ಥಿಕ ತಜ್ಞರು ಸರಕಾರದ ಯೋಜನೆಗಳ ಅನುಷ್ಠಾನದ ಜವಾಬ್ಧಾರಿಯನ್ನು ಸಹಕಾರ ಕ್ಷೇತ್ರಕ್ಕೆ ವಹಿಸಿಕೊಡಲು ಹಿಂದೇಟು ಹಾಕಲು ಸಹಕಾರಿಗಳ ವಿಶ್ವಾಸಾರ್ಹತೆಯ ಕೊರತೆ ಎಂದೇ ಹೇಳಬಹುದು, ಅದಕ್ಕಾಗಿ ಬೇಕಾಗಿದೆ ಸಹಕಾರಿ ಸಂಸ್ಥೆಗಳ ನಿರ್ದೇಶಕರಲ್ಲಿ ಪ್ರಜ್ಞಾವಂತಿಕೆ. ತಾವು ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕರಾದ ಮೇಲೆ ತಮ್ಮ ಸಹಕಾರಿ ಸಂಸ್ಥೆಯ ಉಪವಿಧಿಗಳು, ಸಹಕಾರಿ ಕಾನೂನು ಹಾಗೂ ಸಂಬಂಧಿಸಿದ ಕಾನೂನು, ಆಡಳಿತ ವ್ಯವಸ್ಥೆ, ನಿರ್ದೇಶಕರ ಕಾರ್ಯವ್ಯಾಪ್ತಿ, ಸಹಕಾರಿ ಪರಿಸರ, ಪ್ರಚಲಿತ ವಿಷಯಗಳ ಬಗ್ಗೆ ಅರಿತುಕೊಳ್ಳುವುದು ಪ್ರತಿಯೊಬ್ಬ ನಿರ್ದೇಶಕರ ಕರ್ತವ್ಯವಾಗುತ್ತದೆ.

ದಿನಾಂಕ 8, 9, 10 ನವೆಂಬರ್ 2017ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ಪ್ರಜ್ಞಾವಂತಿಕೆಯನ್ನು ಹೆಚ್ಚಿಸುವ, ಕರ್ತವ್ಯ ಹಾಗೂ ಜವಾಬ್ಧಾರಿಗಳ ಅರಿವು ಮೂಡಿಸುವ ಮತ್ತು ವ್ಯಕ್ತಿತ್ವ ವಿಕಸನದ ತರಬೇತಿ ಕಾರ್ಯಕ್ರಮ ನಡೆದಿರುವುದು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಉತ್ತಮ ಮಾರ್ಗದರ್ಶನ ನೀಡುವ ಪ್ರಯತ್ನವೆಂದು ಭಾವಿಸಬಹುದಾಗಿದೆ. ಉತ್ತಮ ವಿಷಯಗಳು, ಉತ್ತಮ ಹಾಗೂ ನುರಿತ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ, ಮಾರ್ಗದರ್ಶನ ಮಾಡಿದ್ದಾರೆ. ನಿರ್ದೇಶಕರುಗಳು ಸಕ್ರಿಯವಾಗಿ ಭಾಗವಹಿಸಿರುವುದು ಸ್ವಾಗತಾರ್ಹ. ಇದು ಇತರರಿಗೆ ಮಾದರಿ.

ರಾಜ್ಯದ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ನಿರ್ದೇಶಕರುಗಳಿಗೆ ನಿರಂತರ ತರಬೇತಿ ಹಾಗೂ ಮಾರ್ಗದರ್ಶನದ ಅವಶ್ಯಕತೆಯಿದೆ. ನಿರ್ದೇಶಕರಾಗಿ ಆಯ್ಕೆಯಾಗುವುದೊಂದೇ ಮುಖ್ಯವಲ್ಲ. ಪ್ರಾಥಮಿಕ ಹಂತದಿಂದ ರಾಷ್ಟ್ರ ಮಟ್ಟದವರೆಗೆ ನಿರ್ದೇಶಕರಾಗಿ ಆಯ್ಕೆಯಾಗುವ ಎಲ್ಲಾ ಸಹಕಾರಿಗಳೂ ಎಲ್ಲಾ ವಿಧವಾದ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಪ್ರಯೋಜನ ಪಡೆಯುವುದು ಅವರ ಪ್ರಥಮ ಕರ್ತವ್ಯ. ತರಬೇತಿಯಲ್ಲಿ ಭಾಗವಹಿಸುವಿಕೆಗೆ ಅನಾಸಕ್ತಿ ಬೇಡ. ಆಸಕ್ತಿಯಿಂದ ಭಾಗವಹಿಸಿ. ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಿ. ನಿಮ್ಮ ಅನುಭವವನ್ನು ಇತರರಿಗೆ ಹಂಚಿಕೊಳ್ಳಿ. ಇತರ ಅನುಭವವನ್ನು ನೀವು ಪಡೆದುಕೊಳ್ಳಿ. ಸಹಕಾರ ಕ್ಷೇತ್ರದ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿ. ಸಹಕಾರ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದರೆ ಮಾತ್ರ ಸಹಕಾರ ಕ್ಷೇತ್ರ ನಿರೀಕ್ಷೆಯಂತೆ ಕಾರ್ಯನಿರ್ವಹಿಸಲು ಸಾಧ್ಯವೆಂಬುದನ್ನು ಅರಿತುಕೊಳ್ಳುವುದು ಅಗತ್ಯವೆನಿಸುತ್ತದೆ.

## ನಮ್ಮದು ಒಂದು ಅಗಾಧ ಮನಸ್ಸಿನ ಸಾಮರ್ಥ್ಯ



## ಜ್ಞಾನ ಜ್ಯೋತಿ

▸▸ ಶ್ರೀ ಸಿದ್ಧೇಶ್ವರ ಸ್ವಾಮೀಜಿ

ಮನಸ್ಸಿನ ಸಾಮರ್ಥ್ಯ ನಿಜಕ್ಕೂ ಅಗಾಧವಾದುದು. ಸರಿಯಾಗಿ ಬಳಸಿದರೆ ಅದು ನಮ್ಮನ್ನು ಮಹದೆತ್ತರಕ್ಕೆ, ಸ್ವರ್ಗದ ಸನಿಹಕ್ಕೆ ಒಯ್ಯಬಲ್ಲುದು. ಇಲ್ಲದಿದ್ದರೆ ನಮ್ಮನ್ನು ಪಾತಾಳಕ್ಕೆ, ನರಕದಾಚೆಗೆ ದೂಡಬಲ್ಲುದು. ದೇಶವನ್ನು ಕಟ್ಟುವುದು, ಕೆಡಹುವುದು ಈ ಮನಸ್ಸೇ! ಅದರಿಂದ ಜೀವನವು ರಸರಂಗವೂ ಆಗಬಹುದು, ರಣರಂಗವೂ ಆಗಬಹುದು. ಒಟ್ಟಿನಲ್ಲಿ ನಮ್ಮ ಸುಖ-ದುಃಖಕ್ಕೆ, ಸೋಲು-ಗೆಲುವಿಗೆ, ಮಾನಾಪಮಾನ ಎಲ್ಲದಕ್ಕೂ ನಮ್ಮ ಎದೆಯ ಗೂಡಿನಲ್ಲಿ ಗುಪ್ತವಾಗಿ, ಸುಪ್ತವಾಗಿ ಇರುವ ಈ ಮನಸ್ಸೇ ಕಾರಣ. ಅಂತೆಯೇ ನಮ್ಮ ಹಿರಿಯರು 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷ ಯೋಃ', ಮನುಷ್ಯನ ಬಂಧ ಮೋಕ್ಷಗಳಿಗೆ ಈ ಮನಸ್ಸೇ ಕಾರಣ ಎಂದು ಹೇಳಿದರು.

ನಮ್ಮ ಅಂತರಂಗದಲ್ಲಿರುವ ಈ ಮನಸ್ಸು ತನ್ನೆಲ್ಲ ಕೊಳೆ, ಕಲ್ಮಶವನ್ನು ಕಳೆದುಕೊಂಡು ಪರಿಶುದ್ಧವಾದಾಗ ಮಾತ್ರ ಆ ಪರಮಸತ್ಯ ಪರಮಾತ್ಮನ ದರ್ಶನವನ್ನು ಪಡೆಯುತ್ತದೆ. ಇದನ್ನೇ ಸಾಕ್ಷಾತ್ಕಾರ ಅಥವಾ ಮೋಕ್ಷವೆಂದು ಕರೆಯುತ್ತಾರೆ. ಆದರೆ ಈ ಅಂತರಂಗ ಶುದ್ಧಿ ಅಥವಾ ಹೃದಯ ಶುದ್ಧಿಯು ಅಷ್ಟು ಸುಲಭವಾದುದಲ್ಲ.

ಓರ್ವ ಆಂಗ್ಲ ವಿದ್ವಾಂಸರು ಹೇಳುತ್ತಾರೆ – "ಮನುಷ್ಯನು ಈ ಪ್ರಪಂಚವನ್ನು ಅತಿಯಾಗಿ ಹಚ್ಚಿಕೊಂಡಿದ್ದಾನೆ, ನೆಚ್ಚಿಕೊಂಡಿದ್ದಾನೆ. ಇದರಿಂದಾಗಿ ಮನುಷ್ಯನು ನೂರಾರು ಆಶಾಪಾಶಗಳಿಂದ ಬಂಧಿತನಾಗಿ ಬಳಲುತ್ತಿದ್ದಾನೆ". ಒಬ್ಬ ಲಕ್ಷಾಧಿಪತಿಯು ಒಂದು ದಿನ ಒಬ್ಬ ಬಡ ಮನುಷ್ಯನಿಗೆ ಹತ್ತು ಲಕ್ಷ ರೂಪಾಯಿಗಳನ್ನು ಒಂದು ವರುಷದೊಳಗೆ ಮರಳಿ ಕೊಡಬೇಕೆಂಬ ಕರಾರಿನೊಂದಿಗೆ ಸಾಲವಾಗಿ ನೀಡಿದ. ಆದರೆ ಆ ಮನುಷ್ಯನು ನಾಲ್ಕೈದು ವರುಷಗಳಾದರೂ ಸಾಲವನ್ನು ಮರಳಿಸಲಾಗದೆ ಆ ಊರನ್ನೇ ಬಿಟ್ಟು ಓಡಿಹೋದ. ಈ ಸುದ್ದಿಯನ್ನು ಕೇಳಿದ ಆ ಲಕ್ಷಾಧಿಪತಿಯ ಬುದ್ಧಿ ಭ್ರಮಿಷ್ಟವಾಯಿತು. ಕಂಡ ಕಂಡವರಿಗೆಲ್ಲ ನನ್ನ ಹತ್ತು ಲಕ್ಷ ರೂಪಾಯಿ ಕೊಡುವಿರಾ ಎಂದು ಕೇಳುತ್ತಾ ಕೈ ಚಾಚುತ್ತಾ ಭಿಕ್ಷುಕನಂತೆ ಅಲೆದಾಡತೊಡಗಿದ. ಕಾಗದ ಚೂರುಗಳನ್ನೇ ನೋಟುಗಳೆಂದು ಸಂಗ್ರಹಿಸತೊಡಗಿದ. ಅಂತರಂಗದಲ್ಲಿ ಆಶೆ ಆಮಿಷದ ಕೊಳೆ ಕಲ್ಮಶ ಇರುವವರೆಗೆ ಮನುಷ್ಯನಿಗೆ ಇಂಥ ದುರ್ಗತಿ ಒದಗುವುದು ತೀರಾ ಸಾಮಾನ್ಯ.

ಮನೆಯಲ್ಲಿ ಧನ, ಕನಕ, ವಸ್ತು-ಒಡವೆ, ಬಂಧು-ಬಳಗ ಎಲ್ಲಾ ಇರಬಹುದು. ಆದರೆ ಪರಸ್ಪರರಲ್ಲಿ ಪ್ರೀತಿ-ವಿಶ್ವಾಸ ಇಲ್ಲದಿದ್ದರೆ ಒಬ್ಬರ ಮುಖ ಒಬ್ಬರು ನೋಡದಂತಿದ್ದರೆ, ಮುಗುಳ್ನಗೆ ಬೀರದಿದ್ದರೆ ಆ ಸಿರಿ ಸಂಪದ ಯಾವುದಕ್ಕಾಗಿ? ಮನುಷ್ಯನ ಮಲೀನವಾದ ಮನದ ಚಿತ್ರಣವನ್ನು ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಕಾವ್ಯಾತ್ಮಕವಾಗಿ ಅಷ್ಟೇ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ!

ಈ ಹುಸಿ ವಿಷಯವಾಸನೆ ಮೊದಲಾದ ಕಸ-ಕಲ್ಮಶಗಳನ್ನು ಕಳೆದುಕೊಂಡು ನಮ್ಮ ಅಂತರಂಗವು ಪರಿಶುದ್ಧವಾದಾಗ ಮಾತ್ರ ಆ ಪರಮಸತ್ಯ ಪರಮಾತ್ಮನ ದಿವ್ಯ ದರ್ಶನ ನಮಗಾಗುತ್ತದೆ. ಇದುವೇ ಹೃದಯ ಶುದ್ಧಿ!

## ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಏಷ್ಯಾ ಫೆಸಿಫಿಕ್ (ICA-AP) ವಿಭಾಗದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ಅಧ್ಯಯನ ಹಾಗೂ ಸಂಶೋಧನೆ



ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಏಷ್ಯಾ ಫೆಸಿಫಿಕ್ (ICA-AP) ವಿಭಾಗದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ಅಧ್ಯಯನ ಹಾಗೂ ಸಂಶೋಧನೆಗಾಗಿ ಶ್ರೀಮತಿ ಲಾರೆನ್ಸ್ ಹಮ್ಮನ್, ಆಡಳಿತ ತಜ್ಞರು ಹಾಗೂ ವೃತ್ತಿಪರ ವಕೀಲರು ಇವರು ಬೆಂಗಳೂರಿಗೆ ದಿನಾಂಕ : 11 ಡಿಸೆಂಬರ್ 2017ರಂದು ಆಗಮಿಸಿ, ದಿನಾಂಕ : 11 ರಿಂದ 16ರವರೆಗೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಅಧ್ಯಯನ, ವಿವಿಧ ಸಹಕಾರಿ ಸಂಸ್ಥೆಗಳ, ಆರ್‌ಐಸಿಎಂ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರೊಂದಿಗೆ ಹಾಗೂ ಅಧಿಕಾರಿ ವರ್ಗದವರೊಂದಿಗೆ ಮತ್ತು ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಿದ್ದಾರೆ.

ದಿನಾಂಕ : 14 ಡಿಸೆಂಬರ್ 2017ರಂದು ಮೈಸೂರು ವಿಶ್ವವಿದ್ಯಾಲಯದ ಸಹಕಾರ ಸಂಶೋಧನಾ ವಿಭಾಗದ ಮುಖ್ಯಸ್ಥರೊಂದಿಗೆ ಚರ್ಚಿಸಲಿದ್ದಾರೆ. ಇವರು ಮೂಲತಃ ಕೆನಡಾದವರಾಗಿದ್ದು, ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಧ್ಯಯನ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಅಧ್ಯಯನ ಹಾಗೂ ಸಂಶೋಧನೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಹೆಮ್ಮೆಯ ವಿಷಯ.

**ರಮೇಶ ಲ. ಜಾರಕಿಹೊಳಿ**
ಸಹಕಾರ ಸಚಿವರು
ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 244, 245
2ನೇ ಮಹಡಿ, ವಿಧಾನಸೌಧ
ಬೆಂಗಳೂರು – 560 001
ದೂರವಾಣಿ: 22251639
22033009

ಸಂಖ್ಯೆ. ಸ.ಸ./2594/2017 ದಿನಾಂಕ: 26.10.2017

<u>ಟಿಪ್ಪಣಿ</u>

ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಡಾ|| ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು. ಇವರ ಮನವಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಪತ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ 1997ಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಮಾಡಿಕೊಡುವುದರ ಮೂಲಕ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಸಹಕರಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

(ರಮೇಶ ಲ ಜಾರಕಿಹೊಳಿ)

ಸರ್ಕಾರದ ಕಾರ್ಯದರ್ಶಿ,
ಸಹಕಾರ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಪ್ರತಿ:- ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಡಾ|| ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.

## ಜನವರಿ 01 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಸೌಹಾರ್ದ ಸಹಕಾರಿಗಳಲ್ಲಿ ವಿನಂತಿ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 01, 2001ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜನವರಿ 01ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ. ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ. ಈ ದಿನದಂದು ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾದ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವೆನಿಸುತ್ತದೆ.

ಸದರಿ ದಿನದಂದು ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು, ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಸೇರಿದಂತೆ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ. ಸೌಹಾರ್ದ ಸಹಕಾರಿ ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಪತ್ರದ / souharda@souharda.coopಗೆ ಇ–ಮೇಲ್ ಮೂಲಕ ಕಳುಹಿಸಲು ಕೋರಿದೆ.

# ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ತುಮಕೂರಿನಲ್ಲಿ 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಯಶಸ್ವಿ ಆಚರಣೆ

## ಅವಕಾಶಕ್ಕಾಗಿ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರಿಗೆ, ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ.ಅಯ್ಯಪ್ಪರವರಿಗೆ ಹಾಗೂ ಸಹಯೋಗಕ್ಕಾಗಿ ಶ್ರೀ ಕೆ.ಎನ್.ರಾಜಣ್ಣನವರಿಗೆ ಕೃತಜ್ಞತೆಗಳು - ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ



ಉದ್ಘಾಟನಾ ಕಾರ್ಯಕ್ರಮ



ಉಪಸ್ಥಿತ ಸಹಕಾರಿಗಳು

**ತುಮಕೂರು : ದಿನಾಂಕ : 18–11–2017 :** ಪ್ರಾರಂಭದಲ್ಲಿ ಶ್ರೀ ಕೆಂಕೆರೆ ಮಲ್ಲಿಕಾರ್ಜುನರವರಿಂದ ಪ್ರಾರ್ಥನೆಯಾದ ಬಳಿಕ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಎನ್. ಗಂಗಣ್ಣನವರು ಅತಿಥಿ ಗಣ್ಯರನ್ನು ಸ್ವಾಗತ ಕೋರಿದರು. ನಂತರ ಪ್ರಾಸ್ತಾವಿಕ ಭಾಷಣವನ್ನು ನೆರವೇರಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಗೆ ಸಂಯುಕ್ತ ಸಹಕಾರಿಗೆ ನೇತೃತ್ವವನ್ನು ಒದಗಿಸಿದ ರಾಜ್ಯದ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರಿಗೆ ಹಾಗೂ ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ.ಅಯ್ಯಪ್ಪರವರಿಗೆ ಮತ್ತು ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಸಹಕರಿಸಿದ ಶ್ರೀ ಕೆ.ಎನ್.ರಾಜಣ್ಣನವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.



ಪ್ರಾಸ್ತಾವಿಕ ಭಾಷಣ

ಸಹಕಾರ ಸಪ್ತಾಹದ ಆಚರಣೆ ಸಹಕಾರಿಗಳಿಗೆ ಹಬ್ಬವಿದ್ದಂತೆ. ಈ ಸಪ್ತಾಹದ ಹಬ್ಬದಲ್ಲಿ ಎಲ್ಲಾ ಸಹಕಾರಿಗಳು ಒಂದಾಗಿ ತಮ್ಮ ತಮ್ಮ ಸಾಧನೆಯ ಸಿಹಿಯನ್ನು ಹಂಚಿಕೊಳ್ಳುವುದರ ಜೊತೆಗೆ ತಮ್ಮ ಕಾರ್ಯನಿರ್ವಹಣೆಯಲ್ಲಿನ ತೊಡಕುಗಳ ನಿವಾರಣೆಗೆ ಅಗತ್ಯ ಕ್ರಮಗಳ ಚಿಂತನೆ ಮಾಡಿ, ಪರಿಹಾರ ಕಂಡುಕೊಳ್ಳುವ ವೇದಿಕೆ ಎಂದು ನಾನು ಭಾವಿಸಿದ್ದೇನೆ.

ನಮ್ಮ ದೇಶದ ಸಹಕಾರ ಚಳುವಳಿ ವಿಶ್ವದಲ್ಲಿಯೇ ದೊಡ್ಡದು ಹಾಗೂ ಭಿನ್ನವಾದದ್ದು. ತನ್ನದೇ ಆದ ಸುದೀರ್ಘ ಅನುಭವವಿದೆ. ಹಿರಿಯರ ಮಾರ್ಗದರ್ಶನವಿದೆ. ಸರಕಾರದ ಪ್ರೋತ್ಸಾಹವಿದೆ. ಉತ್ತಮ ಸಹಕಾರಿ ನಾಯಕತ್ವ ಹಾಗೂ ಸದಸ್ಯರ ಸಕ್ರಿಯ ಪಾಲುಗಾರಿಕೆ ಮಾತ್ರ ಈ ಕ್ಷೇತ್ರದ ಯಶಸ್ಸಿಗೆ ಅವಶ್ಯಕ ಎಂದು ತಿಳಿಸುತ್ತಾ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಹಾಗೂ ಬೆಳವಣಿಗೆಗಳನ್ನು ತಿಳಿಸಿದರು.

## ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಹಕಾರಿ ಸಂಸ್ಥೆಗಳು ತಾಂತ್ರಿಕತೆಯನ್ನು ಬಳಸುವುದು ಅವಶ್ಯಕ - ಶ್ರೀ ಕೆ.ಎನ್. ರಾಜಣ್ಣ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಸಹಕಾರ ಯೂನಿಯನ್, ತುಮಕೂರು ಹಾಲು ಉತ್ಪಾದಕರ ಒಕ್ಕೂಟ, ತುಮಕೂರಿನ ಎಲ್ಲಾ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಹಯೋಗದಿಂದ 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ 'ತಾಂತ್ರಿಕ ಜಾಗೃತಿ ಮತ್ತು ನಗದು ರಹಿತ ಪಾವತಿ ಮೂಲಕ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ' ವಿಷಯವಾಗಿ ಏರ್ಪಡಿಸಿದ್ದ ಬೃಹತ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕರಾದ ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ರಾಜಣ್ಣನವರು ಮಾತನಾಡಿ, ಸ್ಪರ್ಧಾತ್ಮಕ ಪ್ರಪಂಚದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಸಹಕಾರಿ ಸಂಸ್ಥೆಗಳು ತಾಂತ್ರಿಕತೆಯನ್ನು ಬಳಸುವುದು, ಆರ್ಥಿಕ ಸದೃಢತೆಗೆ ತಾಂತ್ರಿಕತೆ ಬಳಸುವುದು ಅವಶ್ಯಕ ಎಂದು ತಿಳಿಸಿದರು.



ಪ್ರಾಸ್ತಾವಿಕ ಭಾಷಣ

## ಹೊಸಬರಿಗೆ ಸಾಲ ನೀಡುವ ಕ್ರಮ ಅಗತ್ಯ

ಶ್ರೀ ಕೆ.ಎನ್.ರಾಜಣ್ಣನವರು ತಮ್ಮ ಸುದೀರ್ಘ ಭಾಷಣದಲ್ಲಿ ಸಹಕಾರ ಕ್ಷೇತ್ರದ ಪ್ರಗತಿಯ ಬಗ್ಗೆ ಹಾಗೂ ಸರಕಾರ ರೈತರಿಗಾಗಿ ಹಮ್ಮಿಕೊಂಡಿರುವ ಸಾಲ ಮನ್ನಾ, ಬಡ್ಡಿ ಮನ್ನಾ, ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ಇತ್ಯಾದಿ ವಿಷಯಗಳ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಸಹಕಾರ ಸಂಸ್ಥೆಗಳು ರೈತರ ಅಭಿವೃದ್ಧಿಗಾಗಿ ಬಹಳ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಸರಕಾರದ ಸಾಲ ಮನ್ನಾ, ಬಡ್ಡಿ ಮನ್ನಾ ಪಡೆದ ರೈತರಿಗೆ ಸಾಲ ವಿತರಣೆ ಮಾಡುವುದರ ಜೊತೆಗೆ ಹೊಸ ಹೊಸ ಸಾಲಗಳನ್ನು ಹೊಸಬರಿಗೆ ನೀಡುವಂತೆ ಕ್ರಮವಿಡುವುದು ಅಗತ್ಯ. ಹೀಗಾದಾಗ ಮಾತ್ರ ಸಹಕಾರ ಕ್ಷೇತ್ರ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಂತಾಗುತ್ತದೆ ಎಂದರು.

ಮುಂದುವರೆದು ಮಾತನಾಡಿದ ಅವರು ಸಹಕಾರ ಕ್ಷೇತ್ರ ಅತ್ಯಂತ ಪ್ರಬಲವಾದ ಕ್ಷೇತ್ರ. ಅತ್ಯಂತ ದೊಡ್ಡದಾಗಿ ಬೆಳೆದಿರುವ ನಮ್ಮ ದೇಶದ ಸಹಕಾರ ಚಳುವಳಿಯಲ್ಲಿ ಪ್ರಾಥಮಿಕ ಹಂತದಿಂದ ರಾಷ್ಟ್ರ ಮಟ್ಟದವರೆಗೆ ಹೆಚ್ಚಿನ ಸಂಖ್ಯೆಯಲ್ಲಿ

ಸಹಕಾರ ಸಂಸ್ಥೆಗಳು ಅತ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ನೋಡಿದ್ದೇವೆ. ಇಲ್ಲಿ ಶಿಕ್ಷಣ ಸಿಗುತ್ತದೆ. ಉತ್ತಮ ಪರಿಸರ ಸಿಗುತ್ತದೆ. ನಾಯಕತ್ವ ಸಿಗುತ್ತದೆ. ಜೀವನೋಪಾಯಕ್ಕೆ ದಾರಿಗಳು ಸಿಗುತ್ತವೆ. ಪ್ರಜಾಪ್ರಭುತ್ವದ ವ್ಯವಸ್ಥೆಗೆ ತರಬೇತಿ ಸಿಗುತ್ತದೆ. ಹಣಕಾಸಿನ ನಿರ್ವಹಣೆಯ ಮಾಹಿತಿ ನೀಡುತ್ತದೆ. ಆಡಳಿತ ತರಬೇತಿ ಸಿಗುತ್ತದೆ. ಹೀಗೆ ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವಾಗುವ ಈ ಕ್ಷೇತ್ರದಿಂದ ದೇಶದ ಜನರ ಆರ್ಥಿಕ ಹಾಗೂ ಸಾಮಾಜಿಕ ಮತ್ತು ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದು ನಾನು ನಂಬಿದ್ದೇನೆ. ಶಾಸಕ ಸ್ಥಾನವನ್ನಾದರೂ ಬಿಡಬಹುದು, ಆದರೆ ಸಹಕಾರ ಕ್ಷೇತ್ರವನ್ನು ಬಿಡಲಾಗದು ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆ ಸಮರ್ಪಕವಾಗಿದೆ

ಸೌಹಾರ್ದ ಸಹಕಾರಿ ಕ್ಷೇತ್ರವು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಉತ್ತಮವಾಗಿ ಬೆಳೆಯುತ್ತಿದೆ. ಈ ಕ್ಷೇತ್ರ ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವೆನಿಸುತ್ತದೆ.

ಬೆಳೆಯಲು ಇನ್ನೂ ಹೆಚ್ಚಿನ ಅವಕಾಶಗಳಿವೆ. ಸರಕಾರದಿಂದ ಅಗತ್ಯವೆನಿಸಬಹುದಾದ ಪ್ರೋತ್ಸಾಹವನ್ನು ನೀಡಲು ಬದ್ಧವಾಗಿದೆ. ಅದಕ್ಕೆ ನಮ್ಮ ಪ್ರೋತ್ಸಾಹ ಇದೆ ಎಂದು ತಿಳಿಸಿದರು.

ಯುವಕರು ಹಾಗೂ ಮಹಿಳೆಯರು ಹೆಚ್ಚು ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು. ಅವರಿಗೆ ನಾಯಕತ್ವದ ತರಬೇತಿ ನೀಡಬೇಕು. ಹೆಚ್ಚಿನ ಅವಕಾಶಗಳನ್ನು ನೀಡಬೇಕು ಎಂದು ತಿಳಿಸಿದರು.

## ಅವಕಾಶ ವಂಚಿತರಿಗೆ ಸಹಕಾರ, ನೆರವು ನೀಡುವ ಯೋಜನೆಗಳನ್ನು ರೂಪಿಸಿ - ಶ್ರೀ ಮುದ್ದುಹನುಮೇಗೌಡ



ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಸಂಸದರಾದ ಶ್ರೀ ಮುದ್ದುಹನುಮೇಗೌಡರವರು ಮಾತನಾಡಿ, ಈ ದೇಶದಲ್ಲಿ ಸಹಕಾರ ಚಳುವಳಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ.

ಈ ಕ್ಷೇತ್ರ ಇನ್ನೂ ಗಟ್ಟಿಯಾಗಿ ಸದೃಢವಾಗಿ ಬೆಳೆಯಲು ಈ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಅರ್ಥ ಮಾಡಿಸಬೇಕು, ಆಗ ಸಹಕಾರ ಸಪ್ತಾಹದ ಆಚರಣೆಗೆ ಅರ್ಥ ಬರುತ್ತದೆ. ಅಭಿವೃದ್ಧಿಯ ಅವಕಾಶ ವಂಚಿತರಿಗೆ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಸಹಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

## ಸಹಕಾರ ಕ್ಷೇತ್ರಕ್ಕೆ ಉತ್ತಮ ನಾಯಕತ್ವದ ಅಗತ್ಯ ಇದೆ - ಶ್ರೀ ರಫೀಕ್ ಅಹ್ಮದ್



ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಸ್ಥಳೀಯ ಶಾಸಕರಾದ ಶ್ರೀ ರಫೀಕ್ ಅಹ್ಮದ್‌ರವರು ಸಹಕಾರ ಕ್ಷೇತ್ರದಲ್ಲಿ ಶ್ರೀ ಕೆ.ಎನ್. ರಾಜಣ್ಣನವರಂತಹ ನಾಯಕರುಗಳ ಅವಶ್ಯಕತೆ ಇದೆ. ಸಹಕಾರ ತತ್ವಗಳಲ್ಲಿ ಅಪಾರ ವಿಶ್ವಾಸವನ್ನು ಹೊಂದಿರುವುದರ ಜೊತೆಗೆ ಜಿಲ್ಲೆಯ ರೈತರ ಹಾಗೂ ಸಮಾಜದ ದುರ್ಬಲ ವರ್ಗದವರ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಯಾವ ರೀತಿಯಲ್ಲಿ ಸ್ಪಂದಿಸಬಹುದು ಎಂಬುದರ ಬಗ್ಗೆ ನಿರಂತರವಾಗಿ ಚಿಂತನೆ ಮಾಡುತ್ತಾ ಹಲವಾರು ಯೋಜನೆಗಳನ್ನು ಜಿಲ್ಲಾ ಕೇಂದ್ರ ಬ್ಯಾಂಕಿನಿಂದ ಈ ವರ್ಗದವರಿಗಾಗಿ ಜಾರಿ ಮಾಡಿದ್ದಾರೆ ಎಂದರು.

## ಸಹಕಾರ ಕ್ಷೇತ್ರದ ಸಾಧನೆಗಳ ಮೆಲುಕು ಹಾಕುವ ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಈ ಸಪ್ತಾಹ - ಶ್ರೀ ಶೇಖರಗೌಡ ಮಾಲಿಪಾಟೀಲ



ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲರವರು ಮಾತನಾಡಿ, ಈ ದೇಶದ ಹಾಗೂ ರಾಜ್ಯದ ಸಹಕಾರ ಕ್ಷೇತ್ರದ ಸಾಧನೆಗಳನ್ನು ಮೆಲುಕು ಹಾಕುವಂತಹ ಈ ಸಹಕಾರ ಸಪ್ತಾಹದ ಯಶಸ್ವಿ ಆಚರಣೆಯ ಮೂಲಕ ಸಾರ್ವಜನಿಕರಿಗೆ ನಮ್ಮ ಅಸ್ತಿತ್ವವನ್ನು, ನಮ್ಮ ಸಾಧನೆಗಳನ್ನು ಪ್ರಚಾರ ಮಾಡುವ ಹಾಗೂ ಈ ಕ್ಷೇತ್ರಕ್ಕೆ ಹೊಸದಾಗಿ ಸದಸ್ಯರು ಬರುವಂತೆ ಮಾಡುವ ಮತ್ತು ನಮ್ಮ ಈ ಸಹಕಾರ ಕ್ಷೇತ್ರವನ್ನು ಬಲಪಡಿಸುವುದೇ ಆಗಿದೆ ಎಂದು ತಿಳಿಸಿದರು.

## ಸಹಕಾರಿಗಳ ಜಾಥಾ







ಬೆಳಿಗ್ಗೆ 10-00 ಗಂಟೆಗೆ ಗುಮಚಿ ವೃತ್ತದಿಂದ ಸಹಕಾರಿಗಳ ಜಾಥಾ ಹೊರಡಿಸಲಾಯಿತು. ಜಾಥಾದಲ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರು, ಸಂಸದರಾದ ಶ್ರೀ ಮುದ್ದುಹನುಮೇಗೌಡರವರು, ಶಾಸಕರಾದ ಶ್ರೀ ರಫೀಕ್ ಅಹ್ಮದ್‌ರವರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ

ಮಾಲಿಪಾಟೀಲ, ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೊಂಡವಾಡಿ ಚಂದ್ರಶೇಖರ, ಶ್ರೀ ಎನ್.ಗಂಗಣ್ಣ, ಶ್ರೀ ವೆಂಕಟೇಗೌಡ, ಜಂಟಿ ನಿಬಂಧಕರಾದ ಶ್ರೀ ಎಂ.ಡಿ.ನರಸಿಂಹಮೂರ್ತಿ, ಉಪನಿಬಂಧಕರಾದ ಶ್ರೀ ವಿಜಯಕುಮಾರ, ಡಿ.ಸಿ.ಸಿ. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಟಿ.ವಿ.ನರಸಿಂಹಮೂರ್ತಿ, ತುಮಕೂರು ಜಿಲ್ಲೆಯ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು, ಅನೇಕ ಸಹಕಾರಿ ಗಣ್ಯರು, ಅನೇಕ ಅಧಿಕಾರಿಗಳು ಈ ಜಾಥಾದಲ್ಲಿ ಭಾಗವಹಿಸಿದ್ದರು.

ಜಾಥಾದ ಮುಂಭಾಗದಲ್ಲಿ ಸಹಕಾರ ಧ್ವಜವನ್ನು ಹಿಡಿದು ಸಾಗುತ್ತಿದ್ದ ಸಹಕಾರಿ ಕಾರ್ಯಕರ್ತರು, ಅವರ ಮುಂದೆ ಚಂಡೆ ವಾದ್ಯ, ನಾಶಿಕ ಡೋಲು, ಮಹಿಳಾ ವೀರಗಾಸೆಗಳ ಪ್ರದರ್ಶನ ಆಕರ್ಷಣೀಯವಾಗಿತ್ತು. ಜಾಥಾದ ಉದ್ದಕ್ಕೂ ಸಹಕಾರ ತತ್ವಗಳ, ಸಹಕಾರ ಕ್ಷೇತ್ರದ ಸಾಧನೆಯ ಫಲಕಗಳನ್ನು, ಸೌಹಾರ್ದ ಸಹಕಾರಿಗಳು ಹಾಗೂ ಸಹಕಾರ ಸಂಸ್ಥೆಗಳನ್ನು ಹಿಡಿದು ನಡೆಯುತ್ತಿದ್ದ ನೋಟ ಸಹಕಾರ ಕ್ಷೇತ್ರದ ವಿರಾಟ ಸ್ವರೂಪವನ್ನು ತೋರಿಸುವಂತಿತ್ತು.



**ಸಹಕಾರಿ ಪ್ರದರ್ಶಿನಿ**

ಸಹಕಾರ ಜಾಥಾ ಸಭೆ ನಡೆಯುವ ಗಾಜಿನ ಮನೆ ಒಳಾಂಗಣಕ್ಕೆ ಬಂದ ನಂತರ ಎಡಭಾಗದಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳ ಪ್ರದರ್ಶಿನಿಯನ್ನು ವ್ಯವಸ್ಥೆ ಮಾಡಲಾಗಿತ್ತು. ಪ್ರದರ್ಶಿನಿಯನ್ನು ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪರವರು ಉದ್ಘಾಟಿಸಿದರು. ಗಣ್ಯರೆಲ್ಲ ಪ್ರದರ್ಶಿನಿಯನ್ನು ವೀಕ್ಷಿಸಿದರು.



**ಸಹಕಾರಿ ಧ್ವಜಾರೋಹಣ**

ಎಲ್ಲಾ ಅತಿಥಿ ಗಣ್ಯರ, ಸಹಕಾರಿಗಳ ಸಮ್ಮುಖದಲ್ಲಿ ಸಂಸದರಾದ ಶ್ರೀ ಮುದ್ದುಹನುಮೇಗೌಡರವರು ಸಪ್ತಾಹದ ಸಹಕಾರಿ ಧ್ವಜಾರೋಹಣವನ್ನು ನೆರವೇರಿಸಿದ ಬಳಿಕ ಸಪ್ತಾಹದ ಬೃಹತ್ ಸಭೆ ಪ್ರಾರಂಭವಾಯಿತು.

## ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆ ಪ್ರಶಸ್ತಿ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿ ಮತ್ತು ಸನ್ಮಾನಗಳು



ಉತ್ತಮ ಸಹಕಾರಿ ಸಂಸ್ಥೆಗಳ ಪ್ರಶಸ್ತಿ ಮತ್ತು ಶ್ರೇಷ್ಠ ಸಹಕಾರಿಗಳ ಪ್ರಶಸ್ತಿ ಪ್ರದಾನ

ಇದೇ ಸಂದರ್ಭದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಮಾಜಕ್ಕೆ ಸಹಕಾರ ಕ್ಷೇತ್ರದ ಮೂಲಕ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವ 5 ಜನ ಹಿರಿಯ ಸಹಕಾರಿಗಳನ್ನು ಗುರುತಿಸಿ, ಅವರುಗಳಿಗೆ ಶ್ರೇಷ್ಠ ಸಹಕಾರಿಗಳೆಂದು ಸನ್ಮಾನಿಸಲಾಯಿತು.

## 64ನೇ ಅಖಿಲ ಭಾರತ ಸಹಕಾರ ಸಪ್ತಾಹ–2017
## ರಾಜ್ಯದ ಶ್ರೇಷ್ಠ ಸಹಕಾರಿಗಳ ಪ್ರಶಸ್ತಿ ಪುರಸ್ಕೃತ ಸೌಹಾರ್ದ ಸಹಕಾರಿಗಳ ವಿವರಗಳು

### **ಶ್ರೀ ಆರ್.ಎಸ್.ಮುತಾಲಿಕ್** – ದಿ ಬೆಳಗಾಂ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೆಳಗಾವಿ.

64ನೇ ಅಖಿಲ ಭಾರತ ಸಹಕಾರ ಸಪ್ತಾಹ 2017ರ ಅಂಗವಾಗಿ ತುಮಕೂರಿನಲ್ಲಿನ ನಡೆಯಲಿರುವ ಕಾರ್ಯಕ್ರಮದಲ್ಲಿ ಶ್ರೇಷ್ಠ ಸಹಕಾರಿಯೆಂದು ಗುರುತಿಸಿರುವ ಶ್ರೀ ರವೀಂದ್ರ ಶ್ರೀಪಾದ ಮುತಾಲಿಕ, ನಿರ್ದೇಶಕರು, ಬೆಳಗಾವಿ ಇವರ ಪರಿಚಯ.



1) ಹೆಸರು : **ರವೀಂದ್ರ ಶ್ರೀಪಾದ ಮುತಾಲಿಕ**
2) ವಯಸ್ಸು : 58 ವರ್ಷ
3) ಶಿಕ್ಷಣ : B.Com, M.A., L.L.B. (Spl)
4) ಉದ್ಯೋಗ : ವಕೀಲರು
5) ಸಂಸ್ಥೆಗಳು : 1) ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ನಿರ್ದೇಶಕರಾಗಿ ಹಾಗೂ
2) ಕರ್ನಾಟಕ ಕಾನೂನು ಸಂಸ್ಥೆ (ಶಿಕ್ಷಣ ಸಂಸ್ಥೆ, ನಿರ್ದೇಶಕರು)

**6) ಶ್ರೀಯುತರು ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಯ ವಿವರಗಳು**

1) ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಈ ಸಂಸ್ಥೆಯು 1974ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಿಂದ ಪ್ರಾರಂಭವಾದ ಸಂಸ್ಥೆ. 44 ವರ್ಷಗಳ ಸುದೀರ್ಘ ಅನುಭವವನ್ನು ಹೊಂದಿದೆ.
2) ಸನ್ಮಾನಿತರು 1999 ರಿಂದ ಸಹಕಾರಿ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
3) ಕರ್ನಾಟಕದಲ್ಲಿ ಹೊಸ ಕಾಯ್ದೆ 2001ರಲ್ಲಿ ಪ್ರಾರಂಭವಾದಾಗ ಈ ಸಂಸ್ಥೆಯು ಬೆಳಗಾವಿ ಜಿಲ್ಲೆಯಲ್ಲಿ ಮೊಟ್ಟಮೊದಲನೆಯ ಸೌಹಾರ್ದ ಸಹಕಾರಿಯಾಗಿ ಪರಿವರ್ತನೆಯಾದ ಸಹಕಾರಿ ಸಂಸ್ಥೆ.
4) ಈ ಸಹಕಾರಿ ಸಂಸ್ಥೆಯು 8 ಶಾಖೆಗಳನ್ನು ಹೊಂದಿರುತ್ತದೆ ಹಾಗೂ ಅಲ್ಲಿ "Core Banking" ಸೌಲಭ್ಯವನ್ನು ಹೊಂದಿರುತ್ತದೆ.
5) ಈ ಸಹಕಾರಿ ಸಂಸ್ಥೆಯು ರೂ. 95 ಕೋಟಿ ಠೇವಣಿ ಹೊಂದಿದ್ದು, ಶೀಘ್ರದಲ್ಲಿ ರೂ. 100 ಕೋಟಿ ಠೇವಣಿ ತಲುಪುವ ಸ್ಥಿತಿಯಲ್ಲಿದೆ ಹಾಗೂ ರೂ. 75 ಕೋಟಿ ಸಾಲವನ್ನು ನೀಡಿರುತ್ತದೆ.
6) ಈ ಸಹಕಾರಿ ಸಂಸ್ಥೆಯ 8 ಶಾಖೆಗಳಲ್ಲಿ 6 ಶಾಖೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ Safe Deposit Lockers ಗಳನ್ನು ಹೊಂದಿರುತ್ತವೆ ಮತ್ತು ಇವುಗಳು E-stamping ಸೌಲಭ್ಯವನ್ನು ಹೊಂದಿವೆ.
7) ಈ ಸಹಕಾರಿ ಸಂಸ್ಥೆಯು ತಮ್ಮ ಸಹಕಾರಿಗಳಿಗೆ ಕಳೆದ ದಶಕದಿಂದ 20% Dividend (ಲಾಭಾಂಶ) ವನ್ನು ವಿತರಿಸುತ್ತಾ ಬಂದಿದೆ.
8) ಈ ಸಂಸ್ಥೆಯ ವಸೂಲಾತಿ ಸಹ ಸುಮಾರು 97% ರಷ್ಟಿದೆ.
9) ಸಾಮಾಜಿಕ ಜವಾಬ್ದಾರಿಯಾಗಿ ಖಾನಾಪೂರ ಶಾಖೆಯಲ್ಲಿ ಜನರ ಸಲುವಾಗಿ ಶುದ್ಧ ಕುಡಿಯುವ ನೀರಿನ ಘಟಕದ ಸೌಲಭ್ಯವನ್ನು ಒದಗಿಸಲಾಗಿದೆ.
10) ಈ ಸಂಸ್ಥೆಯು ಕೆಲವೇ ತಿಂಗಳಲ್ಲಿ ಕಲ್ಯಾಣ ಮಂಟಪದ ಕಟ್ಟಡ ಕಾರ್ಯ ಮುಗಿದು ಸಾಮಾನ್ಯ ಜನರಿಗೆ ಅನುಕೂಲ ಮಾಡಿಕೊಡಲು ನಿರ್ಮಾಣ ಹಂತದಲ್ಲಿದೆ.
11) ಈ ಸಂಸ್ಥೆಯು ಬ್ಯಾಂಕ್ ರೂಪದಲ್ಲಿ ಬದಲಾವಣೆಯ ಹೆಜ್ಜೆಯನ್ನು ಇಡುತ್ತಿದೆ.

### **ಶ್ರೀ ನಾಗರಾಜು.ಎಸ್.** – ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ.



ಹೆಸರು – **ಎಸ್. ನಾಗರಾಜು**
ತಂದೆ – ಸುಬ್ಬಣ್ಣ (ಕೃಷಿಕರು)
ತಾಯಿ – ಪುಟ್ಟಬಸಮ್ಮ (ಕೃಷಿಕರು)
ಹುಟ್ಟಿದ ಸ್ಥಳ – ಮಾರಸಿಂಗನಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
ವಿದ್ಯಾಭ್ಯಾಸ – ಎಸ್.ಎಸ್.ಎಲ್.ಸಿ.
ಹುಟ್ಟಿದ ದಿನಾಂಕ – 01–06–1961

ಪ್ರಸ್ತುತ ಆಧುನಿಕ ಕೃಷಿ ಬೇಸಾಯಗಾರರು, ಹಸಿರು ಮನೆಯಲ್ಲಿ ತೋಟಗಾರಿಕೆ ಬೆಳೆ ತೆಗೆದು ವಿದೇಶಕ್ಕೆ ರಫ್ತು ಮಾಡುವುದು, ನರ್ಸರಿ ಕ್ಷೇತ್ರದ ಅಭಿವೃದ್ಧಿ ಹಾಗೂ ಕೃಷಿ ಆಧಾರಿತ ಉದ್ಯಮಿಗಳು ಹಾಗೂ ಕಳೆದ 6 ವರ್ಷಗಳಿಂದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಜಿಲ್ಲಾ ಮಟ್ಟದ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸೌಹಾರ್ದ ಸಹಕಾರಿಗಳಲ್ಲಿ ಆಧ್ಯಾತ್ಮಿಕವಾಗಿ ಹಾಗೂ ಆರ್ಥಿಕವಾಗಿ ಮುಂದುವರಿಯಲು ಕಳೆದ 64 ತಿಂಗಳಿಂದ ಪ್ರತಿ ತಿಂಗಳು "ಸೌಹಾರ್ದ ಸಹಕಾರಿಯ ಅರಿವು" ಎಂಬ ವಿನೂತನ ಕಾರ್ಯಕ್ರಮವನ್ನು ಇವರ ಅಧ್ಯಕ್ಷತೆಯಲ್ಲಿ ನಡೆಸುತ್ತಾ ಬಂದಿದ್ದಾರೆ. ವಿಶೇಷವಾಗಿ ಮಹಿಳೆಯರು ಹಾಗೂ ಯುವಕರು ಸೌಹಾರ್ದ ಸಹಕಾರಿಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗಿದ್ದಾರೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

**ಶ್ರೀಮತಿ ಬಿ.ಎನ್. ನಾಗಮಣಿ – ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು.**



**ಉದ್ಯೋಗ :** ಪ್ರಾರಂಭದಲ್ಲಿ ಶಾಲಾ ಶಿಕ್ಷಕಿಯಾಗಿ, ನಂತರ ಆರ್ಟ್ ಸಿಲ್ಕ್ ವೀವರ್ಸ್ ಕರ್ನಾಟಕ ರೀಜನಲ್ ಕಮಿಟಿಯಲ್ಲಿ ಹಾಗೂ ಸುಮಾರು 20 ವರ್ಷಗಳ ಕಾಲ ಕೇಂದ್ರ ಸರ್ಕಾರದ ಉದ್ದಿಮೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ನಲ್ಲಿ ಜನರಲ್ ಮ್ಯಾನೇಜರ್‌ರವರ ಆಪ್ತ ಸಹಾಯಕಿ ಆಗಿ ಸೇವೆ ಸಲ್ಲಿಸಿ, 1993ರಲ್ಲಿ ಸ್ವಯಂ ನಿವೃತ್ತಿ ಹೊಂದಿದ್ದಾರೆ.

**ಯಶಸ್ವಿನಿ ಮಹಿಳಾ ಸಹಕಾರಿ :** 1996ರಲ್ಲಿ ಸಮಾನ ಮನಸ್ಕ ಗೆಳತಿಯರ ಜೊತೆಗೂಡಿ ಯಶಸ್ವಿನಿ ಮಹಿಳಾ ಸಹಕಾರಿಯ ಸ್ಥಾಪನೆ. ಪ್ರಾರಂಭದಿಂದ ಇಲ್ಲಿಯವರೆಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಬಹುತೇಕ ನಿರ್ದೇಶಕರು ಮಲೆನಾಡಿನಿಂದ ಬೆಂಗಳೂರಿಗೆ ಬಂದ ಮಹಿಳೆಯರು. ಎರಡೂವರೆ ಲಕ್ಷ ಶೇರು ಧನ, 250 ಸದಸ್ಯರಿಂದ ಪ್ರಾರಂಭವಾದ ಸಹಕಾರಿ ಈಗ 3000ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ಒಟ್ಟು ವ್ಯವಹಾರ ರೂ. 35 ಕೋಟಿಗೂ ಮೀರಿದೆ. ಪ್ರಾರಂಭವಾದ ಎರಡನೇ ವರ್ಷದಿಂದ ಪ್ರತಿ ವರ್ಷ ಸದಸ್ಯರಿಗೆ ನಿರಂತರವಾಗಿ ಡಿವಿಡೆಂಡ್ ನೀಡುತ್ತಾ ಬಂದಿದೆ. ಪ್ರಾರಂಭದಲ್ಲಿ ತಿಂಗಳಿಗೆ ರೂ.300ರ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭವಾದ ಸಂಸ್ಥೆ 2016ರಲ್ಲಿ ಸುಮಾರು ಒಂದೂವರೆ ಕೋಟಿಯ ಸ್ವಂತ ಕಟ್ಟಡ ನಿರ್ಮಿಸಿ ಕಾರ್ಯ ನಿರ್ವಹಿಸುತ್ತಿದೆ.

ಸದಸ್ಯರಿಂದ ಠೇವಣಿ ಸಂಗ್ರಹ, ಸದಸ್ಯರಿಗೆ ಸಾಲ ಕೊಡುವುದರ ಜೊತೆಗೆ, ಆರೋಗ್ಯ ತಪಾಸಣಾ ಶಿಬಿರ, ಸಾಂಸ್ಕೃತಿಕ ಕಾರ್ಯಕ್ರಮ, ವ್ಯಕ್ತಿತ್ವ ವಿಕಸನ ಶಿಬಿರ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಹೊಲಿಗೆ ತರಗತಿ, ಯೋಗ ತರಗತಿಗಳನ್ನು ನಡೆಸುತ್ತಾ ಬಂದಿದೆ. ಕನ್ನಡ ಸಾಹಿತ್ಯ ಕ್ಷೇತ್ರ ಮತ್ತು ಸಂಗೀತ, ನೃತ್ಯ ಮುಂತಾದ ಲಲಿತಕಲಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವವರಲ್ಲಿ ತಲಾ ಇಬ್ಬರಿಗೆ "ಯಶಸ್ವಿನಿ ಸಾಹಿತ್ಯಕಲಾ ಪ್ರಶಸ್ತಿ", ರೂ. 5,000/– ಗೌರವಧನ ನೀಡಲಾಗುತ್ತಿದೆ.

ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಸಂಸ್ಥೆಯ ಕಾರ್ಯಶೀಲತೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರದ ಸಂಸ್ಥೆ ನ್ಯಾಷನಲ್ ಕೋ–ಆಪರೇಟಿವ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ನವರು ಕಡಿಮೆ ಬಡ್ಡಿದರದಲ್ಲಿ ಒಂದು ಕೋಟಿ ರೂಪಾಯಿಗಳ ಸಾಲ ನೀಡಿದ್ದಾರೆ. ಹೀಗೆ ಸಹಾಯ ಪಡೆದ ಕರ್ನಾಟಕದ ಮೊಟ್ಟ ಮೊದಲ ಮಹಿಳಾ ಸಹಕಾರಿ ಯಶಸ್ವಿನಿ.

| | | |
|---|---|---|
| **ಲಯನೆಸ್ ಇಂಟರ್ ನ್ಯಾಷನಲ್** | : | ಲಯನೆಸ್ ಕ್ಲಬ್ ಆಫ್ ಸದಾಶಿವನಗರದಲ್ಲಿ 1997 ರಿಂದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಣೆ. ಸರ್ಕಾರಿ ಶಾಲಾ ಮಕ್ಕಳಿಗೆ, ಅನಾಥಾಶ್ರಮ, ವೃದ್ಧಾಶ್ರಮ ಮುಂತಾದವುಗಳಿಗೆ ವಸ್ತು, ಧನ ಸಹಾಯ. ಅಂಧ ಮಕ್ಕಳಿಗೆ ನೇತ್ರದಾನ, ರಕ್ತದಾನ ಶಿಬಿರ. ಶಾಲಾ ಮಕ್ಕಳಿಗೆ ಸಮವಸ್ತ್ರ, ನೋಟ್ ಪುಸ್ತಕ/ ಪಠ್ಯಪುಸ್ತಕಗಳ ವಿತರಣೆ. |
| **ಗೃಹಲಕ್ಷ್ಮಿ ಗೃಹ ಸಮುಚ್ಛಯ** | : | ಗೃಹಲಕ್ಷ್ಮಿ ಗೃಹ ಸಮುಚ್ಛಯದಲ್ಲಿ ಹದಿನೈದು ವರ್ಷಗಳಿಂದ ಟ್ರೆಷರರ್ ಆಗಿ ಕಾರ್ಯ ನಿರ್ವಹಣೆ. |
| **ಸಹಕಾರ ಭಾರತಿ** | : | ಇತ್ತೀಚಿಗೆ ಸಹಕಾರ ಭಾರತಿ, ಕರ್ನಾಟಕ ಇದರ ಮಹಿಳಾ ವಿಭಾಗದ ರಾಜ್ಯಾಧ್ಯಕ್ಷೆಯಾಗಿ ಆಯ್ಕೆ. |
| **ಪ್ರಶಸ್ತಿಗಳು** | : | ಅತ್ಯುತ್ತಮ ಕಾರ್ಯದರ್ಶಿಯಾಗಿ ಎರಡು ಬಾರಿ ಪ್ರಶಸ್ತಿ.<br>ಜೀವಮಾನ ಸಾಧನೆ ಹಾಗೂ ಸಮಾಜ ಸೇವೆಗಾಗಿ ಬಡಗನಾಡು ಸಂಘ, ಬೆಂಗಳೂರು ಅವರಿಂದ ಪ್ರಶಸ್ತಿ.<br>ಮಲೆನಾಡು ಹೆಬ್ಬಾರ್ ಮಹಾಸಭಾ ಇವರಿಂದ ಬೆಂಗಳೂರು, ಮೈಸೂರು ಮತ್ತು ಶೃಂಗೇರಿಯಲ್ಲಿ ಸನ್ಮಾನ.<br>ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳಿಂದ ಗೌರವ. |

**ಶ್ರೀ ವೆಂಕಟೇಶ್ ಎಂ.ಎಸ್. – ಮಯೂರ ಸೌಹಾರ್ದ ಪತ್ತಿನ ಸಹಕಾರಿ ನಿ., ಸಾಗರ, ಶಿವಮೊಗ್ಗ.**



**Name And Address :** Venkatesh M.S., S/o Subramanyappa "Devasenaa", Near Bhoopalam School, SPM Road, Shivamogga

**Age :** 71 years

**Education :** Graduate in BSC

- Worked in Corporation Bank for 30 years. Got VRS in 2003 as a managaer.
- Established and commenced Mayura Souharda Credit Co-operative Ltd., in 2003.
- President of the Souharda Co-operative from 2003.
- Working as State Chairman of Vanavasi Kalyana in Karnataka.
- Now external director of Sahyadri Souharda Okkuta, Shivamogga.
- Interested and involved in economic activities of the Co-operative along with social and family oriented service.
- Conducted programs like Kutumba Milana, Mane Maddu and economic and other cultural programs

**ಶ್ರೀ ಮಲ್ಲಿಕಾರ್ಜುನ ಪಾಟೀಲ – ಚಿಟಗುಪ್ಪಾ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಟಗುಪ್ಪಾ, ಹುಮಾನಾಬಾದ್, ಬೀದರ.**



| | | |
|---|---|---|
| NAME | : | **MALLIKARJUN H PATIL** |
| FATHER NAME & OCCUPATION | : | HANMANTRAO PATIL & AGRICULTURE |
| MOTHER NAME & OCCUPATION | : | VIDYAWATI H PATIL & HOUSE HOLD |
| WIFE NAME & OCCUPATION | : | SANGEETA M PATIL & HOUSE HOLD |
| ADDRESS | : | HOUSING BOARD COLONY, CHITGUPPA-585412, DIST : BIDAR |
| EDUCATION | : | (B.Sc.) |
| DATE OF BIRTH | : | 04/04/1969 |
| FAMILY MEMBERS | : | TWO ELDER BROTHERS & ONE ELDER SISTER<br>TWO SONS : ATISH M PATIL IN PUC 2ND Yr<br>NITISH M PATIL IN 7TH STD |
| OCCUPATION | : | AGRICULTURE & BUSINESS |
| ACTIVITIES | : | PRESIDENT, CHITGUPPA PATTINA SOUHARDA SAHAKARI NIYAMIT, CHITGUPPA |
| | : | TREASURER, ARUNODAYA EDUCATION SOCEITY (RUNNING A SCHOOL) |
| | : | PRESIDENT, KARNATAKA EDUCATION & RURAL DEVELOPMENT SOCEITY R (NGO). (FCRA REGN. 12AA) IN THIS NGO CAPART SCHEMES, NYK SCHEMES, SJSRY SCHEMS SO MANY SCHEMES ARE FACILIATED. |
| | : | COUNCELLOR TMC CHITGUPPA |

## 64ನೇ ಅಖಿಲ ಭಾರತ ಸಹಕಾರ ಸಪ್ತಾಹ–2017
## ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ ಪುರಸ್ಕೃತ ಸೌಹಾರ್ದ ಸಹಕಾರಿ ಸಂಸ್ಥೆಗಳು

**ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ, ಕೊಪ್ಪಳ ಜಿಲ್ಲೆ.**



ಶ್ರೀ ಹೆಚ್. ಪ್ರಭಾಕರ
ಅಧ್ಯಕ್ಷರು



ಶ್ರೀ ಸುಧಾಕರ ಕಲ್ಮನಿ
ಮುಖ್ಯಕಾರ್ಯನಿರ್ವಾಹಕರು

1991ರ ನಂತರ ಜಾಗತೀಕರಣದ ಪ್ರಭಾವಳಿಯಿಂದ ಆರ್ಥಿಕ ಚಟುವಟಿಕೆಗಳು ಗರಿಗೆದರಿದವು. ಬಡವರ, ಶ್ರೀಸಾಮಾನ್ಯರ, ಮಧ್ಯಮ ವರ್ಗದವರ ಅಗತ್ಯಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು ತ್ವರಿತ ಗತಿಯಲ್ಲಿ ಸ್ಪಂದಿಸಲಿಲ್ಲ. ಈ ಹಿನ್ನೆಲೆಯಲ್ಲಿ ಸಮಾನ ಮನಸ್ಕರೊಡನೆ ಸೇರಿ, ಸದಸ್ಯರ ಸರ್ವತೋಮುಖ ಅಭ್ಯುದಯದ ಬೇಡಿಕೆಯನ್ನು ಈಡೇರಿಸಲು ಗಂಗಾವತಿ ನಗರದಲ್ಲಿ ಪ್ರಪ್ರಥಮ ಬಾರಿಗೆ 2000ನೇ ಇಸವಿಯಲ್ಲಿ ರೂ. 4.50 ಲಕ್ಷ ಶೇರು ಬಂಡವಾಳದಿಂದ 'ಶ್ರೀ ಗಂಗಾಧರೇಶ್ವರ ಪತ್ತಿನ ಸಹಕಾರ ಸಂಘ'ವನ್ನು ಹುಟ್ಟು ಹಾಕಲಾಯಿತು. ಜಿಲ್ಲೆಯಲ್ಲಿ ಮೊದಲ ಬಾರಿಗೆ ಸಂಪೂರ್ಣ ಗಣಕೀಕರಣಗೊಂಡ ಸಹಕಾರಿ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ಅವಿರತ ಶ್ರಮದಿಂದ, ಆಡಳಿತದಲ್ಲಿ ಪಾರದರ್ಶಕತೆ ಅಳವಡಿಸಿಕೊಂಡು ಪ್ರಗತಿಯತ್ತ ದಾಪುಗಾಲು ಹಾಕಿತು. ಉದಾರೀಕರಣದಿಂದ ಬದಲಾದ ಆರ್ಥಿಕ ಅಗತ್ಯಗಳಿಗೆ ಅನುಗುಣವಾಗಿ ಸದಸ್ಯರಿಗೆ ಹೆಚ್ಚಿನ ಅಧಿಕಾರ ನೀಡುವ ಉದ್ಧೇಶದಿಂದ ದಿನಾಂಕ 11–01–2002ರಲ್ಲಿ ಸಹಕಾರಿಯು ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತನೆಗೊಂಡು, ಶ್ರೀ ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಆಗಿ ಬದಲಾವಣೆ ಹೊಂದಿತು.

ಸಹಕಾರಿಯು 2016–17ನೇ ಸಾಲಿನ ಅಂತ್ಯಕ್ಕೆ ರೂ. 18.87 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸುಮಾರು ರೂ. 10.62 ಕೋಟಿ ಸಾಲವನ್ನು ತನ್ನ ಸದಸ್ಯರಿಗೆ ವಿತರಿಸಿರುತ್ತದೆ.

ಅಲ್ಲದೇ, ಸಹಕಾರಿಯು ರೂ. 5.40 ಕೋಟಿ ಕಾಯ್ದಿಟ್ಟ ನಿಧಿಗಳನ್ನು ಹೊಂದುವ ಮೂಲಕ ಆರ್ಥಿಕ ಸದೃಢತೆಯನ್ನು ಸಾಧಿಸಿ, ನಿರಂತರ ಪ್ರಗತಿಯತ್ತ ಸಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ರೂ. 62.11 ಲಕ್ಷ ನಿವ್ವಳ ಲಾಭ ಹೊಂದಿ, ಸದಸ್ಯರಿಗೆ ಶೇ.15 ರಷ್ಟು ಡಿವಿಡೆಂಡ್ ನೀಡುತ್ತಿದೆ.

## ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹುಲ್ಲೋಳ್ಳಿ, ಬೆಳಗಾವಿ ಜಿಲ್ಲೆ.



ಶ್ರೀ ಮಾಯಪ್ಪಾ ಹೋ ಹೊಳೆಪ್ಪಗೋಳ, ಅಧ್ಯಕ್ಷರು



ಶ್ರೀ ಆನಂದ ಭೂ. ಚೌಗಲಾ ಮುಖ್ಯಕಾರ್ಯನಿರ್ವಾಹಕರು

ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹುಲ್ಲೋಳ್ಳಿ ಸಹಕಾರಿಯು ದಿನಾಂಕ : 19.07.1999 ಸ್ಥಾಪನೆಯಾಗಿದ್ದು, ದಿನಾಂಕ : 08.10.2004ರಂದು ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತನೆಗೊಂಡಿದೆ. 300 ಸದಸ್ಯರಿಂದ 2 ಲಕ್ಷ ಶೇರು ಬಂಡವಾಳದಿಂದ ಹುಲ್ಲೋಳ್ಳಿ ಎಂಬ ಚಿಕ್ಕ ಗ್ರಾಮದಲ್ಲಿ ಶ್ರೀ ರವೀಂದ್ರ ಚಂ ಚೌಗಲಾ ಹಾಗೂ ಸಮಾನ ಮನಸ್ಕರಿಂದ ಪ್ರಾರಂಭವಾಯಿತು.

ಸದಸ್ಯರ ಸಹಕಾರ ಹಾಗೂ ವಿಶ್ವಾಸದಿಂದ ಸಹಕಾರಿಯು ಪ್ರತಿ ವರ್ಷ ಪ್ರಗತಿ ಹೊಂದಿತು. ಸದಸ್ಯರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡ ಸಹಕಾರಿ ಸಂಸ್ಥೆಯಾಗಿದೆ. ಈ ನಿಟ್ಟಿನಲ್ಲಿ ಸದಸ್ಯರಿಗೆ, ಕೂಲಿ ಕಾರ್ಮಿಕರಿಗೆ, ಬಡ ರೈತಾಪಿ ವರ್ಗಕ್ಕೆ, ಚಿಕ್ಕ ವ್ಯಾಪಾರಸ್ಥರಿಗೆ, ಮಹಿಳೆಯರಿಗೆ, ದುರ್ಬಲ ವರ್ಗದವರಿಗೆ, ಅತೀ ಕಡಿಮೆ ಬಡ್ಡಿದರಗಳಲ್ಲಿ (13% & 14%) ಸಾಲ ನೀಡುತ್ತಾ ಅವರ ಅಭಿವೃದ್ಧಿಗೆ ಕಾರಣವಾಗಿದೆ. ಸತತವಾಗಿ 5 ವರ್ಷ 25% ಲಾಭಾಂಶ ಹಂಚುತ್ತಿದೆ. ಸಹಕಾರಿಯು ಸಂಪೂರ್ಣ ಗಣಕೀಕೃತವಾಗಿದೆ.

ಸಹಕಾರಿಯು 6 ಶಾಖೆಗಳನ್ನು ಹೊಂದಿರುತ್ತದೆ. 4 ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಿರುತ್ತದೆ. ಭದ್ರತೆ ದೃಷ್ಟಿಯಿಂದ ಸ್ಟ್ರಾಂಗ್ ರೂಮ್‌ಗಳು, ಸೈರನ್ ವ್ಯವಸ್ಥೆ, ವಾಚ್‌ಮನ್‌ಗಳು, ಸಿಸಿ ಕ್ಯಾಮರಾ ಅಳವಡಿಕೆ ಮಾಡಲಾಗಿದೆ. ನಯನ ಮನೋಹರ ಗಾರ್ಡನ್ ಹೊಂದಿದೆ. ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ 90%ಕ್ಕಿಂತ ಹೆಚ್ಚಿಗೆ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಲಾಗುತ್ತಿದೆ. ಅಂಗ ಸಂಸ್ಥೆಯಾಗಿ ಅರಿಹಂತ ಶಿಕ್ಷಣ ಹಾಗೂ ಸಮಾಜ ಸೇವಾ ಸಂಸ್ಥೆಯ ಅರಿಹಂತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದೆ. ಸಹಕಾರಿಯು ಎಲ್‌ಕೆಜಿ ಯಿಂದ ಎಂಟನೇ ತರಗತಿವರೆಗೆ ಇದ್ದು, ಸುಮಾರು 450 ಬಡ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅಂಗ ಸಂಸ್ಥೆಯಾಗಿ ಹುಲ್ಲೋಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವನ್ನು ಹೊಂದಿದ್ದು, ಪ್ರತಿದಿನ 500 ಲೀಟರ್ ಗುಣಮಟ್ಟದ ಹಾಲನ್ನು ಕೆಎಂಎಫ್‌ಗೆ ಕಳುಹಿಸುತ್ತಿದೆ. ಅಲ್ಲಿ ಹೈನುಗಾರಿಕೆ ಪ್ರೋತ್ಸಾಹಿಸಲು ಕಡಿಮೆ ಬಡ್ಡಿ ದರದಲ್ಲಿ ಎಮ್ಮೆ/ ಹಸು ಖರೀದಿಸಲು ಸಹಕಾರಿಯಿಂದ ಸಾಲ ನೀಡಿ ಗ್ರಾಮದಲ್ಲಿ ಸಹಕಾರಿಯು ಮನೆ ಮಾತಾಗಿದೆ.

## ಹಿರೇಕೇರೂರು ತಾಲ್ಲೂಕು ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿ. ಹಿರೇಕೇರೂರು, ಹಾವೇರಿ ಜಿಲ್ಲೆ.



ಶ್ರೀ ಎಸ್.ಬಿ. ತಿಪ್ಪಣ್ಣನವರ್ ಅಧ್ಯಕ್ಷರು



ಶ್ರೀ ಎಸ್.ಎಸ್. ಪಾಟೀಲ್ ಮುಖ್ಯಕಾರ್ಯನಿರ್ವಾಹಕರು

ಸಹಕಾರಿ ತತ್ವದ ತಳಹದಿಯ ಮೇಲೆ ಸಹಕಾರದ ಮೂಲ ಆಶಯದಂತೆ ಗ್ರಾಮಾಂತರ ಪ್ರದೇಶದ ಮಕ್ಕಳ ಶಿಕ್ಷಣದ ಅಭಿವೃದ್ಧಿಗಾಗಿ 1952ರಲ್ಲಿ ಡಿ.ಆರ್.ತಂಬಾಕದ ಬಾಲಕರ ಪ್ರೌಢಶಾಲೆಯನ್ನು ಹಿರೇಕೇರೂರಿನಲ್ಲಿ ಪ್ರಾರಂಭಿಸಿತು. ಹಿರೇಕೇರೂರ ತಾಲ್ಲೂಕಾ ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿ., ಹಿರೇಕೇರೂರ ಸಹಕಾರಿ ಸಂಸ್ಥೆಯು ಪ್ರಗತಿ ಪಥದಲ್ಲಿ ದಾಪುಗಾಲನ್ನಿಡುತ್ತಾ 60 ವಸಂತಗಳನ್ನು ಪೂರೈಸಿ, ವಜ್ರ ಮಹೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿದೆ. ಉತ್ತರ ಕರ್ನಾಟಕದ ಹೆಬ್ಬಾಗಿಲಾದ ಹಾವೇರಿ ಜಿಲ್ಲೆಯ ಸರ್ವಜ್ಞನ ಜನಿಸಿದ ಪುಣ್ಯ ಭೂಮಿಯಾದ ಹಿರೇಕೇರೂರು ತಾಲ್ಲೂಕಿನಲ್ಲಿ ಮುಂಬೈ ಸಹಕಾರಿ ಸಂಘಗಳ ಕಾನೂನಿನ ಪ್ರಕಾರ ದಿನಾಂಕ 28–04–1952ರಂದು ಈ ಸಹಕಾರಿ ಸಂಸ್ಥೆ ಉದಯಿಸಿತು. ಅಂದು ನೆಟ್ಟ ಈ ಪುಟ್ಟ ಸಸಿ ಗಿಡವಾಗಿ, ಹೆಮ್ಮರವಾಗಿ ಇಂದು ತನ್ನ ರೆಂಬೆಕೊಂಬೆಗಳನ್ನು ವಿಸ್ತಾರವಾಗಿ ಹರಡಿದೆ. ತಾಲ್ಲೂಕಿನ ಶ್ರಮಿಕ ಹಾಗೂ ಬಡ ಮಕ್ಕಳಿಗೆ ವಿದ್ಯಾರ್ಜನೆ ನೀಡಬೇಕೆಂಬ ಧ್ಯೇಯೋದ್ಧೇಶವನ್ನು ಹೊತ್ತು ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.

ಆರಂಭದ ಕಾಲದಲ್ಲಿ ಕೇವಲ 13 ವಿದ್ಯಾರ್ಥಿಗಳು ಪ್ರವೇಶ ಪಡೆದು, ಹಂತ ಹಂತವಾಗಿ ಬೆಳೆಯುತ್ತಾ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಸಹಕಾರಿ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣಗೊಳ್ಳುತ್ತಾ ಹೋದಂತೆ ಬಾಲಕಿಯರಿಗಾಗಿ ಪ್ರತ್ಯೇಕ ಪ್ರೌಢಶಾಲೆಯನ್ನು ಹಿರೇಕೇರೂರಿನಲ್ಲಿ ಪ್ರಾರಂಭಿಸಲಾಯಿತು. ತಾಲ್ಲೂಕಿನ ದೂರದ ಗ್ರಾಮಗಳಿಂದ ಕೇಂದ್ರ ಸ್ಥಾನಕ್ಕೆ ವಿದ್ಯಾಭ್ಯಾಸಕ್ಕಾಗಿ ಅರಸಿ ಬರುತ್ತಿರುವ ವಿದ್ಯಾರ್ಥಿಗಳ ತೊಂದರೆಯನ್ನರಿತು ಈ ಸಹಕಾರಿ ಸಂಸ್ಥೆಯು ತಾಲ್ಲೂಕಿನ 3 ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಬೇಕೆಂದು ನಿರ್ಣಯಿಸಿ, ತಾಲ್ಲೂಕಿನ ಚಿಕ್ಕಕಬಾರ, ಹೊಸಳ್ಳಿ ಹಾಗೂ ಆಲದಗೇರಿ ಗ್ರಾಮಗಳಲ್ಲಿ ಪ್ರಾರಂಭಿಸಿ, ಆ ಪ್ರದೇಶದ ಮಕ್ಕಳಗೆ ಶಿಕ್ಷಣ ಪಡೆಯುವಂತಹ ಅವಕಾಶ ಕಲ್ಪಿಸಿಕೊಟ್ಟಿತು.

**ಕೆ.ಎಚ್.ಪಾಟೀಲ ಪದವಿ ಪೂರ್ವ ಮಹಾವಿದ್ಯಾಲಯ :** ತಾಲೂಕಿನ ಮಕ್ಕಳು ಪ್ರೌಢಶಿಕ್ಷಣ ಪಡೆದು ಪದವಿ ಪೂರ್ವ ಶಿಕ್ಷಣ ಪಡೆಯಲು ಅವಕಾಶಗಳಿಲ್ಲದೇ ಅದು ಅವರ ಕನಸಾಗಿಯೇ ಉಳಿಯುತ್ತಿತ್ತು. ಅಂತಹ ಸ್ಥಿತಿಯನ್ನರಿತು, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಒದಗಿಸುವ ಉದ್ಧೇಶದಿಂದ, 1972ರ ನಂತರ ಈ ಸಂಸ್ಥೆಯ ಆಡಳಿತ ಚುಕ್ಕಾಣಿ ಹಿಡಿದು ಸಂಸ್ಥೆಯನ್ನು ಉತ್ತುಂಗಕ್ಕೇರಿಸುವ ಬಯಕೆಯನ್ನು ಹೊತ್ತು, ದೂರದೃಷ್ಠಿಯಿಂದ ಕಾರ್ಯನಿರ್ವಹಿಸಿದ ಶ್ರೀ ಎಸ್. ಎಸ್.ಪಾಟೀಲರವರ ಅವಿರತ ಪ್ರಯತ್ನದ ಫಲವಾಗಿ 1972ರಲ್ಲಿ ಪದವಿ ಪೂರ್ವ ಮಹಾವಿದ್ಯಾಲಯವನ್ನು ಹಿರೇಕೇರೂರಿನಲ್ಲಿ ಪ್ರಾರಂಭಿಸಲಾಯಿತು.

ವಿಶೇಷವಾಗಿ ಪದವಿ ಪೂರ್ವ ಮಹಾವಿದ್ಯಾಲಯದ ವಿಜ್ಞಾನ ವಿಭಾಗವು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ್ದು, ಫಲಿತಾಂಶದಲ್ಲಿಯೂ ಪ್ರಥಮ ಸ್ಥಾನದಲ್ಲಿ ತನ್ನ ಶ್ರೇಣಿಯನ್ನು ಉಳಿಸಿಕೊಂಡು ಇಂದಿಗೂ ಸಹ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ನೂರಾರು ವಿದ್ಯಾರ್ಥಿಗಳು ವೈದ್ಯರು ಹಾಗೂ ಇಂಜಿನಿಯರುಗಳಾಗಿ ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಐ.ಎ.ಎಸ್. ಮತ್ತು ಕೆ.ಎ.ಎಸ್. ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದು ದೇಶದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುವಂತಹ ಮಹನೀಯರನ್ನು ಈ ನಾಡಿಗೆ ನೀಡಿದ್ದು, ಸ್ಮರಣೀಯ ಹಾಗೂ ಈ ಸಂಸ್ಥೆಯ ವಿಶೇಷವಾಗಿದೆ.

**ಪ್ರಥಮ ದರ್ಜೆ ಮಹಾವಿದ್ಯಾಲಯ ಸ್ಥಾಪನೆ :** ತಾಲ್ಲೂಕಿನ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯುವುದು ಗಗನ ಕುಸುಮವಾಗಿತ್ತು ಹಾಗೂ ಶ್ರೀಮಂತರು ದೂರದ ಧಾರವಾಡ ಇನ್ನಿತರ ಪಟ್ಟಣಗಳಲ್ಲಿ ಉನ್ನತ ಶಿಕ್ಷಣ ಪಡೆಯಬೇಕಾಗಿತ್ತು. ತಾಲ್ಲೂಕಿನಲ್ಲಿ ಪದವಿ ಪಡೆದವರ ಸಂಖ್ಯೆ ಕೇವಲ ಬೆರಳೆಣಿಕೆಯಾಗಿಯೇ ಉಳಿದಿತ್ತು. ಈ ಭಾಗದ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಬೇಕೆಂಬ ಛಲ ಪಾಲಕರಿಗೆ ಕಲ್ಪಿಸಬೇಕೆಂಬ ಆಸೆ ಇದ್ದರೂ ಸಹ ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದನ್ನು ಮನಗಂಡು ತಾಲ್ಲೂಕಿನ ಮಕ್ಕಳ ಉನ್ನತ ಶಿಕ್ಷಣ ಜ್ಞಾನ ದಾಹ ನೀಗಿಸಲು 1992ರಲ್ಲಿ ಬಿ.ಆರ್.ತಂಬಾಕದ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ಆರಂಭದಲ್ಲಿ ಕಲಾ, ವಾಣಿಜ್ಯ ವಿಭಾಗಗಳನ್ನು ಪ್ರಾರಂಭಿಸಿ, ಮುಂದೆ ವಿಜ್ಞಾನ ವಿಭಾಗದ ಅನಿವಾರ್ಯತೆಯನ್ನರಿತು, ಅದನ್ನು ಪ್ರಾರಂಭಿಸಲಾಯಿತು. ಇದರಿಂದ ತಾಲ್ಲೂಕಿನ ಮಕ್ಕಳು ಪದವಿ ಶಿಕ್ಷಣವನ್ನು ಪಡೆಯುವ ಭಾಗ್ಯ ಕಲ್ಪಿಸಿಕೊಡಲಾಯಿತು.

ಕೇವಲ 63 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಮಹಾವಿದ್ಯಾಲಯ, ಇಂದು 1218 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಮಹಾವಿದ್ಯಾಲಯವು ಬೃಹತ್ ಕಟ್ಟಡ, ಸುಸಜ್ಜಿತ ಗ್ರಂಥಾಲಯ ಹಾಗೂ ಪ್ರಯೋಗಾಲಯಗಳನ್ನು ಹೊಂದಿ ಸರಕಾರದ, ವಿಶ್ವವಿದ್ಯಾಲಯದ ಹಾಗೂ ಕೇಂದ್ರ ಸರಕಾರದ ನ್ಯಾಕ್ ಸಮಿತಿಯ ನಿಯಮಾವಳಿಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಿ ರಾಜ್ಯದಲ್ಲಿಯೇ “ಬಿ++” ಗ್ರೇಡ್ ಪಡೆದ ಏಕೈಕ ಅನುದಾನ ರಹಿತ ಮಹಾವಿದ್ಯಾಲಯವಾಗಿ ಹೊರಹೊಮ್ಮಿದೆ.

**ಡಿ.ಇಡಿ. ಹಾಗೂ ಬಿ.ಇಡಿ. ಮಹಾವಿದ್ಯಾಲಯಗಳ ಸ್ಥಾಪನೆ :** ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಗೆ ಅನುಗುಣವಾಗಿ ಡಿ.ಇಡಿ. ಹಾಗೂ ಬಿ.ಇಡಿ. ತರಬೇತಿ ಮಹಾವಿದ್ಯಾಲಯಗಳು ಗ್ರಾಮೀಣ ಪ್ರದೇಶದ ಈ ಭಾಗದ ಮಕ್ಕಳಿಗೆ ಅನಿವಾರ್ಯವೆನಿಸಿದಾಗ ಸರಕಾರದಿಂದ ಹಾಗೂ ವಿಶ್ವವಿದ್ಯಾಲಯಗಳಿಂದ ಕಠಿಣ ಕರಾರುಗಳಿದ್ದರೂ ಸಂಸ್ಥೆಯು ಅವೆಲ್ಲವುಗಳನ್ನು ಪೂರೈಸಿ, ಶಿಕ್ಷಣ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಮುಂದಾಯಿತು. ಸಂಸ್ಥೆಯ ಮೇಲೆ ಸದಾ ಶ್ರೀರಕ್ಷೆ ಇರುವ ಶ್ರೀ ತರಳಬಾಳು ಜಗದ್ಗುರುಗಳ ಹೆಸರಿನಲ್ಲಿ ಶ್ರೀ ತರಳಬಾಳು ಜಗದ್ಗುರು ಶಿಕ್ಷಣ ಮಹಾವಿದ್ಯಾಲಯ ಹಾಗೂ ಶ್ರೀ ತರಳಬಾಳು ಜಗದ್ಗುರು ಡಿ.ಇಡಿ. ವಿದ್ಯಾಲಯಗಳನ್ನು 2004–05ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲಾಯಿತು. ತರಳಬಾಳು ಕೈಗಾರಿಕಾ ತರಬೇತಿ ಕೇಂದ್ರವನ್ನು 2012ರಲ್ಲಿ ಪ್ರಾರಂಭಿಸಿ ಈ ಭಾಗದ ವಿದ್ಯಾರ್ಥಿಗಳ ಔದ್ಯೋಗಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು.

**ನರ್ಸರಿ – ಎಲ್.ಕೆ.ಜಿ. – ಯು.ಕೆ.ಜಿ. – ಶಾಲೆಗಳ ಉದಯ :** ಪ್ರಸ್ತುತ ದಿನಮಾನಗಳಲ್ಲಿ ಶಿಶುವು ತಾಯಿ ಗರ್ಭದಲ್ಲಿರುವಾಗಲೇ ಮಗುವಿಗೆ ಶಿಕ್ಷಣ ನೀಡಬೇಕೆಂಬ ಹಂಬಲದಲ್ಲಿರುವ ಸಂದರ್ಭದಲ್ಲಿ ಪುಟ್ಟ ಮಕ್ಕಳಿಗಾಗಿ, ಪಾಲಕರ, ರೈತರ, ಕೂಲಿಕಾರ್ಮಿಕರ ಅಪೇಕ್ಷೆಯ ಮೇರೆಗೆ, ಈ ಪುಟ್ಟ ಮಕ್ಕಳ ಮನಸ್ಸಿನ ಇಂಗಿತವನ್ನು ಅರಿತು ಮಮತೆಯಿಂದ ಶಿಕ್ಷಣ ನೀಡುವ ಗುರುಮಾತೆಯರನ್ನು ಆಯ್ಕೆ ಮಾಡಿಕೊಳ್ಳುವುದು ಕಷ್ಟ ಸಾಧ್ಯವಾದರೂ ರಾಜ್ಯದ ನಾನಾ ಭಾಗಗಳಿಂದ ನುರಿತ ಶಿಕ್ಷಕಿಯರನ್ನು ಆಯ್ಕೆ ಮಾಡಿಕೊಂಡು, ಈ ತಾಲ್ಲೂಕಿನ ಪಾಲಕರ ಉದ್ದೇಶವನ್ನು ಈಡೇರಿಸುವಲ್ಲಿ ಯಶಸ್ವಿಯಾಗಿದೆ.

ಜಿಲ್ಲೆಯಲ್ಲಿಯೇ ಉರ್ದು ಭಾಷೆಯ ಶಿಕ್ಷಣವನ್ನು ಈ ಸಂಸ್ಥೆಯು ಪ್ರಾರಂಭ ಮಾಡಲಾಗಿದೆ ಇದು ವಿಶೇಷ.

**ಸಂಸ್ಥೆ ಹೊಂದಿರುವ ಮೂಲಭೂತ ಸೌಕರ್ಯಗಳು :** ಈ ಸಹಕಾರಿ ಸಂಸ್ಥೆಯು ನರ್ಸರಿಯಿಂದ ಪದವಿ ಹಂತದವರೆಗೆ ಶಿಕ್ಷಣ ನೀಡುವಲ್ಲಿ ಮುಂದಾದಾಗ ಅದಕ್ಕೆ ಪೂರಕವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯು ತಾನು ಹೊಂದಿರುವ ಸಾಂಪತ್ತಿಕ ಸ್ಥಿತಿಯಲ್ಲಿಯೇ ಬೃಹತ್ ಕಟ್ಟಡಗಳನ್ನು, ವಿಶಾಲವಾದ ಆಟದ ಮೈದಾನಗಳನ್ನು, ನೂರಾರು ವಿದ್ಯಾರ್ಥಿಗಳಿಗೆ ಏಕಕಾಲಕ್ಕೆ ಅಧ್ಯಯನಕ್ಕೆ ಅನುಕೂಲವಾದ ಬೃಹತ್ ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್‌ಗಳು, ಸುಸಜ್ಜಿತ ಪ್ರಯೋಗಾಲಯ, ಸುಂದರವಾದ ಉದ್ಯಾನವನ, ವಿಶಾಲವಾದ ಕ್ರೀಡಾಂಗಣ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತ ಶೌಚಾಲಯ, ಮೂತ್ರಾಲಯಗಳನ್ನು ಕಾಲಕ್ಕೆ ತಕ್ಕಂತೆ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದೆ. ಇವೆಲ್ಲವುಗಳನ್ನು ಸಂಸ್ಥೆ ಪೂರೈಸಿದ್ದು, ಜಿಲ್ಲೆಯಲ್ಲಿಯೇ ಮಾದರಿ ಶಿಕ್ಷಣ ನೀಡುವ ಸಂಸ್ಥೆಯಾಗಿ ಈ ಭಾಗದ ಜ್ಞಾನ ದೇಗುಲವಾಗಿ, ಜಾತಿ–ಮತ ಪಂಥಗಳನ್ನು ಮೀರಿ ಸರ್ವರಿಗೂ ಶಿಕ್ಷಣ ನೀಡುವಂತಹ ಸಹಕಾರಿ ತತ್ವದ ತಳಹದಿಯ ಮೇಲೆ ವಿದ್ಯಾರ್ಥಿಗಳಿಗೆ ಉಣಬಡಿಸುವ ಜ್ಞಾನ ದಾಸೋಹವೇ ಸೌಭಾಗ್ಯವೆಂದು ಭಾವಿಸಿಕೊಂಡು ನಿಸ್ಪೃಹವಾಗಿ ಈ ಸಹಕಾರಿ ಸಂಸ್ಥೆ ಬೆಳೆದು ಬಂದಿದೆ.

## ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಜಿಲ್ಲೆ.



ಶ್ರೀ ನಿತ್ಯಾನಂದನಾಯಕ
ಅಧ್ಯಕ್ಷರು



ಶ್ರೀ ಪ್ರದೀಪ
ಮುಖ್ಯಕಾರ್ಯನಿರ್ವಾಹಕರು

ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯು ದಿನಾಂಕ : 07.11.2011ರಂದು ಕೈವಲ್ಯ ಮಹಾಸಂಸ್ಥಾನ ಕವಳೆಂ ಗೋವಾ ಇದರ ಪೀಠಾಧಿಪತಿಯಾದ ಶ್ರೀ ಶ್ರೀ ಶ್ರೀ ಶಿವಾನಂದ ಸರಸ್ವತಿ ಸ್ವಾಮಿ ಮಹಾರಾಜ್‌ರವರ ದಿವ್ಯ ಕರಕಮಲಗಳಿಂದ ಉದ್ಘಾಟಿಸಲ್ಪಟ್ಟಿತು. ಸಹಕಾರಿ ಬಂಧುಗಳ ಹಾಗೂ ಗ್ರಾಮಸ್ಥರ ಅಭಿಲಾಷೆಯಂತೆ ‘ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿ ವಿವಿದೋದ್ದೇಶದ ಸಹಕಾರಿಯನ್ನು ಸ್ಥಾಪಿಸಬೇಕೆನ್ನುವ ಉದ್ದೇಶದಿಂದ ನಡೆದ ಪ್ರಯತ್ನದ ಫಲವಾಗಿ ಮತ್ತು ಜಿಲ್ಲಾ ಕೇಂದ್ರದ ಉಡುಪಿಯಲ್ಲಿ ಸ್ಥಾಪಿಸಬೇಕೆನ್ನುವ ಕೋರಿಕೆಯ ಮೇರೆಗೆ ಉಡುಪಿಯಲ್ಲಿ ಕಾರ್ಯಪ್ರವೃತ್ತವಾಗಿದೆ. ಹೊಸ ನಿರ್ಮಾಣದ ಕನಸನ್ನು ಹೊತ್ತು ವಿವಿಧ ಉದ್ದೇಶಗಳ ಸಾಫಲ್ಯತೆಗಾಗಿ “ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ” ಪ್ರಾರಂಭವಾಗಿದೆ.

**ಸಹಕಾರಿ ಸಂಸ್ಥೆಯ ಆಡಳಿತ ಮಂಡಲಿ ಸದಸ್ಯರು :** ಶ್ರೀ ನಿತ್ಯಾನಂದ ನಾಯಕ್, ಶ್ರೀ ಮಧುಸೂದನ ನಾಯಕ್, ಶ್ರೀ ರಮಾನಾಥ್ ನಾಯಕ್, ಶ್ರೀ ವಸಂತ ಕುಮಾರ್, ಶ್ರೀ ದೇವದಾಸ ಪ್ರಭು, ಶ್ರೀ ಎ. ಸತ್ಯಾನಂದ ನಾಯಕ್, ಶ್ರೀ ರಮಾನಂದ ನಾಯಕ್, ಶ್ರೀ ಸದಾನಂದ ನಾಯಕ್, ಶ್ರೀ ಸುಂದರ ಪ್ರಭು, ಶ್ರೀ ಸುದರ್ಶನ್ ನಾಯಕ್, ಶ್ರೀ ವಿವೇಕಾನಂದ ನಾಯಕ್.

## ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ., ಬೆಂಗಳೂರು ಜಿಲ್ಲೆ.



ಶ್ರೀ ಎಂ. ಮುನಿರೆಡ್ಡಿ
ಅಧ್ಯಕ್ಷರು



ಶ್ರೀ ನಾಗೇಶ್
ಮುಖ್ಯಕಾರ್ಯನಿರ್ವಾಹಕರು

**ಸದಸ್ಯ ಸ್ನೇಹಿ ಮತ್ತು ಸಮಾಜಮುಖಿ ಕಾರ್ಯಗಳಲ್ಲಿ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಮಹತ್ವದ ಕೊಡುಗೆ.**

ಸಹಕಾರಿ ಸದಸ್ಯರಲ್ಲಿ ಮಿತವ್ಯಯ, ಸ್ವಸಹಾಯ ಹಾಗೂ ಸಹಕಾರ ಭಾವನೆಯನ್ನು ಪ್ರೋತ್ಸಾಹಿಸುವುದೂ ಸೇರಿದಂತೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಸಮಾಜಮುಖಿ ಕಾರ್ಯಗಳನ್ನು ಮಾಡುವ ಉತ್ತಮ ಉದ್ದೇಶಗಳನ್ನಿಟ್ಟುಕೊಂಡು 2010ರಲ್ಲಿ ಯಲಹಂಕ ಉಪನಗರದಲ್ಲಿ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಆರಂಭವಾಯಿತು.

ಆರಂಭದಲ್ಲಿ 1809 ಸದಸ್ಯರಿಂದ ರೂ. 40.92 ಲಕ್ಷ ಶೇರು ಬಂಡವಾಳದೊಂದಿಗೆ ಸ್ಥಾಪನೆಯಾದ ಸಹಕಾರಿಯು, 7 ವರ್ಷದ ಅಂತರದಲ್ಲಿ ಪ್ರಸ್ತುತ 3865 ಸದಸ್ಯರನ್ನು ಹೊಂದಿದ್ದು, 2016–17ನೇ ಆರ್ಥಿಕ ಸಾಲಿನ ಅಂತ್ಯಕ್ಕೆ 208 ಲಕ್ಷಗಳಷ್ಟು ಶೇರು ಬಂಡವಾಳವನ್ನು ಹೊಂದಿರುವುದು ಸಹಕಾರಿಯು ಸಾಧನೆಯತ್ತ ಸಾಗುತ್ತಿರುವುದಕ್ಕೆ ನಿದರ್ಶನ.

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿಯು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಿಗೆ ಸೀಮಿತವಾಗಿ ತನ್ನ ಕಾರ್ಯಕ್ಷೇತ್ರವ್ಯಾಪ್ತಿಯನ್ನು ಒಳಗೊಂಡಿದೆ.

ಯಲಹಂಕ ಉಪನಗರದಲ್ಲಿ ಮುಖ್ಯ ಕಛೇರಿ ಹಾಗೂ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ಬೈರತಿ ಗ್ರಾಮದಲ್ಲಿ ಮತ್ತೊಂದು ಶಾಖೆಯನ್ನು ಹೊಂದಿರುವ ಸಹಕಾರಿಯು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶಾಖೆಗಳನ್ನು ವಿಸ್ತರಣೆ ಮಾಡಲು ಯೋಜನೆ ಹಮ್ಮಿಕೊಂಡಿದೆ.

ಆರಂಭದಲ್ಲಿ ಸದಸ್ಯರಿಗೆ ಚಿನ್ನಾಭರಣ, ವಾಹನ, ನಿವೇಶನ, ಗೃಹ, ವೈಯಕ್ತಿಕ ಸಾಲಗಳನ್ನು ನೀಡುವುದರ ಜೊತೆಗೆ ಭದ್ರತಾ ಕಪಾಟುಗಳ ಸೇವೆಯನ್ನು ನೀಡುತ್ತಿದ್ದ ಸಹಕಾರಿಯು, ನಂತರದ ದಿನಗಳಲ್ಲಿ ಸದಸ್ಯರಿಗಾಗಿ ಚೀಟಿ ನಿಧಿಗಳ ಕಾಯಿದೆ–1982ರ ಪ್ರಕಾರ ಉಪನಿಬಂಧನೆಗಳಿಗೊಳಪಟ್ಟು ಚೀಟಿ ವ್ಯವಹಾರ ಹಾಗೂ ಜೀವ ವಿಮೆ, ಸಾಮಾನ್ಯ ವಿಮೆ, ಇ–ಸ್ಟ್ಯಾಂಪಿಂಗ್, ಇ–ಟಿಕೇಟಿಂಗ್ ಸೌಲಭ್ಯಗಳನ್ನು ಆರಂಭಿಸಿತು.

**ಸೌಲಭ್ಯಗಳು :** ಸಹಕಾರಿಯಲ್ಲಿ ಠೇವಣಿಗಳು, ದೀರ್ಘಾವಧಿ, ಗೃಹ, ವಾಹನ, ವೈಯಕ್ತಿಕ, ಚಿನ್ನಾಭರಣ, ನಿಶ್ಚಿತ ಠೇವಣಿ, ನಗದು ಪತ್ತಿನ ಹಾಗೂ ವಿದ್ಯಾಭ್ಯಾಸದ ಸಾಲಗಳು ದೊರೆಯಲಿವೆ. ಅಲ್ಲದೇ, ಡಿ.ಡಿ., ಆರ್.ಟಿ.ಜಿ.ಎಸ್/ ಎನ್‌ಇಎಫ್‌ಟಿ, ಚಿಟ್‌ಫಂಡ್, ಸಾಮಾನ್ಯ ವಿಮಾ, ಸುರಕ್ಷಿತ ಭದ್ರತಾ ಕಪಾಟುಗಳ, ಬಸ್ ಮತ್ತು ವಿಮಾನ ಟಿಕೆಟ್ ಹಾಗೂ ಜೀವ ವಿಮಾ/ ಆರೋಗ್ಯ ವಿಮಾ ಸೌಲಭ್ಯಗಳು ದೊರೆಯಲಿವೆ. ವೆಸ್ಟರ್ನ್ ಯೂನಿಯನ್ ಮನಿ ಟ್ರಾನ್ಸ್‌ಫರ್, ಇ–ಸ್ಟ್ಯಾಂಪಿಂಗ್, ಪ್ಯಾಕೇಜ್ ಟೂರ್, ಮೊಬೈಲ್ ಡೇಟಾ ಕಾರ್ಡ್, ಡಿ.ಟಿಎಚ್, ರೀಚಾರ್ಜ್ ಸೇವೆಗಳೂ ಸಹ ಲಭ್ಯವಿವೆ.

**ಸಹಕಾರಿಯ ಸಾಧನೆಯ ಪಕ್ಷಿನೋಟ :** 2016–17ನೇ ಆರ್ಥಿಕ ಸಾಲಿನ ಅಂತ್ಯಕ್ಕೆ ಸಹಕಾರಿಯ ಶೇರು ಬಂಡವಾಳವು 208 ಲಕ್ಷಗಳಷ್ಟಿದ್ದು, 3500 ಲಕ್ಷಗಳಷ್ಟು ಠೇವಣಿಯನ್ನು ಸಂಗ್ರಹಿಸಲಾಗಿದೆ. ಸಹಕಾರಿ ಸದಸ್ಯರ ಏಳಿಗೆಗಾಗಿ ಪ್ರಸ್ತುತ ಆರ್ಥಿಕ ವರ್ಷದ ಅಂತ್ಯಕ್ಕೆ 2100 ಲಕ್ಷಗಳಷ್ಟು ಸಾಲವನ್ನು ವಿತರಿಸಿರುವುದು ಸಹಕಾರ ಕ್ಷೇತ್ರದಲ್ಲಿ ಒಂದು ದೊಡ್ಡ ಸಾಧನೆಯಾಗಿದೆ. ಇದೇ ಆರ್ಥಿಕ ವರ್ಷದಲ್ಲಿ 4300 ಲಕ್ಷಗಳಷ್ಟು ದುಡಿಯುವ ಬಂಡವಾಳ ಹಾಗೂ 4900 ಲಕ್ಷಗಳಷ್ಟು ವ್ಯವಹಾರವನ್ನು ದಾಖಲಿಸಿದ್ದು, ಸಹಕಾರಿಯಲ್ಲಿರುವ ವಿವಿಧ ಸೇವೆಗಳಿಂದ ಒಟ್ಟು 244 ಲಕ್ಷಗಳಷ್ಟು ಲಾಭಾಂಶವನ್ನು ಗಳಿಸಿದ್ದು, ಸಹಕಾರಿಯ ಉನ್ನತಿಗೆ ಇದು ಪೂರಕವಾಗಿದೆ.

## 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿ ಕ್ಷೇತ್ರದಿಂದ ಆಯ್ಕೆಯಾಗಿರುವ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆ ಪ್ರಶಸ್ತಿ ಪುರಸ್ಕೃತ

### ಶಿವಶ್ರೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ತುಮಕೂರು.



ಶ್ರೀ ಹೆಚ್.ಎಸ್.ಭಸ್ಮಾಂಗಿ ರುದ್ರಯ್ಯ
ಅಧ್ಯಕ್ಷರು



ಶ್ರೀ ಟಿ.ಸಿ. ಮಲ್ಲಿಕಾರ್ಜುನಯ್ಯ
ಮುಖ್ಯಕಾರ್ಯನಿರ್ವಾಹಕರು

ತುಮಕೂರಿನ ಯುವಕರುಗಳಾದ ಶ್ರೀ ಟಿ.ಪಿ.ನಟರಾಜು, ಶ್ರೀ ಟಿ.ಆರ್.ಸದಾಶಿವಯ್ಯ, ಶ್ರೀ ಕೆ.ಎಸ್.ಉಮೇಶ್ ಕುಮಾರ್, ಶ್ರೀ ಟಿ.ಎಸ್.ಕರುಣಾರಧ್ಯ ಮತ್ತು ಸಮಾಜದ ಮುಖಂಡರುಗಳಾದ ಶ್ರೀ ಜಿ.ಹೆಚ್.ಪರಮಶಿವಯ್ಯ, ಶ್ರೀ ಬಿ.ಎಸ್.ಬಾಳಯ್ಯ, ಶ್ರೀ ಎನ್.ಆರ್.ಜಗದೀಶ್ ಮತ್ತು ಶ್ರೀ ಭಸ್ಮಾಂಗಿ ರುದ್ರಯ್ಯನವರುಗಳು ಸಮಾಜದ ಸೇವೆ ಮಾಡುವ ದಿಶೆಯಲ್ಲಿ ಸಮಾಲೋಚನೆ ನಡೆಸಿ, ಸಹಕಾರಿ ಸಂಸ್ಥೆಯ ಮೂಲಕ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರುಗಳಿಗೆ ಆರ್ಥಿಕ ಸಹಾಯ ನೀಡುವುದರ ಮೂಲಕ ಸಮಾಜ ಸೇವೆಯನ್ನು ಮಾಡುವ ಉದ್ದೇಶದಿಂದ ಶಿವಶ್ರೀ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಡಿಯಲ್ಲಿ ಸಹಕಾರಿಯನ್ನು ಸ್ಥಾಪಿಸಿ, ದಿನಾಂಕ 29–01–2007 ರಿಂದ ಸಹಕಾರಿಯು ತನ್ನ ಕಾರ್ಯವನ್ನು ಪ್ರಾರಂಭಿಸಿರುತ್ತದೆ. ಪ್ರಾರಂಭದಲ್ಲಿ ರೂ.29,54,450/–ಗಳ ಶೇರು ಬಂಡವಾಳದಿಂದ ವ್ಯವಹಾರಗಳನ್ನು ವೃದ್ಧಿಸಿಕೊಂಡು ಕ್ರಮೇಣ ತನ್ನ ವ್ಯವಹಾರಗಳನ್ನು ವಿಸ್ತರಿಸಿಕೊಂಡು 2010ಕ್ಕೆ ಸಹಕಾರಿಯು 2600 ಸದಸ್ಯರುಗಳನ್ನು ಒಳಗೊಂಡು ಶೇರು ಬಂಡವಾಳ ರೂ.65,19,000/–ಗಳು ಮತ್ತು ಠೇವಣಿ ರೂ.10 ಕೋಟಿ 37 ಲಕ್ಷಗಳು ಹಾಗೂ ಸಾಲ ರೂ.9 ಕೋಟಿ 79 ಲಕ್ಷಗಳ ಆರ್ಥಿಕ ಸ್ಥಿತಿಯಿದ್ದು, ನಂತರದ ದಿನಗಳಲ್ಲಿ ಸಹಕಾರಿಯು ಜನಪರವಾದ ಅನೇಕ ಹೊಸ ಹೊಸ ವ್ಯವಹಾರಗಳು ಅಂದರೆ ಮೈಕ್ರೋ ಫೈನಾನ್ಸ್, ಚೀಟಿ ವ್ಯವಹಾರ, ಆಟೋರಿಕ್ಷಾ ಖರೀದಿ ಸಾಲ, ಗೃಹೋಪಯೋಗಿ ವಸ್ತುಗಳ ಖರೀದಿ ಸಾಲ, ಎಲ್ಲಾ ರೀತಿಯ ವಾಹನಗಳ ಆಧಾರ ಸಾಲ, ಗೃಹ ಸಮುಚ್ಚಯ, ವಾಣಿಜ್ಯ ಸಮುಚ್ಚಯ ನಿರ್ಮಾಣ ಸಾಲ, ಇತರ ವಿವಿಧ ರೀತಿಯ ಸಾಲಗಳ ನೀಡಿಕೆಯಿಂದ ಸಹಕಾರಿಯು ತುಮಕೂರಿನ ನಾಗರೀಕರಿಗೆ ಆರ್ಥಿಕ ನೆರವು ನೀಡುತ್ತಾ ಬಂದಿದೆ. ಪ್ರತಿ ಸಾಲಿನಲ್ಲಿಯು ಸಹಕಾರಿಯು ಯೋಜಿತ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ವ್ಯವಹಾರಗಳನ್ನು ನಡೆಸಿ, ಪ್ರತಿ ಸಾಲಿನಲ್ಲಿ ಶೇಕಡಾವಾರು ಪ್ರಗತಿಯು ಪ್ರತಿಶತ 25ರಷ್ಟಿರುತ್ತದೆ. ದಿನಾಂಕ:31–03–2017ಕ್ಕೆ ಸಹಕಾರಿಯ ಆರ್ಥಿಕ ಸ್ಥಿತಿಯು ಈ ರೀತಿ ಇರುತ್ತದೆ. ಶೇರು ಬಂಡಾವಳ ರೂ.355.71 ಲಕ್ಷಗಳು, ನಿಧಿಗಳು ರೂ.813.48 ಲಕ್ಷಗಳು, ಠೇವಣಿಗಳು ರೂ.10752.72 ಲಕ್ಷಗಳು, ಚಾಲ್ತಿ ಬಂಡವಾಳ ರೂ.11921.91 ಲಕ್ಷಗಳು, ಹೂಡಿಕೆಗಳು ರೂ.2075.20 ಲಕ್ಷಗಳು, ಸಾಲಗಳು ರೂ.10002.00 ಲಕ್ಷಗಳು, ನಿವ್ವಳ ಲಾಭ ರೂ.422.21 ಲಕ್ಷಗಳು.

ಸಹಕಾರಿಯ ಈ ಪ್ರಗತಿಗೆ ನಿರ್ದೇಶಕ ಮಂಡಲಿಯ ಪ್ರಾಮಾಣಿಕತೆ, ಕಾರ್ಯದಕ್ಷತೆ ಹಾಗೂ ಸಮಾಜ ಸೇವೆಯನ್ನು ಸಹಕಾರಿಯು ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಭಾಗವಹಿಸಲು ಅನುವಾಗುವಂತೆ ಸಹಕಾರಿಯ ಉಪವಿಧಿಗೆ ಹೊಸ ಹೊಸ ವ್ಯವಹಾರಗಳನ್ನು ಸೇರಿಸಿಕೊಂಡಿದೆ. ಪ್ರಮುಖವಾದ ವಿವಿಧ ಉದ್ದೇಶಗಳೇನೆಂದರೆ 1. ಸದಸ್ಯರುಗಳಿಗೆ ರಿಯಾಯಿತಿ ದರದಲ್ಲಿ ಔಷಧಿಗಳ ಪೂರೈಕೆಗೆ ಮಳಿಗೆಗಳನ್ನು ತೆರೆಯುವುದು. 2. ಸದಸ್ಯರ ಅನುಕೂಲಕ್ಕಾಗಿ ಸಾರಿಗೆ ವ್ಯವಹಾರಗಳನ್ನು ನಡೆಸುವುದು. 3. ರೆಸ್ಟೋರೆಂಟ್ ಮತ್ತು ವಸತಿ ಗೃಹಗಳನ್ನು ತೆರೆಯುವುದು. 4. ಜವಳಿ ವ್ಯಾಪಾರ ನಡೆಸುವುದು 5. ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಐಟಂಗಳು (ಹಾರ್ಡ್‌ವೇರ್) ವ್ಯಾಪಾರ ಮಾಡುವುದು. ಸಹಕಾರಿಯ ಅಧ್ಯಕ್ಷರಾದ ಶ್ರೀ ಭಸ್ಮಾಂಗಿ ರುದ್ರಯ್ಯನವರು ವೃತ್ತಿಯಲ್ಲಿ ವಕೀಲರಾಗಿದ್ದು, ಇವರ ಮಾರ್ಗದರ್ಶನದಲ್ಲಿ ಪ್ರಗತಿಯನ್ನು ಸಾಧಿಸಿ, ಕರ್ನಾಟಕ ರಾಜ್ಯದಲ್ಲಿ ಉತ್ತಮ ಸೌಹಾರ್ದ ಸಹಕಾರಿಯೆಂದು ಪ್ರಶಸ್ತಿಯನ್ನು ಸ್ವೀಕರಿಸಲು ನಿರ್ದೇಶಕ ಮಂಡಲಿಯು ಹರ್ಷಿಸುತ್ತದೆ.

# ತುಮಕೂರು ಜಿಲ್ಲೆಯ ಉತ್ತಮ ಸಹಕಾರ ಸಂಘಗಳ ಪ್ರಶಸ್ತಿ

### ತುಮಕೂರು ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಲ್ಲಿ :

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕ್ಯಾತ್ಸಂದ್ರ, ತುಮಕೂರು ತಾಲ್ಲೂಕು.
2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಎಂ.ಎನ್.ಕೋಟೆ, ಗುಬ್ಬಿ ತಾಲ್ಲೂಕು.
3. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಚೌಡನಕುಪ್ಪೆ, ಕುಣಿಗಲ್ ತಾಲ್ಲೂಕು.
4. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಗೊರಗೊಂಡನಹಳ್ಳಿ, ತಿಪಟೂರು ತಾಲ್ಲೂಕು.
5. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಅರೇಮಲ್ಲೇನಹಳ್ಳಿ, ತಿಪಟೂರು ತಾಲ್ಲೂಕು.
6. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕಸಬಾ ಸಿ.ಎನ್.ಹಳ್ಳಿ, ಸಿ.ಎನ್.ಹಳ್ಳಿ ತಾಲ್ಲೂಕು.
7. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಪುರವಾರ, ಮಧುಗಿರಿ ತಾಲ್ಲೂಕು.
8. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ವಡ್ಡಗೆರೆ, ಕೊರಟಗೆರೆ ತಾಲ್ಲೂಕು.
9. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕಾಮಗೊಂಡನಹಳ್ಳಿ, ಶಿರಾ ತಾಲ್ಲೂಕು.
10. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಪಳವಳ್ಳಿ, ಪಾವಗಡ ತಾಲ್ಲೂಕು.

### ತುಮಕೂರು ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಲ್ಲಿ :

1. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಹುಳ್ಳೇನಹಳ್ಳಿ, ತುಮಕೂರು ತಾಲ್ಲೂಕು.
2. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.
3. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಬೇಗೂರು, ಕುಣಿಗಲ್ ತಾಲ್ಲೂಕು.
4. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಸಾರ್ಥವಳ್ಳಿ, ತಿಪಟೂರು ತಾಲ್ಲೂಕು.
5. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕೊಡಗೀಹಳ್ಳಿ, ತುರುವೇಕೆರೆ ತಾಲ್ಲೂಕು.
6. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕೆಂಕೆರೆ, ಸಿ.ಎನ್.ಹಳ್ಳಿ ತಾಲ್ಲೂಕು.
7. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕೊಡಗೇನಹಳ್ಳಿ, ಮಧುಗಿರಿ ತಾಲ್ಲೂಕು.
8. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಪಾತಗನಹಳ್ಳಿ, ಕೊರಟಗೆರೆ ತಾಲ್ಲೂಕು.
9. ಹಾಲು ಉತ್ಪಾದಕರ ಸಹಕಾರ ಸಂಘ ನಿ., ಬರಗೂರು, ಶಿರಾ ತಾಲ್ಲೂಕು.
10. ಹಾಲು ಉತ್ಪಾದಕರ ಸಹಕಾರ ಸಂಘ ನಿ., ನ್ಯಾಯದಗುಂಟೆ, ಪಾವಗಡ ತಾಲ್ಲೂಕು.

### ತುಮಕೂರು ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಹಕಾರ ಸಂಸ್ಥೆಗಳ ವಿವರಗಳು :

1. **ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರ :** ಟಿ.ಜಿ.ಎಂ.ಸಿ. ಬ್ಯಾಂಕ್ ನಿ., ತುಮಕೂರು.
2. **ಮಹಿಳಾ ಸಹಕಾರ ಕ್ಷೇತ್ರ :** ಶಬರಿ ಮಹಿಳಾ ಪತ್ತಿನ ಸಹಕಾರ ಸಂಘ ನಿ., ತುಮಕೂರು.
3. **ಪತ್ತಿನ ಸಹಕಾರ ಸಂಘಗಳ ಕ್ಷೇತ್ರ :** ಶಿರಾ ತಾಲ್ಲೂಕು ಶ್ರೀ ಕನಕ ಪತ್ತಿನ ಸಹಕಾರ ಸಂಘ ನಿ., ಶಿರಾ.
4. **ಗೃಹ ನಿರ್ಮಾಣ ಸಹಕಾರ ಕ್ಷೇತ್ರ :** ತಿಪಟೂರು ಟೌನ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ತಿಪಟೂರು.
5. **ಗ್ರಾಹಕರ ಸಹಕಾರ ಕ್ಷೇತ್ರ :** ಶಿರಾ ಟೌನ್ ವಿವಿದೋದ್ದೇಶ ಸಹಕಾರಿ ಬಂಡಾರ ನಿ., ಶಿರಾ.
6. **ಕೈಗಾರಿಕಾ ಕ್ಷೇತ್ರ :** ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಸಹಕಾರ ಸಂಘ ನಿ., ತುಮಕೂರು.
7. **ಓ.ಎ.ಪಿ.ಸಿ.ಎಮ್.ಎಸ್. ವಿಭಾಗ :** ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ತುಮಕೂರು.
8. **ಪೀಕಾರ್ಡ್ ಬ್ಯಾಂಕ್ ವಿಭಾಗ :** ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತಿಪಟೂರು.
9. **ಸೌಹಾರ್ದ ಸಹಕಾರಿ ಕ್ಷೇತ್ರ :** ಶಿವಶ್ರೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ತುಮಕೂರು.

### ಅಭಿನಂದನೆ :

ಇದೇ ಸಂದರ್ಭದಲ್ಲಿ ತುಮಕೂರಿನ ಶ್ರೀ ತಿಮ್ಮಣ್ಣ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ನವದೆಹಲಿಯಲ್ಲಿ ಅಚಿವರ್ಸ್ ಅಸೋಸಿಯೇಷನ್‌ರವರು ಆರ್ಥಿಕ ಅಭಿವೃದ್ಧಿ ಹಾಗೂ ಸಂಶೋಧನೆಗಾಗಿ ಭಾರತೀಯ ಉದ್ಯೋಗ ರತ್ನ ಪ್ರಶಸ್ತಿಯನ್ನು (ಸರ್ಟಿಫಿಕೇಟ್ ಆಫ್ ಎಕ್ಸಲೆನ್ಸ್) ನೀಡಿ ಗೌರವಿಸಿರುವುದಕ್ಕಾಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಆರ್.ತಿಮ್ಮೇಗೌಡರವರನ್ನು ಶಾಲು ಹೊದಿಸಿ, ಹಾರ ಹಾಕಿ, ಅಭಿನಂದಿಸಲಾಯಿತು.



### ಉಪನ್ಯಾಸ – ಶ್ರೀ ಬಿ.ಎ.ಮಹದೇವಪ್ಪ

ಸಹಕಾರ ಸಪ್ತಾಹದ ಏಳು ದಿನಗಳ ಆಚರಣೆಯಲ್ಲಿ ಪ್ರತಿ ದಿನಕ್ಕೂ ಒಂದು ವಿಷಯದ ಬಗ್ಗೆ ತಿಳುವಳಿಕೆ ಹಾಗೂ ಚಿಂತನೆ ಮಾಡಲು ಮತ್ತು ತನ್ಮೂಲಕ ಸಹಕಾರ ಕ್ಷೇತ್ರದ ಅಭಿವೃದ್ಧಿಯತ್ತ ಗಮನಹರಿಸಲು ಸಾಧ್ಯವಾಗುವಂತೆ ಅವಕಾಶವನ್ನು ರಾಷ್ಟ್ರೀಯ ಸಹಕಾರ ಯೂನಿಯನ್ ತನ್ನ ಮಾದರಿ ಕಾರ್ಯಕ್ರಮವನ್ನು ರೂಪಿಸಿದೆ. ಅದರಂತೆ ದಿನಾಂಕ 18–11–2017ರಂದು 'ತಾಂತ್ರಿಕ ಜಾಗೃತಿ ಹಾಗೂ ನಗದು ರಹಿತ ಪಾವತಿ ಮೂಲಕ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ' ವಿಷಯದ ಬಗ್ಗೆ ಶ್ರೀ ಬಿ.ಎ.ಮಹದೇವಪ್ಪ, ನಿವೃತ್ತ ಅಪರ ನಿಬಂಧಕರು ಹಾಗೂ ಸನ್ಮತಿ ಫೌಂಡೇಶನ್, ಮೈಸೂರು ಇವರು ಉಪನ್ಯಾಸ ನೀಡಿದರು.

### ಸುಗಮ ಸಂಗೀತ

ಪ್ರಾರಂಭದಲ್ಲಿ ಶ್ರೀ ಕೆಂಕೆರೆ ಮಲ್ಲಿಕಾರ್ಜುನ ಹಾಗೂ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

### ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯ ಇ–ಪೇಪರ್ ಬಿಡುಗಡೆ



ತಾಂತ್ರಿಕ ಜಾಗೃತಿ ದಿನಾಚರಣೆಯ ಅಂಗವಾಗಿ ಈ ಸಪ್ತಾಹದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಕಟಿಸುತ್ತಿರುವ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯ ಇ–ಪೇಪರ್ ಅನ್ನು ಬಿಡುಗಡೆ ಮಾಡಲಾಯಿತು. ಇನ್ನು ಮುಂದೆ ಈ ಪತ್ರಿಕೆಯನ್ನು http://www.souharda.coop/swabhimani/ ಇಲ್ಲಿ ಓದಲು ಸಾಧ್ಯವಾಗುತ್ತದೆ.

### ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ



### ವಂದನಾರ್ಪಣೆ



ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರು, ಪ್ರಸ್ತುತ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿರುವ ಶ್ರೀ ಗುರುನಾಥ ಜ್ಯಾಂತಿಕರರವರು ವಂದನಾರ್ಪಣೆ ಮಾಡಿದರು.

**ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ಹಾಗೂ ಸಹಕಾರ ಇಲಾಖೆಯ ಮತ್ತು ವಿವಿಧ ಸಂಸ್ಥೆಗಳ ಅಧಿಕಾರಿಗಳಿಗೆ ಸನ್ಮಾನ**









ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಎಸ್.ಗುಂಡೂರಾವ್, ಶ್ರೀ ಬಿ.ಗಂಗಾಧರಯ್ಯ, ಶ್ರೀ ಸಂಜೀವ ಮಹಾಜನ, ಶ್ರೀ ಜಿ.ಶ್ರೀಧರ, ಶ್ರೀ ಎ.ಆರ್.ಪ್ರಸನ್ನ ಕುಮಾರರವರು ಸಕ್ರಿಯವಾಗಿ ಭಾಗವಹಿಸಿದ್ದರು.

## ಬೆಳಗಾವಿಯಲ್ಲಿ 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ಬೆಳಗಾವಿ :** 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ : 14.11.2017ರಂದು ಬೆಳಗಾವಿಯಲ್ಲಿ ಆಯೋಜಿಸಲಾಗಿದ್ದ “ಸಹಕಾರ ಕ್ಷೇತ್ರದ ಮೂಲಕ ಉತ್ತಮ ಆಡಳಿತ ನಿರ್ವಹಣೆ ಮತ್ತು ವೃತ್ತಿಪರತೆಯ ಅಭಿವೃದ್ಧಿ” ದಿನಾಚರಣೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಕಟಣಾ ಮಳಿಗೆ ಮತ್ತು ಪ್ರದರ್ಶಿನಿಯನ್ನು ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಉದ್ಘಾಟಿಸಿದರು.

## ಯುನಿಫೈಡ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಪ್ರಧಾನ ಕಛೇರಿಯ ನೂತನ ಕಟ್ಟಡದ ಉದ್ಘಾಟನೆ - ಸೌಹಾರ್ದ ಸಹಕಾರಿಯ ಕಾರ್ಯಕ್ಕೆ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ ಅವರಿಂದ ಮೆಚ್ಚುಗೆ

**ಬೆಂಗಳೂರು :** ಯುನಿಫೈಡ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಪ್ರಧಾನ ಕಛೇರಿಯ ನೂತನ ಕಟ್ಟಡವನ್ನು ಓಂಕಾರ ಆಶ್ರಮ ಪೀಠಾಧಿಪತಿ ಶ್ರೀ ಮಧುಸುದಾನಂದಪುರಿ ಸ್ವಾಮೀಜಿಯವರು ಉದ್ಘಾಟಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನ ಮಂತ್ರಿಗಳು, ಶ್ರೀ ರವಿ ಸುಬ್ರಮಣ್ಯ, ಶಾಸಕರು, ಶ್ರೀ ಪಿ.ಆರ್.ಸುಧಾಕರ ಲಾಲ್, ಶಾಸಕರು, ಕೊರಟಗೆರೆ ಕ್ಷೇತ್ರ, ಡಾ. ಟಿ.ಎ.ಶರವಣ, ವಿಧಾನ ಪರಿಷತ್‌ನ ಸದಸ್ಯರು ಮತ್ತು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಡಿ.ಎಂ.ನಾಗರಾಜ ಶೆಟ್ಟಿ ಹಾಗೂ ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರು ಭಾಗವಹಿಸಿದ್ದರು.



# ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ

## ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ನಿರ್ದೇಶಕರುಗಳ ಕರ್ತವ್ಯ ಹಾಗೂ ಜವಾಬ್ಧಾರಿ ಮಹತ್ವದ ಪಾತ್ರ ನಿರ್ವಹಿಸುತ್ತದೆ

## - ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗೀಶ್ವರ ಸ್ವಾಮಿಗಳು





ಉದ್ಘಾಟನಾ ಕಾರ್ಯಕ್ರಮ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ 3 ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಸಮೀಪದಲ್ಲಿರುವ ಅಂಕಿತ ವಿಸ್ತಾ ಗ್ರೀನ್ ವಿಲೇಜ್‌ನಲ್ಲಿ ಏರ್ಪಡಿಸಿದ ತರಬೇತಿ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದ ಮೈಸೂರಿನ ಸಮೀಪದ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿರುವ ಬೆಬಿಮಠದ ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗೀಶ್ವರ ಸ್ವಾಮೀಜಿಯವರು ತಮ್ಮ ಆಶೀರ್ವಚನವನ್ನು "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮದುಚ್ಛತೆ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಾಮೇವಾವಶಿಷ್ಯತೆ" ಎಂಬ ವೇದ ಉಕ್ತಿಯಿಂದ ಪ್ರಾರಂಭಿಸಿ ಪ್ರತಿಯೊಬ್ಬರಲ್ಲಿಯೂ ಪೂರ್ಣತ್ವವನ್ನು ಪಡೆದುಕೊಳ್ಳುವ ಶಕ್ತಿಯನ್ನು ಭಗವಂತನು ಕಲ್ಪಿಸಿದ್ದಾನೆ. ಪೂರ್ಣತ್ವದ ಕಡೆಗೆ ಸಾಗಬೇಕಾದರೆ ಅನೇಕ ವಿಷಯಗಳ ಜ್ಞಾನ ಹೊಂದುವ ನಿಟ್ಟಿನಲ್ಲಿ ಪರಿಶ್ರಮ ಹಾಕಬೇಕಾಗುತ್ತದೆ. ಪರಿಶ್ರಮದಿಂದ ಎಲ್ಲಾ ಸಾಧನೆಗಳೂ ಸಾಧ್ಯ. ಆದ್ದರಿಂದ, ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆ ಸಹಕಾರದ ತತ್ವಗಳು ಹಾಗೂ ಕಾರ್ಯಾಚರಣೆಯ ವೈಖರಿ, ವಿಧಿವಿಧಾನಗಳ ಬಗ್ಗೆ ಮಾಹಿತಿ ಇರಬೇಕಾದುದು ಅವಶ್ಯಕ. ಆದ್ದರಿಂದ, ಮಾಹಿತಿಗಳನ್ನು ಪೂರ್ಣತ್ವದ ಕಡೆಗೆ ಅಂದರೆ ಪ್ರಬುದ್ಧತೆಯ ಕಡೆಗೆ ಸಾಗಲು ಈ ರೀತಿಯ ತರಬೇತಿಗಳು ಅವಶ್ಯಕ ಎಂದು ತಿಳಿಸಿದರು.

# ನಿರ್ದೇಶಕರುಗಳ ಆಡಳಿತ ಪರಿಣಿತಿಗಾಗಿ ನಿರಂತರ ತರಬೇತಿ ಅಗತ್ಯ, ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯ – ಶ್ರೀ ಶೇಖರಗೌಡ ಮಾಲಿಪಾಟೀಲ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲರವರು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ನಿರ್ದೇಶಕರುಗಳ ಪಾತ್ರ ಮಹತ್ವದ್ದು. ಕೇವಲ ನಿರ್ದೇಶಕರಾಗಿ ಆಯ್ಕೆಯಾದ ಮಾತ್ರಕ್ಕೆ ನಮ್ಮ ಕೆಲಸ ಮುಗಿಯುವುದಿಲ್ಲ. ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಕೊಡುಗೆಯನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ಸಹಕಾರ ಕ್ಷೇತ್ರದ ವ್ಯವಸ್ಥೆಯನ್ನು ತಿಳಿದುಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ. ಅದಕ್ಕಾಗಿ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ನಿರಂತರ ಅಧ್ಯಯನ ಹಾಗೂ ಪ್ರಚಲಿತ ವಿಷಯಗಳ ಬಗ್ಗೆ ಜ್ಞಾನ ಅಗತ್ಯವಾಗುತ್ತದೆ. ಅದಕ್ಕಾಗಿ ಈ ತರಬೇತಿ. ಇಂತಹ ತರಬೇತಿಗಳನ್ನು ನಿರಂತರವಾಗಿ, ವ್ಯವಸ್ಥಿತವಾಗಿ ಏರ್ಪಡಿಸುತ್ತಿರುವ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಅಭಿನಂದನಾರ್ಹರು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಗುರುನಾಥ ಜ್ಯಾಂತಿಕರರವರು ಮಾತನಾಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ರಾಜ್ಯದ ಸೌಹಾರ್ದ ಸಹಕಾರಿಯ ಹಾಗೂ 1959ರ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಅವುಗಳ ವ್ಯತ್ಯಾಸಗಳ ಬಗ್ಗೆ ಮತ್ತು ಕಾಯ್ದೆ ಕಾನೂನುಗಳ ಪ್ರಮುಖ ಅಂಶಗಳನ್ನು ತಿಳಿದುಕೊಳ್ಳುವುದು ಅವಶ್ಯಕ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಎಲ್ಲರನ್ನು ಸ್ವಾಗತಿಸಿ, ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.




ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ, ಸಂಯುಕ್ತ ಸಹಕಾರಿಗೆ ನೂತನವಾಗಿ ಆಡಳಿತ ಮಂಡಲಿಯ ರಚನೆಯಾಗಿದೆ. 11 ಜನ ಹೊಸಬರಾಗಿದ್ದಾರೆ. ಸೌಹಾರ್ದ ಸಹಕಾರಿ ಕಾನೂನು, ನಿಯಮ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಅನ್ವಯಿಸಬಹುದಾದ ಇತರೆ ಕಾನೂನುಗಳು, ನಾಯಕತ್ವದ ಗುಣಲಕ್ಷಣಗಳು ಹೀಗೆ ಒಟ್ಟಾರೆ ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಪೂರ್ಣ ಮಾಹಿತಿಗಳನ್ನು ಒದಗಿಸುವುದರ ಜೊತೆಗೆ ಈ ಕ್ಷೇತ್ರದ ಹಾಗೂ

ರಾಜ್ಯದ ಹಿರಿಯರುಗಳ ಜೊತೆಗೆ ವಿಚಾರ ವಿನಿಮಯ ಮಾಡುವ ಸದಾವಕಾಶ, ತನ್ಮೂಲಕ ನಮ್ಮ ಆಡಳಿತ ಪರಿಣಿತಿಯನ್ನು ಹೆಚ್ಚಿಸಿಕೊಳ್ಳುವ ವ್ಯವಸ್ಥೆಗಳನ್ನು ಈ ತರಬೇತಿಯಲ್ಲಿ ಅಳವಡಿಸಲಾಗಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು.

ನಂತರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮೊದಲಿಗೆ ಶ್ರೀ ಎಸ್.ಎ. ಸಿದ್ಧಾಂತಿಯವರು ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಉಪ್ಪಿನರವರು ವಂದನೆ ಸಲ್ಲಿಸಿದರು.

ಎರಡನೆಯ ಉಪನ್ಯಾಸಕಾರರಾಗಿ ಶ್ರೀ ಬಿ.ವಿ.ರವೀಂದ್ರನಾಥರವರು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಆರ್.ತಿಮ್ಮಯ್ಯ ಶೆಟ್ಟಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲರವರು ವಂದನೆ ಸಲ್ಲಿಸಿದರು.







ಎರಡನೇ ದಿನದ ಮೊದಲ ಅವಧಿಯಲ್ಲಿ ನಿವೃತ್ತ ಬ್ಯಾಂಕ್ ಅಧಿಕಾರಿ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಪಟ್ಟಾಭಿರಾಮರವರು ಸಹಕಾರಿ ಕಾರ್ಯಕರ್ತನ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿರವರು ವಂದನೆ ಸಲ್ಲಿಸಿದರು.



ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಸೌಹಾರ್ದ ಸಹಕಾರಿ ಕಾನೂನು ಮತ್ತು ನಿರ್ದೇಶಕರುಗಳ ಕರ್ತವ್ಯ ಹಾಗೂ ಜವಾಬ್ಧಾರಿಗಳ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲರವರು ವಂದನೆ ಸಲ್ಲಿಸಿದರು.



ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಬಿ.ಎ.ಮಹದೇವಪ್ಪ ರವರು ಸಹಕಾರಿ ನಾಯಕತ್ವದ ಬಗ್ಗೆ ಉಪನ್ಯಾಸ ನೀಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರರವರು ವಂದನೆ ಸಲ್ಲಿಸಿದರು.



ಶಾಸಕರಾದ ಹಾಗೂ ಮಾಜಿ ಸಚಿವರಾದ ಶ್ರೀ ಸುರೇಶ ಕುಮಾರರವರು ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾತನಾಡಿ, ನಿರ್ದೇಶಕರುಗಳ ಕರ್ತವ್ಯ ಹಾಗೂ ಜವಾಬ್ಧಾರಿಗಳ ಬಗ್ಗೆ ಮಾತನಾಡಿ ಮಾರ್ಗದರ್ಶನ ಮಾಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ನಂಜನಗೌಡರವರು ವಂದನೆ ಸಲ್ಲಿಸಿದರು.



ನಬಾರ್ಡ್ ಸಂಸ್ಥೆಯ ನಿವೃತ್ತ ಎ.ಜಿ.ಎಮ್ ಶ್ರೀ ವೈ.ವಿ. ಗುಂಡೂರಾವ್ ರವರು ಆಂತರಿಕ ಸಂಬಂಧಗಳ ನಿರ್ವಹಣೆ ಬಗ್ಗೆ ಉಪನ್ಯಾಸ ನೀಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರು ವಂದನೆ ಸಲ್ಲಿಸಿದರು.

## ಸಹಕಾರ ಕ್ಷೇತ್ರದಲ್ಲಿ ನಿರಾಶಾವಾದ ಬೇಡ : ನಿಮ್ಮ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಿ, ಕಲಿತೀವಿ, ಕಲಿಸ್ತೀವಿ, ಬೆಳಿತೀವಿ – ಶ್ರೀ ಬಿ.ಎಲ್. ಸಂತೋಷ

ಮೂರನೆಯ ದಿನದ ಕಾರ್ಯಕ್ರಮದಲ್ಲಿ ಮೊದಲಿಗೆ ಹಿರಿಯ ಹಾಗೂ ಅನುಭವಿ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಬಿ.ಎಲ್.ಸಂತೋಷರವರು ಉಪನ್ಯಾಸವನ್ನು ನಡೆಸಿಕೊಟ್ಟರು.



ಅವರ ಉಪನ್ಯಾಸದ ಅವಧಿಯಲ್ಲಿ ಈ ಸಹಕಾರ ಕ್ಷೇತ್ರದ ಸಾಧನೆ ಅತ್ಯಂತ ಮಹತ್ವದ್ದಾಗಿದೆ. ಕಳೆದ 4–5 ದಶಕಗಳಲ್ಲಿ ಪ್ರಾರಂಭವಾದ ಐ.ಟಿ.ಐ., ದೂರವಾಣಿ ಕಾರ್ಖಾನೆ, ಹೆಚ್.ಎಮ್.ಟಿ., ಎನ್.ಜಿ.ಇ.ಎಫ್.ನಂತಹ ಅನೇಕ ಸಾರ್ವಜನಿಕ ಕಾರ್ಖಾನೆಗಳು ಮುಚ್ಚಿಹೋಗಿವೆ. ಆದರೆ, ನೂರು ವರ್ಷಗಳ ಇತಿಹಾಸವಿರುವ, ಅನೇಕ ಏಳು–ಬೀಳುಗಳನ್ನು ಕಂಡಿರುವ ಈ ಸಹಕಾರ ಕ್ಷೇತ್ರ ಮಾತ್ರ ಅವನತಿಯಾಗಲಿಲ್ಲ. ಮುಚ್ಚಿ ಹೋಗಲಿಲ್ಲ. ಬದಲಿಗೆ ಈ ದೇಶದ ಅರ್ಥವ್ಯವಸ್ಥೆಯಲ್ಲಿ ತನ್ನ ಮಹತ್ವದ ಪಾಲನ್ನು ನಿರ್ವಹಿಸುತ್ತಾ ಬಂದಿದೆ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುವತ್ತ ದಾಪುಗಾಲು ಹಾಕುತ್ತಿವೆ. ಆದ್ದರಿಂದ, ಸಹಕಾರಿಗಳು ನಿರಾಶರಾಗಬೇಕಿಲ್ಲ. ಸಹಕಾರ ಕ್ಷೇತ್ರದಲ್ಲಿ ಮಾಲೀಕತ್ವ ನಿಖರವಾಗಿರುತ್ತದೆ. ಆದರೆ, ಸಾರ್ವಜನಿಕ ಕ್ಷೇತ್ರದಲ್ಲಿ ಮಾಲೀಕತ್ವ ನಿಖರವಾಗಿರುವುದಿಲ್ಲ.

ಸಹಕಾರ ಕ್ಷೇತ್ರದಲ್ಲಿ ಆಡಳಿತ ಮಂಡಲಿಯವರು ಸದಸ್ಯರಿಗೆ ಉತ್ತರದಾಯಿತ್ವ ಹೊಂದಿದ್ದಾರೆ. ಆದರೆ, ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತರದಾಯಿತ್ವ

ಸೀಮಿತವಾಗಿರುತ್ತದೆ. ಇಲ್ಲಿ ಸದಸ್ಯರ ಜೊತೆಗೆ ನಿರಂತರ ಸಂವಾದವಿರುತ್ತದೆ. ಸಾಮಾಜಿಕ ಕಳಕಳಿ ಹಾಗೂ ಬದ್ಧತೆ ಇರುತ್ತದೆ.

ಮಾನವ ಸಂಪನ್ಮೂಲದ ಮೇಲೆ ಪ್ರಗತಿ ಹಾಗೂ ಅಭಿವೃದ್ಧಿ ಸಾಧ್ಯವಾಗಬೇಕು. ಇದೊಂದು ರೀತಿಯ ಮಾನವ ಸಂಪನ್ಮೂಲದ ಹೂಡಿಕೆ ಎಂದರೆ ತಪ್ಪಾಗಲಾರದು. ಇಲ್ಲಿ ಕಲಿತೀವಿ, ಕಲಿಸ್ತೀವಿ, ಬೆಳೆತೀವಿ. ಆದ್ದರಿಂದ, ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ಬಂದಿದೆ ಎಂದು ಕಿವಿಮಾತು ಹೇಳಿದರು.

ಮುಂದುವರೆದು ಮಾತನಾಡಿದ ಶ್ರೀ ಬಿ.ಎಲ್. ಸಂತೋಷರವರು ಸಹಕಾರಿ ಕಾರ್ಯಕರ್ತರಾದವರು ತಮ್ಮ ಕಾರ್ಯವ್ಯಾಪ್ತಿಯನ್ನು (ಕಂಪೌಂಡ್) ಹೆಚ್ಚಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ನಮಗೆ ಹೆಚ್ಚಿನ ಜ್ಞಾನ ಹಾಗೂ ಅವಕಾಶಗಳು ದೊರಕಲು ಸಾಧ್ಯವಾಗುತ್ತದೆ. ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಶಕ್ತಿ, ಸಾಮರ್ಥ್ಯ ನಮ್ಮಲ್ಲಿ ಬೆಳೆಯುತ್ತದೆ.

ಈ ಕ್ಷೇತ್ರದಲ್ಲಿ ಮಾಲೀಕರು ಸದಸ್ಯರು. ಇಲ್ಲಿ ನನ್ನದು ಎಂಬುದು ಯಾವುದಿಲ್ಲ. ಎಲ್ಲವೂ ನಮ್ಮದು ಎಂಬುದನ್ನು ತಿಳಿದುಕೊಳ್ಳಬೇಕು, ಅದರಂತೆ ಕಾರ್ಯನಿರ್ವಹಿಸಬೇಕು ಇದು ಅವಶ್ಯಕ. ಇಲ್ಲಿ ಸಣ್ಣ ಸಣ್ಣ ವಿಷಯಗಳ ಬಗ್ಗೆ ಹೆಚ್ಚು ಆಲೋಚನೆ ಮಾಡಬೇಕಾಗಿರುವುದು ಅವಶ್ಯಕ. ನಿರ್ದೇಶಕರುಗಳೆಲ್ಲ ಒಂದು ಶಕ್ತಿಯಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಒಂದು ಮಹಾಮಂಡಳವಾಗಿ ಕಾರ್ಯನಿರ್ವಹಿಸುವುದು ಅಗತ್ಯ.

ಸಹಕಾರ ಕ್ಷೇತ್ರದಲ್ಲಿ ಹೊಸದಾಗಿ ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಕ್ಷೇತ್ರ ಬೃಹತ್ತಾಗಿ ಬೆಳೆದಿದೆ. ಸಾಮಾಜಿಕ ಕಳಕಳಿ ಹೊಂದಿದೆ. ಈ ಶಕ್ತಿಯ ಸದುಪಯೋಗವಾಗುವಂತೆ ನಿರ್ದೇಶಕರು ಕಾರ್ಯನಿರ್ವಹಿಸುವುದು ಇಂದಿನ ಅಗತ್ಯತೆ ಎಂದು ತಿಳಿಸಿದರು. ನಂತರ ಮಾತನಾಡಿದ ಮತ್ತೊಬ್ಬ ಹಿರಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಅರುಣರವರು ಸಹಕಾರವೆಂದರೆ ಎಲ್ಲರೂ ಒಟ್ಟಿಗೆ ಸೇರಿ ಕಾರ್ಯ ನಿರ್ವಹಿಸುವುದಾದ್ದರಿಂದ ಸಮಾಜದ ಅಭಿವೃದ್ಧಿಗಾಗಿ, ಸಮಾಜದ ಶೋಷಣೆ ನಿವಾರಣೆಗಾಗಿ ಕಾರ್ಯನಿರ್ವಹಿಸೋಣ ಎಂದು ಕರೆ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಶ್ರೀಯುತರುಗಳಿಗೆ ವಂದನೆ ಸಲ್ಲಿಸಿದರು.

ನಂತರದಲ್ಲಿ ಹಿರಿಯ ಸಾಮಾಜಿಕ ಕಾರ್ಯಕರ್ತ ರಾದ ಶ್ರೀ ಸು.ರಾಮಣ್ಣನವರು ಕುಟುಂಬ ಪ್ರಬೋಧಿನಿ ವಿಷಯದ ಬಗ್ಗೆ ಮಾತನಾಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿಯವರು ವಂದನೆ ಸಲ್ಲಿಸಿದರು.



ನಂತರದಲ್ಲಿ ಕ್ಯಾಂಪ್ಕೋ ಸಹಕಾರಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆಯ ಬಗ್ಗೆ ಮಾತನಾಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ವಂದನೆ ಸಲ್ಲಿಸಿದರು.




ಇನ್ನೊಬ್ಬ ಹಿರಿಯ ಸಹಕಾರಿ, ಕ್ಯಾಂಪ್ಕೋದ ಮಾಜಿ ಅಧ್ಯಕ್ಷರಾದ ಶ್ರೀ ಕೊಂಕೋಡಿ ಪದ್ಮನಾಭರವರು ಯಶಸ್ವಿ ನಿರ್ದೇಶಕನ ಗುಣಲಕ್ಷಣಗಳ ಬಗ್ಗೆ ಮಾತನಾಡಿದರು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲರವರು ವಂದನೆ ಸಲ್ಲಿಸಿದರು.



## ಸಮಾರೋಪ ಕಾರ್ಯಕ್ರಮ :
## ಪ್ರಾಮಾಣಿಕತೆ ಹಾಗೂ ದಕ್ಷತೆ ಸಹಕಾರಿ ನಿರ್ದೇಶಕನ ಯಶಸ್ಸಿನ ಮಾನದಂಡಗಳು – ಶ್ರೀ ರಮೇಶ ವೈದ್ಯ

ಈ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಸಾಕಷ್ಟಿದೆ. ಆದರೂ ಆರ್ಥಿಕ ತಜ್ಞರು ಹಾಗೂ ಸರಕಾರಗಳು ಯೋಜನೆಗಳನ್ನು ರೂಪಿಸುವಾಗ ಸಹಕಾರ ಕ್ಷೇತ್ರವನ್ನು ತಮ್ಮ ಸಾಧನವನ್ನಾಗಿ ಪರಿಗಣಿಸದಿರುವುದು ವಿಷಾದನೀಯ. ಈ ದೇಶದಲ್ಲಿ ಇಫ್ಕೋ, ಕ್ರಿಭ್ಕೋ, ಮ್ಯಾಮ್ಕೋದಂತಹ ಉತ್ತಮ ಸಹಕಾರಿ ಸಂಸ್ಥೆಗಳು, ಉತ್ತಮ ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಸ್ಥೆಗಳು, ಅನೇಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಇನ್ನೂ ಅನೇಕ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಕಾರಿ ಕಾರ್ಯಕರ್ತರ ಪ್ರಾಮಾಣಿಕ ಸೇವೆ ಹಾಗೂ ದಕ್ಷ ಆಡಳಿತಗಳೇ ಕಾರಣ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿ, ಮಾತನಾಡಿ ಈ 3 ದಿನಗಳ ತರಬೇತಿ ಅತ್ಯಂತ ಅರ್ಥಪೂರ್ಣವಾಗಿತ್ತು. ಈ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಸಂಯುಕ್ತ ಸಹಕಾರಿಯ ಎಲ್ಲಾ ನಿರ್ದೇಶಕರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.







## ಸಂಯುಕ್ತ ಸಹಕಾರಿಯ ನಿರ್ದೇಶಕರ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮಕ್ಕೆ ಸಹಕರಿಸಿದ ನಿರ್ದೇಶಕರಿಗೆಲ್ಲರಿಗೂ ಕೃತಜ್ಞತೆಗಳು.

### ನಿರ್ದೇಶಕರ ಅನಿಸಿಕೆಗಳು :



ಶ್ರೀಮತಿ ಸರಸ್ವತಿ : ಕಾರ್ಯಕ್ರಮ ಬಹಳ ಉತ್ತಮವಾಗಿತ್ತು. ನನಗೆ ವೈಯಕ್ತಿಕವಾಗಿ ಲಾಭವಾಗಿದೆ.

ಶ್ರೀ ಸಿದ್ಧರಾಮಪ್ಪ ಉಪ್ಪಿನ : ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ, ಅಳವಡಿಸಿದ್ದು ಮತ್ತು ವಿಷಯ ಪ್ರಸ್ತಾವನೆ ಚೆನ್ನಾಗಿತ್ತು. ತರಬೇತಿ ಉತ್ತಮವಾಗಿತ್ತು.

ಶ್ರೀ ಜಿ.ಶ್ರೀಧರ : ಪ್ರತಿ ಆಡಳಿತ ಮಂಡಲಿ ಸಭೆಯ ನಂತರ ಒಂದು ವಿಷಯದ ಬಗ್ಗೆ ತರಬೇತಿ ಏರ್ಪಡಿಸಿ.

ಶ್ರೀ ಬಿ.ಗಂಗಾಧರಯ್ಯ : ಈ ತರಹದ ತರಬೇತಿಗಳು ಆಗಾಗ್ಗೆ ನಡೆಯುತ್ತಿರಬೇಕು.

ಶ್ರೀ ಆರ್.ತಿಮ್ಮಯ್ಯ ಶೆಟ್ಟಿ : ತರಬೇತಿ ಬಹಳ ಪ್ರಯೋಜನಕಾರಿಯಾಗಿತ್ತು. ಆಡಳಿತದ ಬಗ್ಗೆ ಹೆಚ್ಚಿನ ತರಬೇತಿ ಅವಶ್ಯಕವಿದೆ. ಮುಂದಿನ ದಿನಗಳಲ್ಲಿ ವ್ಯವಸ್ಥೆ ಮಾಡಿ.

ಶ್ರೀ ಜಿ.ನಂಜನಗೌಡ : ವಿಷಯ ಪರಿಣಿತರಿಗೆ ಹೆಚ್ಚಿನ ಆದ್ಯತೆ ಅಗತ್ಯ.

ಶ್ರೀ ಚಂದ್ರಕಾಂತ ಪಡಚಣ್ಣನವರ : ಪ್ರತಿ ವರ್ಷ ಈ ರೀತಿ ತರಬೇತಿ ನಡೆಯಬೇಕು. ತರಬೇತಿ ಉತ್ತಮವಾಗಿತ್ತು.

ಶ್ರೀ ಎಂ.ಬಿ.ಕಲಾಲ : ಸಂಪನ್ಮೂಲ ವ್ಯಕ್ತಿಗಳು ಸಹಕಾರ ಕಾಯ್ದೆಗಳಿಗೆ ಪೂರಕವಾಗಿರಬೇಕು. ಶ್ರೀ ಸಿ.ಎನ್. ಪರಶಿವಮೂರ್ತಿಯವರಂತಹ ವ್ಯಕ್ತಿಗಳಿಗೆ ಪ್ರಾಶಸ್ತ್ಯ ನೀಡುವುದು ಸೂಕ್ತ.

ಶ್ರೀ ಸಂಜೀವ ಮಹಾಜನ : ಸೌಹಾರ್ದ ಸಹಕಾರಿ ಕಾಯ್ದೆಯ ಬಗ್ಗೆ ಇನ್ನೂ ಹೆಚ್ಚು ವಿವರವಾಗಿ ತರಬೇತಿ ಬೇಕು.

ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ : ಆಗಿಂದಾಗ್ಗೆ ಈ ರೀತಿಯ ತರಬೇತಿ ನೀಡುವುದು ಒಳ್ಳೆಯದು.

ಶ್ರೀ ಜಿ.ಎನ್.ಪಾಟೀಲ : ಸೌಹಾರ್ದ ಸಹಕಾರಿ ಕಾನೂನು, ನಿಯಮಗಳು, ದಾವೆಗಳು, ಜಡ್ಜ್‌ಮೆಂಟ್‌ಗಳ ಬಗ್ಗೆ ಗಮನ ಹರಿಸುವ ವಿಷಯಗಳನ್ನು ಅಳವಡಿಸಿ.

ಶ್ರೀ ಮಂಜುನಾಥ : ಒಳ್ಳೆಯದಾಗಿತ್ತು. ಪ್ರತಿ ವರ್ಷ ಇಂತಹ ಕಾರ್ಯಕ್ರಮ ಏರ್ಪಡಿಸಿ.

ಶ್ರೀ ವೈ.ಟಿ.ಪಾಟೀಲ : ತರಬೇತಿ ಬಹಳ ಚೆನ್ನಾಗಿತ್ತು. ತರಬೇತಿಗಳು ಆಗಿಂದಾಗ್ಗೆ ಹಮ್ಮಿಕೊಳ್ಳಬೇಕು.

## ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ

## ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮ ತರಬೇತಿಯಿಂದ ಪ್ರಗತಿ ಸಾಧ್ಯವಾಗುತ್ತಿದೆ - ಶ್ರೀ ವಸಂತ ನಾಯಕ



ಉದ್ಘಾಟನಾ ಕಾರ್ಯಕ್ರಮ

**ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ದಿನಾಂಕ 4, 5 ನವೆಂಬರ್ 2017ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಿದ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾಂತೀಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಹಿಸಿದ್ದರು.

ಶ್ರೀ ವಸಂತ ನಾಯಕರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಸಹಕಾರ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ನೂತನ ವ್ಯವಸ್ಥೆ. ಕಳೆದ ಹಲವಾರು ವರ್ಷಗಳಿಂದ ನಾನು ಗಮನಿಸುತ್ತಿರುವುದು ಈ ವ್ಯವಸ್ಥೆಯಲ್ಲಿ ಉತ್ತಮ ತರಬೇತಿಯನ್ನು ಸಂಯುಕ್ತ ಸಹಕಾರಿಯವರು ನೀಡುತ್ತಿರುವುದು ಇದರ ಬೆಳವಣಿಗೆಗೆ ಕಾರಣವೆಂದು ನನ್ನ ಅಭಿಪ್ರಾಯವಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ತರಬೇತಿ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ಹಾಗೂ ಶಿಸ್ತುಬದ್ಧವಾಗಿ ನಡೆಯುತ್ತಿರುವುದು ಇತರರಿಗೆ ಮಾದರಿಯಾಗಿದೆ. ಉತ್ತಮ ವಿಷಯಗಳ ಹಾಗೂ ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಅಳವಡಿಸುತ್ತಿರುವುದು ಸ್ವಾಗತಾರ್ಹ. ಸಂಯುಕ್ತ ಸಹಕಾರಿಯವರನ್ನು ನಾನು ಅಭಿನಂದಿಸುತ್ತೇನೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಪ್ರತಿ 6 ತಿಂಗಳಿಗೊಮ್ಮೆ ಎರಡು ದಿನಗಳ ಕಾಲ ಅವರಿಗೆ ಅಗತ್ಯವೆನಿಸುವ ವಿಷಯಗಳನ್ನು ಅರಿತುಕೊಂಡು ಉತ್ತಮ ತರಬೇತಿಯನ್ನು ನೀಡಲಾಗುತ್ತಿದೆ. ಜೊತೆಗೆ ಅವರು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ನಿರ್ವಹಣೆಗೆ ಪೂರಕವಾಗುವ ಅಂಶಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತೇವೆ. ಮುಂಬರುವ ಕಾರ್ಯಕ್ರಮಗಳ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸುತ್ತೇವೆ ಮತ್ತು ಉತ್ತಮ ಹಾಗೂ ಪ್ರಚಲಿತ ವಿಷಯಗಳ ಅಧ್ಯಯನ ಮಾಡುತ್ತೇವೆ ಎಂದು ತಿಳಿಸಿದರು.

ತರಬೇತಿಯ ಮೊದಲನೆಯ ದಿನದಂದು ಸಹಕಾರ ಇಲಾಖೆಯ ಅಪರ ನಿಬಂಧಕರು ಹಾಗೂ ಕರ್ನಾಟಕ ರಾಜ್ಯ ಗ್ರಾಹಕ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಗುರುಸ್ವಾಮಿಯವರು ಪರಿವೀಕ್ಷಣೆ ಕುರಿತು ಹಾಗೂ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಎಸ್.ಜಿ.ಜೋಶಿಯವರು ದಾವಾ ದಾಖಲಾತಿ ಕ್ರಮಗಳ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಕವಿತಾರವರು ನೆರವೇರಿಸಿದರು. ಸ್ವಾಗತವನ್ನು ಶ್ರೀ ಸಂತೋಷ್‌ರವರು ನೆರವೇರಿಸಿದರೆ, ಶ್ರೀ ರಾಜೇಂದ್ರರಾವ್ ಶಿಂಧೆರವರು ವಂದನೆಗಳನ್ನು ಸಲ್ಲಿಸಿದರು.

ಎರಡನೆಯ ದಿನದಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ವಿಭಾಗಗಳ ಕಾರ್ಯಚಟುವಟಿಕೆಗಳ ಹಾಗೂ ವಿಭಾಗವಾರು ಕಾರ್ಯಚಟುವಟಿಕೆಗಳ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲಾಯಿತು. ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಮಾತನಾಡಿ, ಸಂಯುಕ್ತ ಸಹಕಾರಿಯ ಎಲ್ಲಾ ಸಿಬ್ಬಂದಿಯವರು ಸೌಹಾರ್ದ ಸಹಕಾರಿಯ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ತಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವುದು ಸದ್ಯದ ಅಗತ್ಯತೆಯಾಗಿದೆ. ಕೇಂದ್ರ ಕಛೇರಿಯಾಗಿರಬಹುದು ಅಥವಾ ವಿಭಾಗೀಯ ಕಛೇರಿಯಾಗಿರಬಹುದು, ಎಲ್ಲಾ ಸಿಬ್ಬಂದಿಯವರು ಸೌಹಾರ್ದ ಸಹಕಾರಿಗಳ ಭಾವನೆಗಳಿಗೆ ಸ್ಪಂದಿಸುವಂತೆ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ, ಸಂಯುಕ್ತ ಸಹಕಾರಿಯ ಎಲ್ಲಾ ಸಿಬ್ಬಂದಿಯವರು ಅತ್ಯಂತ ಉತ್ಸಾಹಶಾಲಿಗಳು ಹಾಗೂ ಕ್ರಿಯಾಶೀಲರಾಗಿರುವುದನ್ನು ಗಮನಿಸುತ್ತಾ ಬಂದಿದ್ದೇನೆ. ನಿಮ್ಮೆಲ್ಲರ ಉತ್ಸಾಹಕ್ಕೆ ಪೂರಕವಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಕಾರ್ಯನಿರ್ವಹಿಸುವಂತೆ ಕ್ರಮವಿಡುವುದಾಗಿ ಭರವಸೆ ನೀಡುತ್ತಾ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಸಿಬ್ಬಂದಿಗಳ ಪಾತ್ರ ಮಹತ್ವದ್ದಾಗಿದೆ. ಸಾಮಾನ್ಯ ಸಭೆಯ, ಆಡಳಿತ ಮಂಡಲಿ ಸಭೆಯ ಹಾಗೂ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಕ್ರಿಯಾಶೀಲತೆಗಳಿಗೆ ಸಿಬ್ಬಂದಿಯವರು ಸ್ಪಂದಿಸದಿದ್ದರೆ ಯಾವ ಅಭಿವೃದ್ಧಿಯೂ ಸಾಧ್ಯವಾಗುವುದಿಲ್ಲ. ಆದ್ದರಿಂದ, ಸಿಬ್ಬಂದಿಯವರು ಪೂರ್ಣಪ್ರಮಾಣದಲ್ಲಿ ಜ್ಞಾನವನ್ನು ಹೊಂದಿರಬೇಕು. ಕಛೇರಿ ಹಾಗೂ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೊಂದಿರುವುದು ಅವಶ್ಯಕ. ಅದಕ್ಕಾಗಿ ಈ ತರಬೇತಿ ಎಂದು ತಿಳಿಸಿದರು ಮತ್ತು ನೂತನ ಆಡಳಿತ ಮಂಡಲಿಯವರು ಹಾಕಿಕೊಂಡಿರುವ ಕ್ರಿಯಾಯೋಜನೆಗಳ ಅನುಷ್ಠಾನಕ್ಕೆ ಸಿಬ್ಬಂದಿಯವರು ಸಂಪೂರ್ಣ ಸಹಕಾರ ನೀಡಲು ಕೋರಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಪ್ರಭಯ್ಯ ಹಿರೇಮಠರವರು ನೆರವೇರಿಸಿದರು. ಶ್ರೀ ಗುರುಪ್ರಸಾದ್ ಬಂಗೇರರವರು ವಂದನೆಗಳನ್ನು ಸಲ್ಲಿಸಿದರು.



## ಸಂಯುಕ್ತ ಸಹಕಾರಿಯ ನಿರ್ದೇಶಕರ ವ್ಯಕ್ತಿ ಪರಿಚಯ ಭಾಗ - 6

### ಶ್ರೀ ವಿಶ್ವನಾಥ ಚ. ಹಿರೇಮಠ

ಸಹಕಾರ ರತ್ನ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ಮೂಲತಃ ರಾಯಚೂರು ಜಿಲ್ಲೆಯ ಸಿಂಧನೂರಿನವರು. ಬಿ.ಎ. ಪದವೀಧರರಾದ ಇವರು ಶ್ರೀ ಚನ್ನಬಸಯ್ಯ ಹಿರೇಮಠ ಹಾಗೂ ಶ್ರೀಮತಿ ಗಂಗಾದೇವಿ ದಂಪತಿಗಳ ಆರನೇ ಮಗ. ಶ್ರೀಯುತರು 3 ಜನ ಸಹೋದರಿಯರನ್ನು ಮತ್ತು 5 ಜನ ಸಹೋದರರನ್ನು ಹೊಂದಿದ್ದ ದೊಡ್ಡ ಕುಟುಂಬದಲ್ಲಿ ಬೆಳೆದವರು. ಬಾಲ್ಯದಿಂದಲೂ ಮನೆತನದ ವೃತ್ತಿಯಾದ ಮುದ್ರಣ ವೃತ್ತಿಯನ್ನೇ ಮುಂದುವರೆಸಿಕೊಂಡು ಬಂದ ಶ್ರೀಯುತರು 1991ರಲ್ಲಿ ಹೊಸಪೇಟೆಗೆ ಬಂದು ನೆಲೆಸಿದರು. ಪ್ರಸ್ತುತ ಹೊಸಪೇಟೆಯಲ್ಲಿ ಮೆ॥ ಗಂಗಾ ಏಜೆನ್ಸೀಸ್ (ಪೆಟ್ರೋಲ್ ಬಂಕ್), ಮೆ॥ ಕೃತಿಕಾ ರೋಡ್‌ಲೈನ್ಸ್ ಹಾಗೂ ಸಿಂಧನೂರಿನಲ್ಲಿ ಮೆ॥ ನವ್ಯಶ್ರೀ ಇಂಡಸ್ಟ್ರೀಸ್ ನಡೆಸುತ್ತಿದ್ದಾರೆ.

ಶ್ರೀ ವಿಶ್ವನಾಥ ಚ. ಹಿರೇಮಠರವರು ಮೊದಲಿನಿಂದಲೂ ಸಾಮಾಜಿಕ ಕಳಕಳಿ ಹಾಗೂ ಸಹಕಾರಿ ಮನೋಭಾವದ ಗುಣಧರ್ಮವನ್ನು ಬೆಳೆಸಿಕೊಂಡವರು. ಇದಕ್ಕೆ ಇವರು ಕಟ್ಟಿ ಬೆಳೆಸಿದ ಸಂಸ್ಥೆಗಳ ಯಶೋಗಾಥೆಗಳೇ ಸಾಕ್ಷಿ. ಇವರು ಸಿಂಧನೂರಿನಲ್ಲಿ ಪ್ರಾರಂಭಿಸಿದ ವಿಕಾಸ ಯುವಕ ಮಂಡಳಿ ರಾಜ್ಯ ಪ್ರಶಸ್ತಿ ಪಡೆದು ಒಂದು ಮಾದರಿ ಸಮಾಜ ಸೇವಾ ಸಂಸ್ಥೆಯಾಗಿದೆ. ಹೊಸಪೇಟೆಯಲ್ಲೂ ಕೂಡ ವಿಕಾಸ ಯುವಕ ಮಂಡಳ ಸಕ್ರಿಯವಾಗಿದ್ದು, ಅನೇಕ ಸಮಾಜಮುಖಿ ಚಟುವಟಿಕೆಗಳನ್ನು ನಡೆಸುತ್ತಿದೆ.



ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

ಸಹಕಾರಿ ತತ್ವಗಳ ಆಧಾರದಲ್ಲಿ 1997ರಲ್ಲಿ ಇವರ ಅಧ್ಯಕ್ಷತೆಯಲ್ಲಿ ವಿಕಾಸ ಕೋ-ಆಪರೇಟಿವ್ ಬ್ಯಾಂಕ್ ಪ್ರಾರಂಭವಾಯಿತು. ಅಲ್ಪ ಸಮಯದಲ್ಲಿಯೇ ವಿಕಾಸ ಕೋ-ಆಪರೇಟಿವ್ ಬ್ಯಾಂಕ್ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರತಿಷ್ಠಿತ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ ಜಾರಿ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಲ್ಲದೇ, ವಿಕಾಸ ಬ್ಯಾಂಕ್ 2001ರಲ್ಲಿ ಜಾರಿಗೆ ಬಂದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ನೋಂದಣಿಗೊಂಡ ರಾಜ್ಯದ ಎರಡನೇ ಸಹಕಾರಿ ಸಂಸ್ಥೆಯಾಗಿದೆ. ಆಧುನಿಕತೆ ಹಾಗೂ ತಂತ್ರಜ್ಞಾನಗಳ ಸರಿಯಾದ ಬಳಕೆಯ ಬಗ್ಗೆ ಮೊದಲ ದಿನದಿಂದಲೇ ಅನೇಕ ಹೊಸ ಆಯಾಮಗಳನ್ನು ಅನುಷ್ಠಾನಗೊಳಿಸಿದ ವಿಕಾಸ ಬ್ಯಾಂಕ್ ಯಾವುದೇ ಬಹುರಾಷ್ಟ್ರೀಯ ಬ್ಯಾಂಕಿಗಿಂತ ಕಡಿಮೆ ಇಲ್ಲದಂತೆ ಕಾರ್ಯನಿರ್ವಹಿಸುತ್ತಿದೆ. ದೇಶದಲ್ಲೇ ಪ್ರಪ್ರಥಮ ಬಾರಿಗೆ ವರ್ಷದ 365 ದಿನಗಳೂ ರಜೆ ರಹಿತವಾಗಿ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಬ್ಯಾಂಕಿಂಗ್ ಸೇವೆ ಒದಗಿಸುವ ಮೂಲಕ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಯಿತು.

ನಷ್ಟದಲ್ಲಿದ್ದ ಹುಬ್ಬಳ್ಳಿಯ ದಿ ಅಭಿನಂದನ ಸಹಕಾರಿ ಬ್ಯಾಂಕನ್ನು ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ವಿಲೀನಗೊಳಿಸಿಕೊಂಡು ಒಂದೇ ವರ್ಷದ ಅವಧಿಯಲ್ಲಿ ಆ ಬ್ಯಾಂಕನ್ನು ಲಾಭದೆಡೆಗೆ ಕೊಂಡೊಯ್ದದ್ದು ಇವರ ದೂರದೃಷ್ಟಿಗೆ ಸಾಕ್ಷಿಯಾಗಿದೆ. ವಿಕಾಸ ಬ್ಯಾಂಕ್ ತನ್ನ ವೈಶಿಷ್ಟ್ಯಪೂರ್ಣ ಸೇವೆಗಳಿಂದ ಗ್ರಾಹಕರ ಮೆಚ್ಚುಗೆ ಪಡೆದು, ಸನ್ 2012ರ ಗದುಗಿನಲ್ಲಿ ನಡೆದ ಸಹಕಾರ ಸಪ್ತಾಹದಲ್ಲಿ ಬ್ಯಾಂಕಿಗೆ "ಉತ್ತಮ ಸಹಕಾರ ಬ್ಯಾಂಕ್" ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷರಾಗಿದ್ದ ಇವರ ಅವಧಿಯಲ್ಲಿ ಸಂಯುಕ್ತ ಸಹಕಾರಿ ಕೂಡಾ ಹೊಸ ರೂಪ ಪಡೆಯಿತು. ಸಹಕಾರಿ ಸಂಸ್ಥೆಯ ಸಿಬ್ಬಂದಿಗಳಿಗೆ ನಿಯಮಿತ ಪ್ರಶಿಕ್ಷಣ, ಜಿಲ್ಲಾವಾರು ಸಹಕಾರಿಗಳ ಸಮಾವೇಶ ಮುಂತಾದ ಕಾರ್ಯಕ್ರಮಗಳು ನಿಯಮಿತವಾಗಿ ನಡೆಯುವಂತಾದವು. ಅಲ್ಲದೇ, ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆ ಹೊಸ ರೂಪ ಪಡೆದುಕೊಂಡು ಹೆಚ್ಚು ಪ್ರಚಲಿತವಾಯಿತು.

ಇವರ ನೇತೃತ್ವದಲ್ಲಿ ಹೊಸಪೇಟೆಯಲ್ಲಿ ಆರಂಭವಾದ ವಿಕಾಸ ಶಿಕ್ಷಣ ಸೌಹಾರ್ದ ಸಹಕಾರಿಯ ಅಡಿಯಲ್ಲಿ ಸಿಂಧನೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಾಸ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಆ ಪ್ರದೇಶದ ಒಂದು ಅತ್ಯುತ್ತಮ ವಿದ್ಯಾ ಸಂಸ್ಥೆಯಾಗಿದ್ದು, ಸುಸಜ್ಜಿತ ಶಾಲಾ ಕಟ್ಟಡ, ವಿಶಾಲ ಆಟದ ಮೈದಾನ, ಹೊಸ ಆವಿಷ್ಕಾರವಾದ ಡಿಜಿಟಲ್ ಕ್ಲಾಸ್, ಮಕ್ಕಳಿಗೆ ವಿವಿಧ ಇಲಾಖೆಗಳ "ಮಾಸಿಕ ಸ್ಥಳೀಯ ಭೇಟಿ" ಕಾರ್ಯಕ್ರಮ ಹಾಗೂ ಮಕ್ಕಳಲ್ಲಿ ಬರವಣಿಗೆ ಹವ್ಯಾಸ ಅಭಿವೃದ್ಧಿಗಾಗಿ "ಚಿಣ್ಣರ ವಿಕಾಸ" ಮಾಸ ಪತ್ರಿಕೆ-ಹೀಗೆ ಹತ್ತು ಹಲವು ವಿಶೇಷತೆಗಳಿಂದ ಕೂಡಿದ ಉತ್ತಮ ಶಾಲೆಯಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಸಂಸ್ಥಾಪಕ ನಿರ್ದೇಶಕರಾಗಿ ಹಾಗೂ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ಇದರ ನಿರ್ದೇಶಕರಾಗಿ, ಕರ್ನಾಟಕ ಸೌಹಾರ್ದ ಒಕ್ಕೂಟ ಸಹಕಾರಿ ನಿಯಮಿತ, ಬೆಂಗಳೂರು ಇದರ ಉಪಾಧ್ಯಕ್ಷರಾಗಿ, ವಿಕಾಸ ಶಿಕ್ಷಣ ಸೌಹಾರ್ದ ಸಹಕಾರಿ ನಿಯಮಿತ, ಹೊಸಪೇಟೆ ಇದರ ಸಂಸ್ಥಾಪಕ ನಿರ್ದೇಶಕರಾಗಿ ಹಾಗೂ ಬಳ್ಳಾರಿ ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ, ಹೊಸಪೇಟೆ ಇದರ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಶ್ರೀ ವಿಶ್ವನಾಥ ಚ. ಹಿರೇಮಠರವರು ಆಯಾ ಸಂಸ್ಥೆಗಳ ವಿಕಾಸದಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ಕರ್ನಾಟಕ ಸರಕಾರವು ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ನೀಡಿರುವ ಅಮೂಲ್ಯ ಸೇವೆಯನ್ನು ಗುರುತಿಸಿ ಸನ್ 2012ರಂದು ಮೈಸೂರಿನಲ್ಲಿ ನಡೆದ ಸಹಕಾರಿ ಸಪ್ತಾಹ ದಿನದಂದು "ಸಹಕಾರ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಪ್ರಸ್ತುತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ನಿರ್ದೇಶಕರಾಗಿ ಕಲಬುರಗಿ ವಿಭಾಗದಿಂದ ಆಯ್ಕೆಯಾಗಿದ್ದಾರೆ.

ಸಹಕಾರ ಕ್ಷೇತ್ರದ ಹೊರತಾಗಿ, ಸಾಮಾಜಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿಯೂ ತಮ್ಮನ್ನು ತಾವೂ ತೊಡಗಿಸಿಕೊಂಡಿದ್ದಾರೆ. ಜಂಪ್‌ರೋಪ್ ಫೆಡರೇಷನ್ ಆಫ್ ಇಂಡಿಯಾ ಇದರ ಉಪಾಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಜಂಪ್‌ರೋಪ್ ಅಸೋಸಿಯೇಷನ್‌ನ ಸಂಸ್ಥಾಪಕ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಫುಟ್‌ಬಾಲ್ ಟೆನ್ನಿಸ್ ಅಸೋಸಿಯೇಷನ್‌ನ ಸಂಸ್ಥಾಪಕ ಅಧ್ಯಕ್ಷರಾಗಿ, ಹೊಸಪೇಟೆ ಪೋಸ್ಟಲ್ ಫೋರಮ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಹೊಸಪೇಟೆ ತಾಲೂಕ ಕಾನೂನು ನೆರವು ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಪತ್ನಿ ಶ್ರೀಮತಿ ಸುಧಾ ಹಾಗೂ ಪುತ್ರಿ ಕು. ನವ್ಯಶ್ರೀ ಅವರಿಂದ ಕೂಡಿದ ಸುಖಿಃ ಸಮಾಜಮುಖಿ ಕುಟುಂಬ ಇವರದ್ದಾಗಿದೆ.

## ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

ಚಿತ್ರದುರ್ಗ ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿ ಪಕ್ಷಾತೀತವಾಗಿ, ರಾಜಕೀಯೇತರವಾಗಿ, ಧರ್ಮಾತೀತವಾಗಿ ಹೆಸರಿಸಬಹುದಾದ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಎಸ್. ಆರ್.ಲಕ್ಷ್ಮೀಕಾಂತ ರೆಡ್ಡಿಯವರು ಒಬ್ಬರು. ಸಹಕಾರ ಕ್ಷೇತ್ರದಲ್ಲಿ ಸರಿಸುಮಾರು 36 ವರ್ಷಗಳಿಂದ ಅವಿರತ ಸೇವೆ ಸಲ್ಲಿಸುತ್ತಿದ್ದು, ಸಹಕಾರ, ಸಮಾನತೆ, ಸಹಬಾಳ್ವೆ, ಸಮರಸ ಇವುಗಳನ್ನು ತಮ್ಮ ಜೀವನದಲ್ಲಿಯೂ, ಸಹಕಾರ ರಂಗದಲ್ಲಿಯೂ ಅಳವಡಿಸಿಕೊಂಡು ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

ಚಿತ್ರದುರ್ಗ ನಗರದ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ವಾಣಿಜ್ಯೋದ್ಯಮಿ ಯಾಗಿರುವ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ಸಹಕಾರ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು 1976ರಲ್ಲಿ ರಡ್ಡಿ ಸಹಕಾರ ಬ್ಯಾಂಕ್‌ನ ಚಿತ್ರದುರ್ಗ ಶಾಖಾ ಸಮಿತಿಯ ಉಪಾಧ್ಯಕ್ಷರಾಗುವ ಮುಖೇನ.

ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಗಾಗಿ ಹಾಗೂ ಸೇವೆಗಾಗಿ ಅವರು ಆಯ್ದುಕೊಂಡಿದ್ದು ನಗರದ ಪ್ರತಿಷ್ಠಿತ ಮರ್ಚೆಂಟ್ಸ್ ಸಹಕಾರ ಬ್ಯಾಂಕ್‌ನ್ನು. 1978ರಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾದ ಶ್ರೀಯುತರ ಆಡಳಿತ ಕೌಶಲ್ಯವನ್ನು ಮನಗಂಡ ಆಡಳಿತ ಮಂಡಳಿಯ ಸದಸ್ಯರು ಅವರನ್ನು 1979ರಲ್ಲಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಆಯ್ಕೆ ಮಾಡುತ್ತಾರೆ. 1979 ರಿಂದ 1983ರವರೆಗೆ ಬ್ಯಾಂಕಿನಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ನಂತರ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಪ್ರಮುಖ ಆದ್ಯತೆಯನ್ನು ನೀಡಿ ಪ್ರಗತಿಯ ಪಥದತ್ತ ಸಾಗಲು ಶ್ರಮಿಸಿರುತ್ತಾರೆ.

1991ರಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಇವರ ಆಡಳಿತಾವಧಿಯಲ್ಲಿ ಬ್ಯಾಂಕಿನ ಪ್ರಗತಿ ಹಾಗೂ ವ್ಯವಹಾರ ಉನ್ನತ ಮಟ್ಟಕ್ಕೆ ಏರಿತು ಹಾಗೂ ಜಿಲ್ಲೆಯ ಪ್ರತಿಷ್ಠಿತ ಬ್ಯಾಂಕ್ ಎಂದು ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿತು.

1991 ರಿಂದ ಇಲ್ಲಿಯವರೆಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಇವರ ಆಡಳಿತ ಅವಧಿಯಲ್ಲಿ ಬ್ಯಾಂಕು ಅನುಕರಣೀಯವಾಗಿರುತ್ತದೆ. 26 ಕೋಟಿ ರೂ.ಗಳ ಸ್ವಂತ ಬಂಡವಾಳ, 131 ಕೋಟಿ ರೂ.ಗಳ ವ್ಯವಹಾರ, 3.60 ಕೋಟಿ ರೂ.ಗಳ ವರಮಾನ ಗಳಿಸಿ ಪ್ರಗತಿಯ ಪಥದತ್ತ ಸಾಗುತ್ತಿದೆ. 9 ಗಣಕೀಕೃತ ಶಾಖೆಗಳನ್ನು ತೆರೆಯಲಾಗಿದೆ. 5 ಆಧುನಿಕ ಸ್ವಂತ ಕಟ್ಟಡಗಳನ್ನು ನಿರ್ಮಿಸಿದ್ದು, ಸದಸ್ಯರ ಹಾಗೂ ಗ್ರಾಹಕರ ಸೇವೆಯಲ್ಲಿ ಉನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ಕೋರ್ ಬ್ಯಾಂಕಿಂಗ್ ಅಳವಡಿಸಿದ ಜಿಲ್ಲೆಯ ಮೊದಲ ಸಹಕಾರಿ ಬ್ಯಾಂಕ್ ಆಗಿರುತ್ತದೆ. ಸದಸ್ಯರಿಗೆ ಹಾಗೂ ಗ್ರಾಹಕರಿಗೆ RTGS/ NEFT, SMS Alerts, Missed Call Banking ಸೌಲಭ್ಯವನ್ನು ಕಲ್ಪಿಸಲಾಗಿದೆ. ಮೃತ ಸದಸ್ಯರ ಕುಟುಂಬ ವರ್ಗದವರಿಗೆ ರೂ.5,000/–ಗಳ ಅಂತ್ಯ ಸಂಸ್ಕಾರ ಮೊಬಲಗನ್ನು ಪಾವತಿಸಲಾಗುತ್ತಿದೆ. ಸದಸ್ಯರಿಗೆ ರಿಯಾಯಿತಿ ದರದಲ್ಲಿ ಆಂಬುಲೆನ್ಸ್ ಸೇವೆಯನ್ನು ಒದಗಿಸಿದೆ.

ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ತುರ್ತು ಚಿಕಿತ್ಸಾ ಘಟಕ, ನಗರದ ಮುಕ್ತಿಧಾಮಕ್ಕೆ ಉಚಿತ ಶವ ಸಾಗಾಣಿಕೆಗೆ ವಾಹನದ ಕೊಡುಗೆ, ನಾಗರೀಕ ಸೇವಾ ಸಮಿತಿಯ ಸಹಯೋಗದಿಂದ ಪೋಲೀಸ್ ಇಲಾಖೆಗೆ ಆಂಬುಲೆನ್ಸ್ ವಾಹನದ ಕೊಡುಗೆಯನ್ನು ಬ್ಯಾಂಕಿನ ವತಿಯಿಂದ ಕೊಡಲಾಗಿದೆ. ಇವರ ಅಧ್ಯಕ್ಷತೆಯ ಆಡಳಿತಾವಧಿಯಲ್ಲಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ವತಿಯಿಂದ ನಗರದ ವಿವಿಧ ಬಡಾವಣೆಗಳಲ್ಲಿ 5 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ, 5/– ರೂ.ಗಳಿಗೆ 20 ಲೀಟರ್ ಶುದ್ಧ ಕುಡಿಯುವ ನೀರನ್ನು ನಗರದ ಜನತೆಗೆ ಪೂರೈಸಲಾಗುತ್ತಿದೆ. 2013ನೇ ಡಿಸೆಂಬರ್‌ನಲ್ಲಿ ಚಿತ್ರದುರ್ಗ ನಗರದಲ್ಲಿ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರ ಹಿತೈಷಿಗಳ ಬಳಗ, ಅಭಿಮಾನಿಗಳ ಬಳಗ ಹಾಗೂ ಮಿತ್ರ ವೃಂದದವರಿಂದ ಅವರಿಗೆ ಅದ್ದೂರಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿ, ಸೇವಾ ಸಂಪನ್ನ ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಯಿತು.

ಸಹಕಾರ ರಂಗಕ್ಕೆ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ, 2016ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಸಹಕಾರ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ 'ಸಹಕಾರ ರತ್ನ' ವನ್ನು ನೀಡಿ ಪುರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸ್ಥಾಪಕ ನಿರ್ದೇಶಕರಾಗಿದ್ದು, ಪ್ರಸ್ತುತ ನಿರ್ದೇಶಕರಾಗಿ ಮರು ಆಯ್ಕೆಯಾಗಿರುತ್ತಾರೆ.

## ಕ್ರಿಯಾಶೀಲ ವ್ಯಕ್ತಿತ್ವದ ಉತ್ತಮ ವಾಗ್ಮಿ ಹಾಗೂ ಸಹಕಾರಿ ಶ್ರೀ ಎಂ.ಬಿ. ಕಲಾಲ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಾಗಿ ಸತತ ಮೂರನೆಯ ಬಾರಿಗೆ ಆಯ್ಕೆಯಾಗಿ ಶ್ರೀ ಮಾರುತಿ ಬಾಬುರಾವ್ ಕಲಾಲರವರು ಮೂಲತಃ ಹಾನಗಲ್ಲದವರಾಗಿದ್ದು, ದಿನಾಂಕ : 23.03.1943ರಲ್ಲಿ ಶಿವಮೊಗ್ಗದಲ್ಲಿ ಶ್ರೀ ಬಾಬುರಾವ್‌ರವರ ಜೇಷ್ಠ ಪುತ್ರರಾಗಿ ಜನಿಸಿದವರು. ಬಟ್ಟೆ ವ್ಯಾಪಾರ ಹಾಗೂ ಕೃಷಿ ಇವರ ಕುಟುಂಬದ ಉದ್ಯೋಗವಾಗಿದ್ದು, ಪಿ.ಯು.ಸಿ.ವರೆಗೆ ಶಿಕ್ಷಣವನ್ನು ಹಾನಗಲ್ಲದಲ್ಲಿ ಪೂರೈಸಿದ್ದಾರೆ. ಶ್ರೀ ಎಂ.ಬಿ.ಕಲಾಲರವರು ಅವರ ಜೀವನದ ಅನುಭವವನ್ನು ಅವರ ಉತ್ತಮ ವಾಕ್ಚಾತುರ್ಯದ ಮೂಲಕ ಸಮಾಜದಲ್ಲಿ ಉತ್ತಮ ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ.

ತಮ್ಮ ಉದ್ಯೋಗದ ಜೊತೆಗೆ ಸಮಾಜದ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿರುವ ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಕಳೆದ 50 ವರ್ಷಗಳಿಂದ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಹಾನಗಲ್ಲದಲ್ಲಿ ವಿವಿಧ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಿ, ಪ್ರಸ್ತುತ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಹಕಾರಿ ಸಂಸ್ಥೆಯ ಮೂಲಕ ವಿಶೇಷವಾಗಿ ಬಡ ಜನರಿಗೆ ಅನುಕೂಲವಾಗುವಂತೆ ಮೈಕ್ರೋ ಫೈನಾನ್ಸ್

ಯೋಜನೆಗಳನ್ನು ಕಾರ್ಯಗತಗೊಳಿಸಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಹುಟ್ಟು ಹಾಕಿ, ಅನೇಕ ಬಡ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ರಾಮಕೃಷ್ಣ ಹೆಗಡೆಯವರ ಆಡಳಿತ ವೈಖರಿ, ಅವರ ಧ್ಯೇಯ, ಧೋರಣೆಗಳು, ಸಾಮಾಜಿಕ ಕಳಕಳಿ, ಸಂಘಟನಾ ಕಲೆ, ವಾಕ್ಚಾತುರ್ಯ ಮುಂತಾದುವುಗಳಿಗೆ ಮೆಚ್ಚಿ, ಅವರ ನಡೆಯನ್ನು ರಾಜಕಾರಣಿಗಳಿಗೆ ಅನುಕರಣೀಯ ಎಂದು ಅಭಿಪ್ರಾಯಪಡುವ ಶ್ರೀಯುತರು ಸಹಕಾರ ಕ್ಷೇತ್ರದಲ್ಲಿಯೂ ಕೂಡ ಉತ್ತಮ ನಾಯಕತ್ವದ ಅವಶ್ಯಕತೆ ಇದೆ, ಯುವಕರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ಪ್ರವೇಶಿಸಬೇಕು, ಸಹಕಾರಿ ತತ್ವಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಸಹಕಾರಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ತಮ್ಮ ಮಹತ್ವದ ಪಾತ್ರವನ್ನು ನಿರ್ವಹಿಸಲು ಮುಂದಾಗಬೇಕು ಎಂದು ಹೇಳುತ್ತಾರೆ.

ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಶ್ರೀಯುತರು ಈ ಕ್ಷೇತ್ರದಲ್ಲಿ ಹೆಚ್ಚಿನ ಸ್ವಾಯತ್ತತೆ ಇದೆ, ಸ್ವಾಯತ್ತತೆಯಿಂದ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ, ಕೆಲವು ಸೌಹಾರ್ದ ಸಹಕಾರಿಗಳಲ್ಲಿ ಸ್ವಾಯತ್ತತೆ ಸ್ವೇಚ್ಛಾಚಾರವಾಗಿರುವುದು ಕಂಡುಬರುತ್ತಿದೆ, ಇದನ್ನು ಧಮನ ಮಾಡಬೇಕು, ಇದಕ್ಕೆ ಅವಕಾಶ ಕೊಡಬಾರದು, ಸೌಹಾರ್ದ ಸಹಕಾರಿ ಕ್ಷೇತ್ರ ಸಂಖ್ಯಾತ್ಮಕವಾಗಿ ಬೆಳೆಯುವುದಕ್ಕಿಂತಲೂ ಗುಣಾತ್ಮಕವಾಗಿ ಬೆಳೆಯುವುದು ಅವಶ್ಯಕ ಎಂದು ಅಭಿಪ್ರಾಯ ಹೊಂದಿದ್ದಾರೆ.

## ಗುರನಗೌಡ ನಿಂಗನಗೌಡ ಪಾಟೀಲ

ಬೆಳಗಾವಿ ವಿಭಾಗದಿಂದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಎರಡನೇ ಬಾರಿ ಆಯ್ಕೆಯಾಗಿರುವ ಶ್ರೀ ಗುರನಗೌಡ ನಿಂಗನಗೌಡ ಪಾಟೀಲರವರು ಮೂಲತಃ ಬಾಗಲಕೋಟೆ ಜಿಲ್ಲೆಯವರು. ಕುಷ್ಟಗಿ ತಾಲ್ಲೂಕಿನ ಕಡೂರಿನಲ್ಲಿ ಸುಸಂಸ್ಕೃತ ಕೃಷಿ ಕುಟುಂಬದಲ್ಲಿ ದಿನಾಂಕ 22–11–1950ರಂದು ಜನಿಸಿದರು. ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಕಾಲೇಜು ಶಿಕ್ಷಣವನ್ನು ಬಾಗಲಕೋಟೆಯಲ್ಲಿ ಪೂರೈಸಿ, ನಂತರ ಕಾನೂನು ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿ, ತಮ್ಮ ಕೃಷಿ ಉದ್ಯೋಗದ ಜೊತೆಗೆ ವಕೀಲಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು.



ಸಹಕಾರ ತತ್ವಗಳಲ್ಲಿ ಅಪಾರ ವಿಶ್ವಾಸವಿರಿಸಿಕೊಂಡಿರುವ ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಜನಸಾಮಾನ್ಯರಿಗೆ, ಸಮಾಜದ ಕಡುಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಮಾಡಲು ಸಾಧ್ಯ ಎಂಬುವುದಕ್ಕೆ ಸಹಕಾರ ಕ್ಷೇತ್ರದ ಅನೇಕ ಸಾಧನೆಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾಗಿ, ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಮಹಿಳೆಯರು ಹಾಗೂ ಯುವಕರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳುತ್ತಾರೆ.

ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿಯೂ ಸಹ ಶ್ರೀಯುತರು ಅನೇಕ ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಂಗಮೇಶ್ವರ ಶಿಕ್ಷಣ ಸಂಸ್ಥೆ, ವಿಜಯಪುರ ಇದರ ಚೇರ್‌ಮೆನ್ ಆಗಿ, ಕರ್ನಾಟಕ ಗ್ರಾಮೀಣ ವಿದ್ಯಾಪೀಠ, ಬಾಗಲಕೋಟೆ ಇದರ ಮ್ಯಾನೇಜಿಂಗ್ ಟ್ರಸ್ಟಿಯಾಗಿ, ಸ್ವಾಮಿ ಗಿರಿರಾಜ ಸ್ಕೂಲ್ ಆಫ್ ಮ್ಯೂಸಿಕ್‌ನ ಅಧ್ಯಕ್ಷರಾಗಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಉಪಾಧ್ಯಕ್ಷರಾಗಿ, ಅಖಿಲ ಭಾರತ ವೀರಶೈವ ಮಹಾಸಭಾದ ಮಹಾಪೋಷಕರಾಗಿ, ಬಸವೇಶ್ವರ ವಿದ್ಯಾವರ್ಧಕ ಸೈನ್ಸ್ ಕಾಲೇಜಿನ ಅಧ್ಯಕ್ಷರಾಗಿ ಹೀಗೆ ಇನ್ನೂ ಹಲವಾರು ವಿದ್ಯಾ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

2001 ರಿಂದ 2004ರವರೆಗೆ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ಬಾಗಲಕೋಟೆ ನಗರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲೂ ಅಪಾರ ಅನುಭವ ಹೊಂದಿರುವ ಶ್ರೀಯುತರು ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ದೇಶದ ಸಹಕಾರ ಚಳುವಳಿಯ ಸಾಧನೆಗಳನ್ನು ಜನಸಾಮಾನ್ಯರಿಗೆ ತಿಳುವಳಿಕೆ ಮಾಡಿಕೊಟ್ಟು ಸಹಕಾರ ಕ್ಷೇತ್ರವನ್ನು ಬಲಪಡಿಸುವಲ್ಲಿ ನಿರ್ದೇಶಕರುಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಅಭಿಪ್ರಾಯ ಪಡುತ್ತಾರೆ.

### ಶ್ರೀ ಚಂದ್ರಕಾಂತ ಪಡಚಣ್ಣನವರ ವ್ಯಕ್ತಿ ಪರಿಚಯ ಸ್ಪಷ್ಟೀಕರಣ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣನವರ ವ್ಯಕ್ತಿ ಪರಿಚಯವನ್ನು ಅಕ್ಟೋಬರ್ 2017ರ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸುವ ಸಂದರ್ಭದಲ್ಲಿ ಶ್ರೀಯುತರು ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಎಂದು ತಪ್ಪಾಗಿ ಮುದ್ರಿತವಾಗಿದೆ. ಅದನ್ನು "ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣನವರು 2017ರಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಆಯ್ಕೆಯಾದರು" ಎಂದು ಓದಿಕೊಳ್ಳುವುದು. ನಂತರ, 2003ರಲ್ಲಿ ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸಿದರು ಎಂಬುದನ್ನು "ಆರ್. ಎಸ್.ಎಸ್. ಸಂಘದ ಕಾರ್ಯಕರ್ತರ ನೇತೃತ್ವದಲ್ಲಿ 1973ರಲ್ಲಿ ಧಾರವಾಡ ಸಂಸ್ಥೆಯನ್ನು ಪ್ರಾರಂಭಿಸಲಾಯಿತು" ಎಂದು ಓದಿಕೊಳ್ಳುವುದು.

### ಪ್ರಶಸ್ತಿ



ರಾಜ್ಯದ ಹಿರಿಯ ಸಹಕಾರಿಗಳಾದ ಶ್ರೀ ರಮೇಶ್ ವೈದ್ಯ ಅವರಿಂದ ಸಹಕಾರ ಕ್ಷೇತ್ರದ ಪ್ರತಿಷ್ಠಿತ "ಇಫ್ಕೋ ರೈತ ಬಂಧು" ಪ್ರಶಸ್ತಿ ಸ್ವೀಕಾರ.

## ಕಲಬುರಗಿ ವಿಭಾಗ :

# ದಾವಾ ದಾಖಲಾತಿ ಕ್ರಮಗಳು ಮತ್ತು ಅಮಲ್ಜಾರಿ ದಾಖಲಾತಿಯಲ್ಲಿ ಅನುಸರಿಸಬೇಕಾದ ಕ್ರಮಗಳು ಕುರಿತು ತರಬೇತಿ

## ಸಹಕಾರಿಯ ಬೆಳವಣಿಗೆಗೆ ಸಾಲ ನೀಡುವುದರ ಜೊತೆಗೆ ವಸೂಲಾತಿಯು ಪ್ರಮುಖ ಪಾತ್ರ ವಹಿಸುತ್ತದೆ - ಶ್ರೀ ಗುರುನಾಥ ಜ್ಯಾಂತಿಕರ

**ಬೀದರ** : ದಿನಾಂಕ : 17.11.2017ರಂದು "ಸೌಹಾರ್ದ ಸಹಕಾರಿ ನ್ಯಾಯಾಲಯದಲ್ಲಿ ದಾವಾ ದಾಖಲಾತಿ ಕ್ರಮಗಳು ಮತ್ತು ಅಮಲ್ಜಾರಿ ದಾಖಲಾತಿಯಲ್ಲಿ ಅನುಸರಿಸಬೇಕಾದ ಕ್ರಮಗಳು" ಕುರಿತು ತರಬೇತಿಯನ್ನು ಬೀದರ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಶಾರದಾ ರೂಡ್‌ಸೆಟ್, ಪ್ರತಾಪ ನಗರ, ಬೀದರ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜ್ಯಾಂತಿಕರ, ನಿಕಟ ಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿ, ಮಾತನಾಡಿದರು. ಶ್ರೀ ವಿಶ್ವನಾಥ ಮಲಕೂಡ, ಸಹಕಾರಿಗಳ ಉಪನಿಬಂಧಕರು, ಬೀದರ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಸಂಜೀವ ಕುಮಾರ್ ಪಾಟೀಲ, ಉಪಾಧ್ಯಕ್ಷರು, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರು ಉಪಸ್ಥಿತರಿದ್ದರು.

ತರಬೇತಿಯ ಅವಧಿಯಲ್ಲಿ ದಾವಾ ದಾಖಲಾತಿ ಕ್ರಮಗಳು ಮತ್ತು ಅಮಲ್ಜಾರಿ ದಾಖಲಾತಿಯಲ್ಲಿ ಅನುಸರಿಸಬೇಕಾದ ಕ್ರಮಗಳು ಎಂಬ ವಿಷಯದ ಕುರಿತು ತರಬೇತಿಯನ್ನು ಏರ್ಪಡಿಸಲಾಗಿತ್ತು. ಸೌಹಾರ್ದ ಸಹಕಾರಿ ನ್ಯಾಯಾಲಯದ



ಸಿಬ್ಬಂದಿಗಳಾದ ಶ್ರೀ ರಾಚಯ್ಯ ಹಿರೇಮಠ ಹಾಗೂ ಶ್ರೀ ಶಿವಕಾಂತರವರು ಉಪನ್ಯಾಸ ನೀಡಿದರು. ಕಾರ್ಯಾಗಾರದಲ್ಲಿ 38 ಸೌಹಾರ್ದ ಸಹಕಾರಿಗಳಿಂದ 60 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು,

ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಶ್ರೀ ಶಿವಕುಮಾರ್.ಬಿ.ಎಸ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಶ್ರೀ ಬಲರಾಮ್.ಎಸ್, ಕಿರಿಯ ಅಧಿಕಾರಿ ಇವರು ನಿರೂಪಿಸಿ, ವಂದಿಸಿದರು.

## ಮೈಸೂರು ವಿಭಾಗ :

# ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಗೂ ಹಣಕಾಸು ನಿರ್ವಹಣೆಯ ಕುರಿತು ತರಬೇತಿ



**ಉಡುಪಿ** : ದಿನಾಂಕ : 22 ನವೆಂಬರ್ 2017ರಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಗೂ ಹಣಕಾಸು ನಿರ್ವಹಣೆಯ ಕುರಿತು ತರಬೇತಿ" ಕಾರ್ಯಕ್ರಮವನ್ನು ನೈವೇದ್ಯ ಹೋಟೆಲ್, ಉಡುಪಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರಾದ ಶ್ರೀ ಜಾರ್ಜ್ ಜೋಸೆಫ್ ಐ.ಆರ್.ಎಸ್, ಸಹಕಾರಿಗಳ ಉಪನಿಬಂಧಕರಾದ ಶ್ರೀ ಬಿ.ಪ್ರವೀಣ್ ನಾಯಕ್, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ವಿಠ್ಠಲ್ ಶೇರೇಗಾರ್, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್‌ನ ನಿವೃತ್ತ ಸಿ.ಜಿ.ಎಂ. ಶ್ರೀ ಮಹಾಬಲಗಿರಿರವರು ಉಪಸ್ಥಿತರಿದ್ದರು. ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣವನ್ನು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಈ ತರಬೇತಿಯಲ್ಲಿ 87 ಸೌಹಾರ್ದ ಸಹಕಾರಿಗಳಿಂದ 102 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮಂಗಳೂರು** : ದಿನಾಂಕ : 23 ನವೆಂಬರ್ 2017ರಂದು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಗೂ ಹಣಕಾಸು ನಿರ್ವಹಣೆಯ ಕುರಿತು ತರಬೇತಿ" ಕಾರ್ಯಕ್ರಮವನ್ನು ಕ್ಯಾಂಪ್ಕೋ ಲಿಮಿಟೆಡ್ ಸಭಾಭವನ, ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ಕ್ಯಾಂಪ್ಕೋದ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ, ವಾಣಿಜ್ಯ



ತೆರಿಗೆಗಳ ಜಂಟಿ ಆಯುಕ್ತರಾದ ಶ್ರೀ ಹೇಮಾ ಜಿ. ನಾಯಕ್, ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಬಿ.ಕೆ.ಸಲೀಂ, ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ, ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್‌ನ ನಿವೃತ್ತ ಸಿ.ಜಿ.ಎಂ. ಶ್ರೀ ಮಹಾಬಲಗಿರಿರವರು ಉಪಸ್ಥಿತರಿದ್ದರು. ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣವನ್ನು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಈ ತರಬೇತಿಯಲ್ಲಿ 65 ಸೌಹಾರ್ದ ಸಹಕಾರಿಗಳಿಂದ 73 ಪ್ರತಿನಿಧಿಗಳು ಭಾಗವಹಿಸಿದ್ದರು.

ಜಿಎಸ್‌ಟಿ ಅನುಷ್ಠಾನ ದೇಶದ ಇತಿಹಾಸದಲ್ಲೇ ಚಾರಿತ್ರಿಕ ಅಭಿವೃದ್ಧಿ ವಿದ್ಯಮಾನವಾಗಿದೆ. ಕ್ಯಾಂಪ್ಕೋದಂತಹ ಸಹಕಾರಿ ಸಂಸ್ಥೆ ಕೇರಳದಲ್ಲಿ 16 ಮತ್ತು ಕರ್ನಾಟಕದಲ್ಲಿ 17 ರೀತಿಯ ವಿವಿಧ ತೆರಿಗೆಗಳನ್ನು ಈ ಮೊದಲು ಪಾವತಿಸಬೇಕಾಗಿತ್ತು. ಇದೀಗ ಒಂದು ರಾಷ್ಟ್ರ ಒಂದು ತೆರಿಗೆ ಪರಿಕಲ್ಪನೆಯಿಂದ ಸಹಕಾರಿ ರಂಗದ ಸಂಸ್ಥೆಗಳಿಗೂ ಅಭಿವೃದ್ಧಿಯಾಗುವ ಅವಕಾಶ ಲಭ್ಯವಾಗಿದೆ ಎಂದು ಕ್ಯಾಂಪ್ಕೋದ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ತಿಳಿದರು.



**ಮೈಸೂರು :** ದಿನಾಂಕ : 25 ನವೆಂಬರ್ 2017ರಂದು ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಗೂ ಹಣಕಾಸು ನಿರ್ವಹಣೆಯ ಕುರಿತು ತರಬೇತಿ" ಕಾರ್ಯಕ್ರಮವನ್ನು ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್‌ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರಾದ ಶ್ರೀ ಬಾಲಸುಬ್ರಹ್ಮಣ್ಯ, ಸಹಕಾರಿಗಳ ಉಪನಿಬಂಧಕರಾದ ಡಾ. ಜಿ.ಉಮೇಶ್, ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ, ಸಮನ್ವಯ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಮಹಾಂತೇಶ ಹಾಗೂ ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು.

ಈ ತರಬೇತಿಯಲ್ಲಿ 46 ಸೌಹಾರ್ದ ಸಹಕಾರಿಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು.

## ಬೆಳಗಾವಿ ವಿಭಾಗ :

# ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕ್ರಮಗಳು ಹಾಗೂ ಸರಕು ಮತ್ತು ಸೇವಾ ತೆರಿಗೆ ಮತ್ತು ಇತರ ತೆರಿಗೆ ಕಾನೂನುಗಳ ಕುರಿತು ತರಬೇತಿ



ಬೆಳಗಾವಿಯಲ್ಲಿ ನಡೆದ ತರಬೇತಿಯಲ್ಲಿ 120 ಸಹಕಾರಿ ಪತ್ರಿನಿಧಿಗಳು ಭಾಗವಹಿಸಿದ್ದರು.



ಚಿಕ್ಕೋಡಿಯಲ್ಲಿ ನಡೆದ ತರಬೇತಿಯಲ್ಲಿ 130 ಸಹಕಾರಿ ಪತ್ರಿನಿಧಿಗಳು ಭಾಗವಹಿಸಿದ್ದರು.



ಸಂಕೇಶ್ವರದಲ್ಲಿ ನಡೆದ ತರಬೇತಿಯಲ್ಲಿ 200 ಸಹಕಾರಿ ಪತ್ರಿನಿಧಿಗಳು ಭಾಗವಹಿಸಿದ್ದರು.

## ಸನ್ಮಾನ



ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಎಂ.ಬಿ.ಕಲಾಲ ರವರಿಗೆ ಸಮರ್ಥ ಸದ್ಗುರು ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ ಮ ಜೋರಾಪುರಿರವರು ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.



ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಮಂಜುನಾಥರವರಿಗೆ ಅಡ್ವೆ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಅಡ್ವೆ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನವೀನ್‌ಚಂದ್ರ ಎಸ್. ಸುವರ್ಣ, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಜಿ. ನಂಜನಗೌಡರವರು ಆಯ್ಕೆ



**ಹರಪನಹಳ್ಳಿ :** ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹರಪನಹಳ್ಳಿ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಬ್ಯಾಂಕಿನ ಹಿರಿಯ ನಿರ್ದೇಶಕರಾದ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿರುವ ಶ್ರೀ ಜಿ.ನಂಜನಗೌಡರವರು ಆಯ್ಕೆಯಾಗಿದ್ದಾರೆ. ಶ್ರೀಯುತರು ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾಗಿ 13 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2104 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1238 ಪ್ರಕರಣಗಳು ಸೇರಿದಂತೆ ಒಟ್ಟು 3342 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2267 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 527 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 13 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 878 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 9 ಪ್ರಕರಣಗಳು ಇತ್ಯರ್ಥಗೊಂಡಿವೆ.



ತಿಪಟೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ



ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ



64ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ ಕುರಿತು ತುಮಕೂರಿನಲ್ಲಿ ಪತ್ರಿಕಾ ಗೋಷ್ಠಿ

## ಅಮಲ್ಜಾರಿ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಅಮಲ್ಜಾರಿ ಕಡತದಲ್ಲಿರಬೇಕಾದ ಅಗತ್ಯ ದಾಖಲಾತಿಗಳು

1. ನಮೂನೆ-3ರಲ್ಲಿ ಅಮಲ್ಜಾರಿ ಅರ್ಜಿ.
2. ವಿವರಣಾ ತಪಸೀಲು ಪಟ್ಟಿ.
3. ಅಮಲ್ಜಾರಿ ಕ್ರಮಕ್ಕೆ ಸಹಕಾರಿ ಆಡಳಿತ ಮಂಡಲಿಯು ನಿರ್ಣಯಿಸಿರುವ (ಠರಾವು) ನಿರ್ಣಯದ ಮೂಲ ಪ್ರತಿ. (ದಿನಾಂಕ ಒಳಗೊಂಡಿರತಕ್ಕದ್ದು)
4. ಮೂಲ ಐತೀರ್ಪು (ಅವಾರ್ಡ್) ಮೂಲ ಪ್ರತಿ.
5. ಅಮಲ್ಜಾರಿಗೆ ಶುಲ್ಕ ಪಾವತಿಸಿದ ಬಗ್ಗೆ ದಾಖಲಾತಿ.

## ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರ ಭೇಟಿ



ದಿನಾಂಕ : 17 ನವೆಂಬರ್ 2017ರಂದು ಚಿತ್ರದುರ್ಗದ ಹಿರಿಯೂರಿನಲ್ಲಿ ನಡೆದ 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ ಸಂದರ್ಭದಲ್ಲಿ ಶ್ರೀ ಕನ್ಯಕ ಸೌಹಾರ್ದ ಸಹಕಾರಿ ನಿ., ಹಿರಿಯೂರು ಸಹಕಾರಿಗೆ ಭೇಟಿ.



ಶಿವಶ್ರೀ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ಭೇಟಿ.



## ವ್ಯವಸ್ಥಾಪಕ ನಿರ್ದೇಶಕರ ಭೇಟಿ



**ಮಂಗಳೂರು :** ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ದಿನಾಂಕ : 23–11–2017ರಂದು ದಕ್ಷಿಣ ಕನ್ನಡ ಜಿಲ್ಲೆಯ ಒಡಿಯೂರು ಶ್ರೀ ವಿವಿದ್ಧೋದ್ದೇಶ ಸೌಹಾರ್ದ ಸಹಕಾರಿ ನಿ., ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಾಗೂ ನಂದನ ವಿವಿದ್ಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಹಕಾರಿಗಳಿಗೆ ಭೇಟಿ ನೀಡಿದ್ದರು.

ಹಾಗೆಯೇ, ಸಹಕಾರಿ ರಂಗದ ಹೆಸರಾಂತ ಚಾಕೋಲೇಟ್ ಫ್ಯಾಕ್ಟರಿಯಾದ ಕ್ಯಾಂಪ್ಕೋಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್ ಕೆ.ಎಂ. ಹಾಗೂ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಸಂತ್‌ರವರು ಉಪಸ್ಥಿತರಿದ್ದರು.

**ಗುಜರಾತ್ :** ಮಾನ್ಯ ಅಧ್ಯಕ್ಷರು ಗುಜರಾತ್ ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗುಜರಾತ್‌ನ ಸಹಕಾರ ಭಾರತಿಯ ಅಧ್ಯಕ್ಷರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಸತೀಶ್ ಮರಾಠೆ, ಶ್ರೀ ರಮೇಶ್ ವೈದ್ಯ, ಶ್ರೀ ಎಸ್.ಆರ್.ಸತೀಶ್ಚಂದ್ರರವರು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

### ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 35ರಡಿ ವಿಚಾರಣೆ ಜರುಗಿಸುವ ಕುರಿತು

- ಶ್ರೀ ಭೀಮಾಂಬಿಕಾ ಮಹಿಳಾ ವಿವಿಧೋದ್ಧೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 35ರಡಿ ಶಾಸನಬದ್ಧ ವಿಚಾರಣೆ ಜರುಗಿಸಲು ಶ್ರೀ ಜಿ.ಎಸ್.ಟೋಪಣ್ಣನವರ, ಬೆಳಗಾವಿ ವಿಭಾಗೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರನ್ನು ವಿಚಾರಣಾಧಿಕಾರಿಯಾಗಿ ಸಹಕಾರಿಗಳ ಸಂಯುಕ್ತ ನಿಬಂಧಕರು, ಬೆಳಗಾವಿ ಪ್ರಾಂತ ಇವರು ದಿನಾಂಕ 26.10.2017ರ ಮೂಲಕ ಆದೇಶಿಸಿದ್ದಾರೆ.
- ಶ್ರೀ ಗಜರಾಜ ವಿವಿಧೋದ್ಧೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 35ರಡಿ ಶಾಸನಬದ್ಧ ವಿಚಾರಣೆ ಜರುಗಿಸಲು ಶ್ರೀ ಓಂಕಾರ ಧರಣೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರನ್ನು ವಿಚಾರಣಾಧಿಕಾರಿಯಾಗಿ ಸಹಕಾರಿಗಳ ಸಂಯುಕ್ತ ನಿಬಂಧಕರು, ಬೆಳಗಾವಿ ಪ್ರಾಂತ ಇವರು ದಿನಾಂಕ 26.10.2017ರ ಮೂಲಕ ಆದೇಶಿಸಿದ್ದಾರೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

- **ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 18ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನದ ತರಬೇತಿ ಕಾರ್ಯಕ್ರಮ :** ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 18ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ದಿನಾಂಕ 07 ಡಿಸೆಂಬರ್ 2017 ರಿಂದ 16 ಡಿಸೆಂಬರ್ 2017ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.
- **ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳು :** ಡಿಸೆಂಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳ "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಗಳ ವಿವರಗಳು.

**ಬೆಳಗಾವಿ ವಿಭಾಗ :**

ದಿನಾಂಕ, ಭಾಗವಹಿಸಬೇಕಾದ ಜಿಲ್ಲೆ, ಸ್ಥಳಗಳ ವಿವರಗಳನ್ನು ಬೆಳಗಾವಿ ವಿಭಾಗೀಯ ಕಛೇರಿಯಿಂದ ತಿಳಿಸಲಾಗುವುದು.

**ಕಲಬುರಗಿ ವಿಭಾಗ :**

- ದಿನಾಂಕ : 19–12–2017 – ಭಾಗವಹಿಸಬೇಕಾದ ಜಿಲ್ಲೆ : ರಾಯಚೂರು ಜಿಲ್ಲೆ – ಸ್ಥಳ : ಸಿಂಧನೂರು.
- ದಿನಾಂಕ : 20–12–2017 – ಭಾಗವಹಿಸಬೇಕಾದ ಜಿಲ್ಲೆ : ಕೊಪ್ಪಳ ಜಿಲ್ಲೆ – ಸ್ಥಳ : ಗಂಗಾವತಿ.
- ದಿನಾಂಕ : 21–12–2017 – ಭಾಗವಹಿಸಬೇಕಾದ ಜಿಲ್ಲೆ : ಬೀದರ ಜಿಲ್ಲೆ – ಸ್ಥಳ : ಬೀದರ.
- ದಿನಾಂಕ : 21–12–2017 – ಭಾಗವಹಿಸಬೇಕಾದ ಜಿಲ್ಲೆ : ಬಳ್ಳಾರಿ ಜಿಲ್ಲೆ – ಸ್ಥಳ : ಹೋಟೆಲ್ ಮಲ್ಲಿಗೆ, ಹೊಸಪೇಟೆ.
- ದಿನಾಂಕ : 22–12–2017 – ಭಾಗವಹಿಸಬೇಕಾದ ಜಿಲ್ಲೆ : ಕಲಬುರಗಿ ಜಿಲ್ಲೆ – ಸ್ಥಳ : ಕಲಬುರಗಿ.
- ದಿನಾಂಕ : 23–12–2017 – ಭಾಗವಹಿಸಬೇಕಾದ ಜಿಲ್ಲೆ : ಯಾದಗಿರಿ ಜಿಲ್ಲೆ – ಸ್ಥಳ : ಶಹಾಪೂರ.

**ಬೆಂಗಳೂರು ವಿಭಾಗ :**

- ದಿನಾಂಕ : 21–12–2017 – ಭಾಗವಹಿಸಬೇಕಾದ ಜಿಲ್ಲೆ – ದಾವಣಗೆರೆ ಜಿಲ್ಲೆ – ಸ್ಥಳ : ದಾವಣಗೆರೆ.
- ದಿನಾಂಕ : 22–12–2017 – ಭಾಗವಹಿಸಬೇಕಾದ ಜಿಲ್ಲೆ : ತುಮಕೂರು ಜಿಲ್ಲೆ – ಸ್ಥಳ : ತುಮಕೂರು.
- ದಿನಾಂಕ : 23–12–2017 – ಭಾಗವಹಿಸಬೇಕಾದ ಜಿಲ್ಲೆ : ಚಿತ್ರದುರ್ಗ ಜಿಲ್ಲೆ – ಸ್ಥಳ : ಚಳ್ಳಕೆರೆ.
- ದಿನಾಂಕ : 27–12–2017 – ಭಾಗವಹಿಸಬೇಕಾದ ಜಿಲ್ಲೆ : ಬೆಂಗಳೂರು ನಗರ ಜಿಲ್ಲೆ – ಸ್ಥಳ : ಆರ್.ಐ.ಸಿ.ಎಂ.
- ದಿನಾಂಕ : 28–12–2017 – ಭಾಗವಹಿಸಬೇಕಾದ ಜಿಲ್ಲೆ : ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳು – ಸ್ಥಳ : ಆರ್.ಐ.ಸಿ.ಎಂ.
- ದಿನಾಂಕ : 07–01–2018 – ಭಾಗವಹಿಸಬೇಕಾದ ಜಿಲ್ಲೆ : ಶಿವಮೊಗ್ಗ ಜಿಲ್ಲೆ, ಸ್ಥಳ : ಶಿವಮೊಗ್ಗ.

**ಮೈಸೂರು ವಿಭಾಗ :**

- ದಿನಾಂಕ : 20–12–2017 – ಭಾಗವಹಿಸಬೇಕಾದ ಜಿಲ್ಲೆ : ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು – ಸ್ಥಳ : ಚಿಕ್ಕಮಗಳೂರು.
- ದಿನಾಂಕ : 22–12–2017 – ಭಾಗವಹಿಸಬೇಕಾದ ಜಿಲ್ಲೆ : ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳು – ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಮೈಸೂರು.
- ದಿನಾಂಕ : 28–12–2017 – ಭಾಗವಹಿಸಬೇಕಾದ ಜಿಲ್ಲೆ : ಉಡುಪಿ ಜಿಲ್ಲೆ – ಸ್ಥಳ : ನೈವೇದ್ಯ ಹೋಟೆಲ್ ಹಾಲ್, ಉಡುಪಿ.
- ದಿನಾಂಕ : 29–12–2017 – ಭಾಗವಹಿಸಬೇಕಾದ ಜಿಲ್ಲೆ : ದಕ್ಷಿಣ ಕನ್ನಡ ಜಿಲ್ಲೆ – ಸ್ಥಳ : ಕ್ಯಾಂಪ್ಕೋ ಲಿಮಿಟೆಡ್ ಸಭಾಭವನ, ಮಂಗಳೂರು.

- **ಜನವರಿ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿರುವ ಇ–ಸ್ಟ್ಯಾಂಪಿಂಗ್ ತರಬೇತಿಗಳ ವಿವರಗಳು**

- ದಿನಾಂಕ : 05.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಂಗಳೂರು ಜಿಲ್ಲೆ – ಸ್ಥಳ : ಆರ್.ಐ.ಸಿ.ಎಂ.
- ದಿನಾಂಕ 06.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳು – ಸ್ಥಳ : ಆರ್.ಐ.ಸಿ.ಎಂ.
- ದಿನಾಂಕ : 08.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆ – ಸ್ಥಳ : ಬೆಳಗಾವಿ.
- ದಿನಾಂಕ : 09.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆ – ಸ್ಥಳ : ಚಿಕ್ಕೋಡಿ.
- ದಿನಾಂಕ : 10.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆ – ಸ್ಥಳ : ಗೋಕಾಕ್.
- ದಿನಾಂಕ : 11.01.2018 – ಭಾಗವಹಿಸಬೇಕಾದ ಜಿಲ್ಲೆ : ಬಾಗಲಕೋಟೆ ಜಿಲ್ಲೆ – ಸ್ಥಳ : ಬಾಗಲಕೋಟೆ.
- ದಿನಾಂಕ : 12.01.2018 – ಭಾಗವಹಿಸಬೇಕಾದ ಜಿಲ್ಲೆ : ವಿಜಯಪುರ ಜಿಲ್ಲೆ – ಸ್ಥಳ : ವಿಜಯಪುರ.
- ದಿನಾಂಕ : 16.01.2018 – ಭಾಗವಹಿಸಬೇಕಾದ ಜಿಲ್ಲೆ : ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು – ಸ್ಥಳ : ಮಂಗಳೂರು.
- ದಿನಾಂಕ : 17.01.2018 – ಭಾಗವಹಿಸಬೇಕಾದ ಜಿಲ್ಲೆ : ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳು – ಸ್ಥಳ : ಚಿಕ್ಕಮಗಳೂರು.
- ದಿನಾಂಕ : 18.01.2018 – ಭಾಗವಹಿಸಬೇಕಾದ ಜಿಲ್ಲೆ : ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳು – ಸ್ಥಳ : ಶಿವಮೊಗ್ಗ.
- ದಿನಾಂಕ : 19.01.2018 – ಭಾಗವಹಿಸಬೇಕಾದ ಜಿಲ್ಲೆ : ಉತ್ತರ ಕನ್ನಡ ಜಿಲ್ಲೆ – ಸ್ಥಳ : ಶಿರಸಿ.
- ದಿನಾಂಕ : 20.01.2018 – ಭಾಗವಹಿಸಬೇಕಾದ ಜಿಲ್ಲೆ : ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳು – ಸ್ಥಳ : ಹುಬ್ಬಳ್ಳಿ.
- ದಿನಾಂಕ : 23.01.2018 – ಭಾಗವಹಿಸಬೇಕಾದ ಜಿಲ್ಲೆ : ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳು – ಸ್ಥಳ : ಕಲಬುರಗಿ.
- ದಿನಾಂಕ : 24.01.2018 – ಭಾಗವಹಿಸಬೇಕಾದ ಜಿಲ್ಲೆ : ರಾಯಚೂರು ಜಿಲ್ಲೆ – ಸ್ಥಳ : ರಾಯಚೂರು.
- ದಿನಾಂಕ : 25.01.2018 – ಭಾಗವಹಿಸಬೇಕಾದ ಜಿಲ್ಲೆ : ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳು – ಸ್ಥಳ : ಗಂಗಾವತಿ.
- ದಿನಾಂಕ : 29.01.2018 – ಭಾಗವಹಿಸಬೇಕಾದ ಜಿಲ್ಲೆ : ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಕೊಡಗು ಜಿಲ್ಲೆಗಳು – ಸ್ಥಳ : ಮೈಸೂರು.

# 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ ವರದಿಗಳು



ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ನಡೆದ 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ಕಲಬುರಗಿ :** 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 14.11.2017ರಂದು ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗೀಯ ಕಛೇರಿಯಲ್ಲಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರಿಂದ ಸಹಕಾರಿ ಧ್ವಜಾರೋಹಣ.

## ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರ ಸಪ್ತಾಹ ಆಚರಣೆ

**ಮೈಸೂರು :** ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಯು ದಿನಾಂಕ : 18.11.2017ರಂದು ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರ ಸಪ್ತಾಹವನ್ನು ಮೈಸೂರು ನಗರದ ಶಾರದಾ ವಿಲಾಸ ಭವನದಲ್ಲಿ ಆಚರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೈಸೂರು ಪ್ರಾಂತದ ಜಂಟಿ ನಿಬಂಧಕರಾದ ಶ್ರೀ ಹೆಚ್.ಸಿ.ಜೋಷಿರವರು ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ, ಸಹಕಾರಿಯು ಶಿಸ್ತುಬದ್ಧವಾಗಿ ಆರ್ಥಿಕ ವ್ಯವಹಾರವನ್ನು ನಡೆಸುತ್ತಿರುವುದಕ್ಕೆ ಶ್ಲಾಘಿಸಿದರು.

ಉದ್ಘಾಟನೆಯನ್ನು ಖ್ಯಾತ ನೃತ್ಯಗಾರ್ತಿಯಾದ ಶ್ರೀಮತಿ ತುಳಸಿರಾಮ



ಚಂದ್ರರವರು ಉದ್ಘಾಟಿಸಿದರು.

ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಕೃಷ್ಣವೇಣಿಪ್ರಸಾದ್‌ರವರು ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್.ಆದಿಶೇಷರವರನ್ನು ಸನ್ಮಾನಿಸಲಾಯಿತು.



**ಬೋರಗಾಂವ :** ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೋರಗಾಂವ ಸಹಕಾರಿಯ ಮುಖ್ಯ ಕಾರ್ಯಾಲಯದಲ್ಲಿ 64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಹಕಾರಿಯ ಸಂಚಾಲಕರಾದ ಶ್ರೀ ಅಭಯ ಕುಮಾರ ಶ್ರೀಪಾಲ ಕರೋಲೆ, ಶ್ರೀ ಪಿರಗೌಡ ಕಲಗೌಡ ಪಾಟೀಲ, ಶ್ರೀ ಭುಜಗೌಡ ಬಾಳಗೌಡಾ ಪಾಟೀಲ, ಶ್ರೀ ಅಜೀತ ಶ್ರೀಪತಿ ಕಾಂಬಳೆ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಬೈಲಹೊಂಗಲ :** ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೈಲಹೊಂಗಲ ಸಹಕಾರಿಯ ಪ್ರಧಾನ ಕಛೇರಿಯಲ್ಲಿ ದಿನಾಂಕ 14.11.2017ರಂದು ಸಹಕಾರ ಸಪ್ತಾಹದ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.



**ಕಲಬುರಗಿ :** ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯಲ್ಲಿ 64ನೇ ಸಹಕಾರ ಸಪ್ತಾಹ ಆಚರಣೆಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಎಚ್.ಬಿ.ಪಾಟೀಲ, ಉಪನ್ಯಾಸಕರು ಇವರ ವತಿಯಿಂದ ವಿಚಾರ ಸಂಕಿರಣ ಹಾಗೂ 64ನೇ ಅಖಿಲ ಭಾರತ ಸಹಕಾರ ಸಪ್ತಾಹ ಕುರಿತಂತೆ ಉಪನ್ಯಾಸ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

## ಶ್ರೀ ಎಂ.ಎಸ್. ವೆಂಕಟೇಶ್‌ರವರಿಗೆ ಅಭಿನಂದನೆ

**ಸಾಗರ :** 64ನೇ ಅಖಿಲ ಭಾರತ ಸಹಕಾರ ಸಪ್ತಾಹ – 2017ರ ಅಂಗವಾಗಿ ತುಮಕೂರಿನಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾದ ಮಯೂರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್. ವೆಂಕಟೇಶ್ ಇವರಿಗೆ ರಾಜ್ಯ ಮಟ್ಟದ "ಶ್ರೇಷ್ಠ ಸಹಕಾರಿ" ಪ್ರಶಸ್ತಿಯನ್ನು ನೀಡಿ, ಗೌರವಿಸಲಾಯಿತು.



1995ರಲ್ಲಿ ರಚಿಸಲಾದ ಮಯೂರ ಸೌಹಾರ್ದ ಸಹಕಾರಿಯು ಏಳು ಸಹಕಾರಿ ತತ್ವಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿರುವುದರೊಂದಿಗೆ ಆರ್ಥಿಕ ಚಟುವಟಿಕೆಗಳ ಜೊತೆಜೊತೆಗೆ 7ನೇ ತತ್ವವಾದ "ಸಾಮಾಜಿಕ ಕಳಕಳಿ"ಯ ಅನುಷ್ಠಾನದಲ್ಲಿ ಶ್ರೀ ಎಂ.ಎಸ್.ವೆಂಕಟೇಶ್ ಇವರ ಪಾತ್ರ ಪ್ರಮುಖವಾಗಿದೆ. ರಾಜ್ಯ ಮಟ್ಟದ ಈ ಪ್ರಶಸ್ತಿಗೆ ಭಾಜನರಾದ ಶ್ರೀ ಎಂ.ಎಸ್.ವೆಂಕಟೇಶ್ ಇವರಿಗೆ ಮಯೂರ ಸೌಹಾರ್ದ ಸಹಕಾರಿಯ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಹಿತೈಷಿಗಳು ಅಭಿನಂದಿಸಿದ್ದಾರೆ.

ಸಹಕಾರ ಚಳವಳಿಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಸೇವೆ ಇವರಿಂದ ಸಿಗಲೆಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ಹಾಗೂ ಶಿವಮೊಗ್ಗದ ಸಹ್ಯಾದ್ರಿ ಸೌಹಾರ್ದ ಒಕ್ಕೂಟ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಅಶ್ವತ್ಥರವರು ಹಾರೈಸಿದ್ದಾರೆ ಎಂದು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಂ.ಎನ್.ಶ್ರೀನಿವಾಸ ಮೂರ್ತಿಯವರು ವರದಿಯಲ್ಲಿ ತಿಳಿಸಿದ್ದಾರೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ, ಪುತ್ತೂರು ಸಹಕಾರಿಯ ಹಾಗೂ ಸಿಬ್ಬಂದಿಗಳ ಸರ್ವತೋಮುಖ ಬೆಳವಣಿಗೆಯ ನಿಟ್ಟಿನಲ್ಲಿ ನಿರಂತರವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ. ಅದೇ ರೀತಿ ಸಹಕಾರಿಯ ಸಿಬ್ಬಂದಿ ವರ್ಗದವರಿಗೆ ರೋಟರಿ ಬ್ಲಡ್ ಬ್ಯಾಂಕ್ ಹಾಲ್, ಪುತ್ತೂರಿನಲ್ಲಿ "ಪರಿಣಾಮಕಾರಿ ವ್ಯಕ್ತಿತ್ವ ನಿರ್ಮಾಣ" ಎಂಬ ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 06–11–2017ರಂದು ಆಯೋಜಿಸಲಾಗಿತ್ತು.




ತರಬೇತಿಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವೆಲ್ತ್ ವಿಷನ್ ಮತ್ತು ಸತ್ವಂ ಸಂಸ್ಥೆಯ ಮಾಲೀಕರಾದ ಶ್ರೀ ಮುರಳೀಧರ.ಕೆ ಇವರು ವಹಿಸಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಭವಾನಿ ಪ್ರಭು ತರಬೇತಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡು ಸಮಾಜಕ್ಕೆ ಕೊಡುಗೆ ನೀಡುವಂತಹ ವ್ಯಕ್ತಿಗಳಾಗಿ ನಿರ್ಮಾಣಗೊಳ್ಳುವಂತಾಗಲಿ ಎಂದು ಸಿಬ್ಬಂದಿಗಳಿಗೆ ಶುಭಹಾರೈಸಿದರು. ಸಂಪನ್ಮೂಲ ವ್ಯಕ್ತಿಯಾಗಿ ನಬಾರ್ಡ್‌ನ ನಿವೃತ್ತ ಅಧಿಕಾರಿಗಳಾಗಿ ಶ್ರೀ ವೈ.ವಿ. ಗುಂಡೂರಾವ್‌ರವರು ಆಗಮಿಸಿದ್ದರು. ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ವಿವೇಕಾನಂದ ಕಾಲೇಜಿನ ಉಪನ್ಯಾಸಕರಾದ ಡಾ॥ ಶ್ರೀಶ ಕುಮಾರ್‌ರವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿನಯ ಕುಮಾರ್ ಕಂದಡ್ಕರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿ ಶ್ರೀಮತಿ ರಶ್ಮಿ ಸಾಕಳ್ಕರ್‌ರವರು ಪ್ರಾರ್ಥಿಸಿದರೆ, ಶ್ರೀ ಸುಧೀರ್ ಬಿ. ರವರು ಕಾರ್ಯಕ್ರಮವನ್ನು ನಿರ್ವಹಿಸಿದರು.

ಸಹಕಾರಿಯ ಮಾನವ ಸಂಪನ್ಮೂಲ ವಿಭಾಗದ ಹಿರಿಯ ಅಧಿಕಾರಿಯಾದ ಶ್ರೀ ಪ್ರೇಮಚಂದ್ರ ನಾಯಕ್‌ರವರು ಸ್ವಾಗತಿಸಿ, ಕುಮಾರಿ ಸುಕನ್ಯಾ ಎಸ್.ಆರ್. ರವರು ವಂದನಾರ್ಪಣೆಗೈದರು. ಶ್ರೀ ಮಂಜುನಾಥ್ ಭಂಡಾರ್ಕರ್‌ರವರು ಸಹಕರಿಸಿದರು.

## ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಂಕಲಿ ಶಾಖೆಯ ಸ್ವಂತ ಕಟ್ಟಡದ ಉದ್ಘಾಟನೆ

**ಮಾಂಜರಿ :** ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಮಾಂಜರಿ ಸಹಕಾರಿಯ ಅಂಕಲಿ ಶಾಖೆಯ ಸ್ವಂತ ಕಟ್ಟಡದ ಉದ್ಘಾಟನಾ ಸಮಾರಂಭವು ದಿನಾಂಕ 09.11.2017ರಂದು ಪರಮಪೂಜ್ಯ ಸ್ವಸ್ತಿ ಶ್ರೀ ಸೌರಭಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮೀಜಿ, ಜೈನ ಮಠ ತಿಜಾರಾ ಇವರ ದಿವ್ಯ ಸಾನಿಧ್ಯದಲ್ಲಿ, ಸಹಕಾರಿಯ ಸಂಸ್ಥಾಪಕರಾದ ಶ್ರೀ ಕಲ್ಲಪ್ಪಣ್ಣಾ ಪಾರಿಸಾ ಮಗೆಣ್ಣವರ ಅಧ್ಯಕ್ಷತೆಯಲ್ಲಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿನ್ನಪ್ಪಾ ಆದಪ್ಪಾ ಶೇಡಬಾಳೆರವರ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಯಿತು.



## ಸುಂದರಾ ಸೌಹಾರ್ದ ಪತ್ತಿನ ಸಹಕಾರಿಯ ಶಾಖೆ ಪ್ರಾರಂಭ

**ಅಮೀನಗಡ :** ಸುಂದರಾ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾಗಲಕೋಟ ಸಹಕಾರಿಯ ಪ್ರಥಮ ಶಾಖೆಯನ್ನು ಅಮೀನಗಡದಲ್ಲಿ ಶ್ರೀ ಮ.ನಿ.ಪ್ರ. ಶಂಕರರಾಜೇಂದ್ರ ಮಹಾಸ್ವಾಮಿಗಳು, ಗಚ್ಚಿನಮಠ ಇವರ ದಿವ್ಯ ಸಾನಿಧ್ಯದಲ್ಲಿ ಪ್ರಾರಂಭಿಸಲಾಯಿತು.



## ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ



ಶ್ರೀ ಮಾರ್ತಂಡಪ್ಪ ನೀ. ಕಮ್ಮಾರ
ಅಧ್ಯಕ್ಷರು



ಶ್ರೀ ರಾಮಚಂದ್ರಪ್ಪ ಮೌ. ಗುಡಗೂರ
ಉಪಾಧ್ಯಕ್ಷರು

ಶ್ರೀ ವಿಶ್ವಕರ್ಮ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಣೇಬೆನ್ನೂರು ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಮಾರ್ತಂಡಪ್ಪ ನೀ. ಕಮ್ಮಾರ, ಉಪಾಧ್ಯಕ್ಷರಾಗಿ ಶ್ರೀ ರಾಮಚಂದ್ರಪ್ಪ ಮೌ. ಗುಡಗೂರ ಹಾಗೂ ಸದಸ್ಯರಾಗಿ ಶ್ರೀ ರಾಮಪ್ಪ ಮ. ಅರ್ಕಾಚಾರಿ, ಶ್ರೀ ಕೃಷ್ಣಪ್ಪ ತೀ. ಬಡಿಗೇರ, ಶ್ರೀಮತಿ ಪ್ರಭಾವತಿ ಕು. ಅರ್ಕಾಚಾರಿ, ಶ್ರೀ ಗಂಗಪ್ಪ ಮ. ಅರ್ಕಾಚಾರಿ, ಶ್ರೀ ಪದ್ಮಾಚಾರಿ ನೀ. ಕಮ್ಮಾರ, ಶ್ರೀ ವೀರಾಚಾರಿ ಮೌ. ಬಡಿಗೇರ, ಶ್ರೀಮತಿ ಮಂಜುಳಾ ಮಂ. ಶಿಕಾರಿಪುರ, ಶ್ರೀಮತಿ ಶಾರಾದ ಮೌ. ಬಡಿಗೇರ, ಶ್ರೀ ಜಗದೀಶ ನಾ. ಬಡಿಗೇರ ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾಧಿಕಾರಿಗಳಾದ ಶ್ರೀ ಎಸ್.ವಿ.ಮಾಡಳ್ಳಿರವರು ಘೋಷಿಸಿರುತ್ತಾರೆ.

## ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ



ಜನನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಮಂಜಪ್ಪ ಹೆಚ್.ಎಲ್. ಹಾಗೂ ಉಪಾಧ್ಯಕ್ಷರಾಗಿ ಶ್ರೀ ಹರೀಶ್ ರಾವ್‌ರವರು ಆಯ್ಕೆಯಾಗಿದ್ದಾರೆ.

## ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿಯ ನೂತನ ಕಛೇರಿಯ ಉದ್ಘಾಟನೆ



**ಮೈಸೂರು :** ದಿನಾಂಕ 27 ನವೆಂಬರ್ 2017ರಂದು ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಯ ನೂತನ ಕಛೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್‌ರವರು ಉದ್ಘಾಟಿಸಿ, ಮಾತನಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಎನ್.ನವೀನ್, ಭಾರತೀಯ ಜನತಾ ಪಾರ್ಟಿಯ ಮುಖಂಡರಾದ ಶ್ರೀಮತಿ ಅರ್ಪಿತ ಸಿಂಹ, ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜ ಮತ್ತು ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಹಕಾರಿ ರತ್ನ
## ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ ನಿಧನ



ದಿ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕಿನ ಸಂಸ್ಥಾಪಕರು, ಪ್ರಸ್ತುತ ಅಧ್ಯಕ್ಷರು, ಸಹಕಾರಿ ಧುರೀಣರು, 'ಸಹಕಾರ ರತ್ನ' ಪ್ರಶಸ್ತಿ ಮತ್ತು 'ಸಮನ್ವಯ ಸಿರಿ' ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮಾಜಿ ನಿರ್ದೇಶಕರು, ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕರು ಮತ್ತು ದಾವಣಗೆರೆ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳಾದ ಶ್ರೀ ಎನ್.ಎಂ.ಜೆ.ಬಿ.ಆರಾಧ್ಯರವರು ದಿನಾಂಕ 29.11.2017ರಂದು ರಾತ್ರಿ 10:12 ಗಂಟೆಗೆ ನಿಧನರಾಗಿದ್ದಾರೆ. ಶ್ರೀಯುತರು ಮೂವರು ಸಹೋದರರು, ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಕೋರಿದೆ.

# ನಿಮ್ಮ ಪ್ರಶ್ನೆ



# ನಮ್ಮ ಉತ್ತರ

– ಶ್ರೀಕಾಂತ್ ಬರುವೆ,
ಸಹ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**ಶ್ರೀ ವಾಸವಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಳ್ಳೆಗಾಲ, ಚಾಮರಾಜನಗರ.**

**ಪ್ರಶ್ನೆ 1 : ಸಹಕಾರಿಯ ಸದಸ್ಯರೊಬ್ಬರು ಉಪವಿಧಿ ಪ್ರತಿಯನ್ನು ಒದಗಿಸಲು ಕೋರಿರುತ್ತಾರೆ. ಸದರಿ ಉಪವಿಧಿ ಪ್ರತಿಯನ್ನು ಒದಗಿಸಬಹುದೇ?**

**ಉತ್ತರ :** ಸಹಕಾರಿಯ ಸದಸ್ಯರು ಮಾಹಿತಿ/ ದಾಖಲೆಗಳನ್ನು ಕೋರಿದ್ದರೆ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 32(2)ರನ್ವಯ ಮಂಡಲಿಯ ಮತ್ತು ಸಾಮಾನ್ಯ ಸಭೆಗಳಲ್ಲಿನ ನಿರ್ಣಯಗಳು, ಮತದಾರರ ಪಟ್ಟಿ, ಉಪವಿಧಿಗಳು, ವಾರ್ಷಿಕ ಲೆಕ್ಕಪತ್ರಗಳ ವಿವರ ಪತ್ರ ಮತ್ತು ಸದಸ್ಯರಿಗೆ ಸಂಬಂಧಪಟ್ಟಂತ ಲೆಕ್ಕಗಳ ಪ್ರತಿಗಳು, ಸಹಕಾರಿಯು ನಿರ್ಣಯಿಸಬಹುದಾದ ಅವಶ್ಯಕ ಶುಲ್ಕವನ್ನು ಸಂದಾಯ ಮಾಡಿ ಸಹಕಾರಿಯ ವ್ಯವಹಾರದ ವೇಳೆಯಲ್ಲಿ ಪಡೆಯಲು ಸದಸ್ಯರಿಗೆ ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರಿಯ ಸದಸ್ಯರು ಕೋರಿರುವ ಉಪವಿಧಿ ಪ್ರತಿಯನ್ನು ನೀಡಬೇಕಾಗುತ್ತದೆ.

**ಪ್ರಶ್ನೆ 2 : ಸಹಕಾರಿಯ ಉಪವಿಧಿ ಪ್ರತಿಯನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ನೀಡಬಹುದೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 32(2)ರಂತೆ ಸಹಕಾರಿಯ ಉಪವಿಧಿಯನ್ನು ಸದಸ್ಯರಿಗೆ ನೀಡಲು ಅವಕಾಶವಿರುತ್ತದೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 31(2)(ಇ)ರನ್ವಯ ಸಹಕಾರಿಯ ದಾಖಲೆಗಳನ್ನು ನಿರ್ವಹಿಸಲು ಸೂಕ್ತ ವ್ಯವಸ್ಥೆಯನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಮಾಡಬೇಕಾಗಿರುವುದರಿಂದ ಅವಶ್ಯಕ ಶುಲ್ಕವನ್ನು ಸದಸ್ಯರಿಂದ ಸಹಕಾರಿಗೆ ಸಂದಾಯ ಮಾಡಿಕೊಂಡು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು (ಕಾರ್ಯದರ್ಶಿ) ಸದಸ್ಯರಿಗೆ ಉಪವಿಧಿಯ ಪ್ರತಿಯನ್ನು ನೀಡಬಹುದಾಗಿರುತ್ತದೆ.

**ಪ್ರಶ್ನೆ 3 : ಉಪವಿಧಿ ಪ್ರತಿಯನ್ನು ನೀಡಲು ಆಡಳಿತ ಮಂಡಲಿಯ ಒಪ್ಪಿಗೆ ಪಡೆಯಬೇಕೆ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 32(2) ರನ್ವಯ ಸಹಕಾರಿಯ ಸದಸ್ಯರಿಗೆ ಸಹಕಾರಿಯ ಉಪವಿಧಿಯ ಪ್ರತಿಯನ್ನು ಪೂರೈಸುವುದು ಕಡ್ಡಾಯವಾಗಿರುತ್ತದೆ. ಆದರೆ, ಈ ವಿಷಯವನ್ನು ಆಡಳಿತ ಮಂಡಲಿ ಸಭೆಗೆ ಮಂಡಿಸಿ ಒಪ್ಪಿಗೆ/ ಅನುಮೋದನೆ ಪಡೆಯಬೇಕೆಂಬುದರ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಸ್ಪಷ್ಟ ಪ್ರಾವಧಾನವಿರುವುದಿಲ್ಲ. ಯಾವುದೇ ವಿಷಯವನ್ನು ಆಡಳಿತ ಮಂಡಲಿಗೆ ಮಂಡಿಸುವುದು ಮಂಡಲಿಯ ನಿರ್ಣಯಕ್ಕಾಗಿ ಆದರೆ ಉಪವಿಧಿಯ ಪ್ರತಿಯನ್ನು ಪೂರೈಸುವ ಕುರಿತಂತೆ ಆಡಳಿತ ಮಂಡಲಿಗೆ ಯಾವುದೇ ವಿವೇಚನಾಧಿಕಾರ ಇರುವುದಿಲ್ಲ ಮತ್ತು ನಿರ್ಣಯದ ಅವಶ್ಯಕತೆಯಿರುವುದಿಲ್ಲ. ಆದ್ದರಿಂದ, ಕಾಯ್ದೆಯನ್ವಯ ಪೂರೈಸಲೇಬೇಕಾಗಿರುವ ಮಾಹಿತಿಯಾಗಿರುವ ಕಾರಣ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 32(2)ರಲ್ಲಿ ದಾಖಲೆಯನ್ನು ಒದಗಿಸುವ ಕುರಿತಂತೆ ಅವಕಾಶವಿರುವುದರಿಂದಾಗಿ ಉಪವಿಧಿಯ ಪ್ರತಿಯನ್ನು ಸದಸ್ಯರಿಗೆ ಪೂರೈಸಲು ಆಡಳಿತ ಮಂಡಲಿಯ ಒಪ್ಪಿಗೆ ಪಡೆಯುವ ಅವಶ್ಯಕತೆಯಿರುವುದಿಲ್ಲ.

**ಪ್ರಶ್ನೆ 4 : ಪತ್ರ ಸ್ವೀಕರಿಸಿದ ಎಷ್ಟು ದಿನದೊಳಗೆ ಸದಸ್ಯರಿಗೆ ಉಪವಿಧಿಯ ಪ್ರತಿಯನ್ನು ನೀಡಬೇಕು?**

**ಉತ್ತರ :** ಈ ಕುರಿತಂತೆ ಸಹಕಾರಿಯ ಉಪವಿಧಿಯಲ್ಲಿ ಸ್ಪಷ್ಟ ಪ್ರಾವಧಾನ ಸೇರಿಸಿಕೊಳ್ಳಬೇಕಾಗಿರುತ್ತದೆ. ಸದಸ್ಯರಿಗೆ ಕೋರಿರುವ ಮಾಹಿತಿ/ ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ ಒದಗಿಸುವ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಸ್ಪಷ್ಟ ಪ್ರಾವಧಾನವಿರುವುದಿಲ್ಲ.

**ಪ್ರಶ್ನೆ 5 : ಮುದ್ರಿತ ಪ್ರತಿಯನ್ನು ನೀಡಿದರೆ ಪ್ರತಿ ಪುಟಕ್ಕೆ ಎಷ್ಟು ರೂಪಾಯಿಗಳಂತೆ ಪಡೆಯಬೇಕಾಗಿರುತ್ತದೆ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 32(2) ರಂತೆ ಒದಗಿಸಬಹುದಾದ ದಾಖಲೆಗಳಿಗೆ ನಿಗದಿಪಡಿಸಬಹುದಾದ ಅವಶ್ಯಕ ಶುಲ್ಕವನ್ನು ಸಹಕಾರಿಯ ಆಡಳಿತ ಮಂಡಲಿಯು ನಿರ್ಧರಿಸಬೇಕಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:29ರಲ್ಲಿ ಯಾವೊಂದು ಸಹಕಾರಿಯ ಯಾವೊಬ್ಬ ಸದಸ್ಯನು ಅಥವಾ ಸಾರ್ವಜನಿಕರೊಬ್ಬರು ಕೆಲವು ದಸ್ತಾವೇಜುಗಳನ್ನು ರಿಜಿಸ್ಟ್ರಾರರ ಕಛೇರಿಯಲ್ಲಿ ಉಚಿತವಾಗಿ ನೋಡಬಹುದು ಮತ್ತು ಅವುಗಳ ದೃಢೀಕೃತ ಪ್ರತಿಗಳನ್ನು ಕೆಳಗೆ ಕಾಣಿಸಿದಂತೆ ಶುಲ್ಕ ಪಾವತಿಸಿ ಪಡೆಯಬಹುದು ಎಂದಿರುತ್ತದೆ. ಸದರಿ ಅಂಶವನ್ನೇ ಮಾರ್ಗದರ್ಶಿಯಾಗಿ ಸಹಕಾರಿಗಳು ಅನುಸರಿಸಬಹುದಾಗಿರುತ್ತದೆ.

| ವಿಷಯ | ಶುಲ್ಕ (ಪ್ರತಿ ಪುಟಕ್ಕೆ) |
|---|---|
| ಸಹಕಾರಿಯ ನೋಂದಣಿ ಅರ್ಜಿ ಪ್ರತಿಗೆ | 5 |
| ನೋಂದಣಿ ಪ್ರಮಾಣ ಪತ್ರ ಪ್ರತಿ ಪುಟಕ್ಕೆ | 5 |
| ಸಹಕಾರಿಯ ನೋಂದಾಯಿತ ಉಪವಿಧಿಗಳು ಪ್ರತಿ ಪುಟಕ್ಕೆ | 3 |
| ಸಹಕಾರಿಯ ಉಪವಿಧಿಗಳ ತಿದ್ದುಪಡಿ ಪ್ರತಿ ಪುಟಕ್ಕೆ | 3 |
| ಒಂದು ಸಹಕಾರಿಯ ನೋಂದಣಿ ರದ್ಧತಿಯಾದ ದಾಖಲೆ ಪ್ರತಿ ಪುಟಕ್ಕೆ | 5 |
| ಪ್ರಕರಣ 41ರ ಮೇರೆಗೆ ಮಧ್ಯಸ್ಥಗಾರಿಕೆಯ ಆದೇಶದ ಪ್ರತಿ ಪುಟಕ್ಕೆ | 3 |
| ಅಪೀಲು ಹೋಗಬಹುದಾದ ಇನ್ನಾವುದೇ ಆದೇಶದ ಪ್ರತಿ ಪುಟಕ್ಕೆ | 3 |



# ಸೌಹಾರ್ದ ಸಹಕಾರಿ ಕಾಯಿದೆ ಮತ್ತು ಸಂಯುಕ್ತ ಸಹಕಾರಿಯ ಮಂಡಲಿ

▶▶ ಸಿ.ಎನ್. ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಮೈಸೂರು.

ಯೋಜನಾ ಆಯೋಗದ ಮಾದರಿ ಸಹಕಾರ ಕಾಯಿದೆಯನ್ನು ಎಲ್ಲಾ ರಾಜ್ಯಗಳಿಗೂ ರವಾನಿಸಿದ ಕೇಂದ್ರ ಸರ್ಕಾರ, ಎಲ್ಲಾ ರಾಜ್ಯಗಳಲ್ಲಿ ಒಂದೇ ಸಹಕಾರ ಕಾಯಿದೆ ಇರುವ ಪ್ರಯತ್ನವನ್ನು 1991ರಲ್ಲಿ ಪ್ರಾರಂಭಿಸಿತು. ಪ್ರಥಮವಾಗಿ ಆಂಧ್ರ ಸರ್ಕಾರ ಒಂದು ಉದಾರೀಕೃತ ಸಹಕಾರಿ ಕಾಯಿದೆ ತಂದಿತು ಮತ್ತು ಅದರಲ್ಲಿ ನಿಬಂಧಕರನ್ನು ಅಧಿಕಾರಗಳನ್ನು ಉದಾರೀಕರಿಸಿದರೂ, ಅಂತಿಮ ತೀರ್ಮಾನ ತೆಗೆದುಕೊಳ್ಳಲು ನಿಬಂಧಕರನ್ನು ಉಳಿಸಿಕೊಂಡರು.

ಕರ್ನಾಟಕ ರಾಜ್ಯ ಈ ಬಗ್ಗೆ ತೀರ್ಮಾನ ಮಾಡುವಾಗ, ಸಹಕಾರ ಸಚಿವರಾಗಿದ್ದ ಎಸ್.ಎಸ್.ಪಾಟೀಲ್‌ರವರ ಮುಖಂಡತ್ವದಲ್ಲಿ ಸಭೆಗಳನ್ನು ನಡೆಸಿ, ಅಂತಿಮವಾಗಿ ಹಳೇ ಕಾಯಿದೆಯ ಜೊತೆಗೆ ಒಂದು ಹೊಸ ಕಾಯಿದೆಯನ್ನು ರಚಿಸಲು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ಒಂದು ಸಹಕಾರ ನೀತಿಯನ್ನು ರೂಪಿಸಿತು ಮತ್ತು ಇದಕ್ಕೆ ಸಂಪುಟದ ಒಪ್ಪಿಗೆ ಪಡೆದು ಜಾರಿ ಮಾಡಿತು. ಇದಕ್ಕೆ ಪೂರಕವಾಗಿ ನಡೆದ ಸಭೆಗಳಲ್ಲಿ ಬಹಳಷ್ಟು ಇಲಾಖಾಧಿಕಾರಿಗಳು, ನಿಬಂಧಕರ ನಿಯಂತ್ರಣ ಇರಬೇಕೆಂದು ಪ್ರತಿಪಾದಿಸಿದರೂ, ಆಗಿನ ನಿಬಂಧಕರಾಗಿದ್ದ ಶ್ರೀ ವಿ.ಮಧು ಅವರು ಒಬ್ಬ ಐಎಎಸ್ ಅಧಿಕಾರಿಯಾಗಿದ್ದು, ತೆರೆದ ಮನಸ್ಸಿನಿಂದ ಚಿಂತನೆ ನಡೆಸುವ ಸ್ವಭಾವಿಯಾಗಿದ್ದು, ಅಧಿಕಾರದ ದಾಹ ಇಲ್ಲದೇ ಇದ್ದುದರಿಂದ, ನಿಬಂಧಕರ ಅಧಿಕಾರವನ್ನು ಒಂದು ಚುನಾಯಿತ ಮಂಡಲಿಯನ್ನು ಕಾಯಿದೆಯಲ್ಲಿಯೇ ರಚಿಸಿ, ಆ ಪ್ರಾಧಿಕಾರಕ್ಕೆ ನೀಡಲು ತಮ್ಮ ಸಹಮತ ಸೌಹಾರ್ದ ಕಾಯಿದೆಗೆ ಒಂದು ಹೊಸ ಚಿಂತನೆ ನಡೆಸಲಾಯಿತು.

ಇದಕ್ಕೆ ಕರಡು ತಯಾರು ಮಾಡುವಾಗ, ಅವರ ಸಹಮತದಿಂದ ಸಹಕಾರಿಯನ್ನು ನೋಂದಾಯಿಸುವುದು ಮತ್ತು ನಿಷ್ಕ್ರಿಯವಾದಾಗ ನೋಂದಣಿ ರದ್ದುಪಡಿಸುವುದು ಹೊರತು ಉಳಿದ ಎಲ್ಲಾ ನಿಬಂಧಕರ ಅಧಿಕಾರವನ್ನು ನೀಡಲು ತೀರ್ಮಾನಿಸಲಾಯಿತು.

ಈ ಮಂಡಲಿ ಒಂದು ಚುನಾಯಿತ ಮಂಡಲಿಯಾಗಿದ್ದರೂ ಸರ್ಕಾರದಲ್ಲಿಯೂ ಚುನಾಯಿತ ಪ್ರತಿನಿಧಿಗಳಲ್ಲಿ ಮಂತ್ರಿ ಮಂಡಳಿ ರಚಿಸಿ, ಕಾರ್ಯನಿರ್ವಹಿಸುತ್ತಿರುವುದರಿಂದ ಈ ಪ್ರಯತ್ನ ಮಾಡಬಹುದೆಂದು ತೀರ್ಮಾನಿಸಲಾಯಿತು. ಆದರೆ, ಇಂತಹ ಮಂಡಲಿಗೆ ಕಾಯಿದೆ ಜಾರಿ ಮಾಡುವ ಅಧಿಕಾರ ನೀಡಿದರೆ (ನಿಬಂಧಕರ ಅಧಿಕಾರ) ಸರ್ಕಾರ ರಚನೆಯಲ್ಲಿ ಮಂತ್ರಿ ಮಂಡಳಕ್ಕೆ ಸಲಹೆ ಸೂಚನೆ ನೀಡಲು ನುರಿತ, ಅನುಭವಿ ನೌಕರರ ಸಹಾಯ ಇದ್ದು, ಈ ಸೌಹಾರ್ದ ಕಾಯಿದೆಯಲ್ಲಿ ರಚನೆಯಾದ ಮಂಡಲಿಗೆ ಈ ರೀತಿ ಸಹಾಯ ನೀಡಲು ನುರಿತ ಸಿಬ್ಬಂದಿ ಕೊರತೆ ಇದ್ದು, ಈ ನಿಬಂಧಕರ ಅಧಿಕಾರಿಗಳು ಚಲಾಯಿಸುವಾಗ ವಿವೇಚನ ರಹಿತ, ಸ್ವೇಚ್ಚತೆಗೆ ಅವಕಾಶವಾಗಬಹುದು ಎಂಬ ಎಚ್ಚರಿಕೆಯಿಂದ ಮುಂದೆ ಬದಲಾವಣೆ ತರಬಹುದೆಂದು, ಅಭಿಪ್ರಾಯಪಟ್ಟ "ಸಂಯುಕ್ತ ಸಹಕಾರಿ" ಎಂಬ ಕಾಯಿದೆಯಲ್ಲಿಯೇ ಸೃಷ್ಟಿಸಿದ ಒಂದು ಚುನಾಯಿತ ಮಂಡಲಿಗೆ ನಿಬಂಧಕರ ಅಧಿಕಾರ ನೀಡಿ, ನಿಬಂಧಕರ ಅಧಿಕಾರವನ್ನು ಸೀಮಿತಗೊಳಿಸಿ, ಕಾಯಿದೆ ರಚಿಸಲಾಯಿತು. ಪ್ರಾರಂಭದಲ್ಲಿ ಅಲ್ಪನಿಗೆ ಐಶ್ವರ್ಯ ಬಂದಂತೆ ಕೆಲವು ಪ್ರಸಂಗಗಳಲ್ಲಿ ಸ್ವೇಚ್ಚತೆ ಮಂಡಲಿ ಕ್ರಮ ಜರುಗಿಸಿದ ಕ್ರಮಗಳ ಆಧಾರದ ಮೇಲೆ ನಿಯಂತ್ರಣ ಹೇರಲು ಸರ್ಕಾರ 2004ರಲ್ಲಿ ಪ್ರಯತ್ನಿಸಿತು ಮತ್ತು ಇದನ್ನು ಮುಂದುವರಿಸಿತು.

ಇದಕ್ಕೆ ಪೂರಕವಾಗಿ 1959ರ ಕಾಯಿದೆಗೂ, ಉದಾರೀಕರಣ ನೀತಿ ಅನುಸರಿಸಿ, ನಿಯಂತ್ರಣವಿದ್ದ ಕಲಂಗಳನ್ನು ಕೈಬಿಡಲಾಯಿತು. ಆದರೆ, ಇದಕ್ಕೆ ಅತಿ ಶೀಘ್ರದಲ್ಲಿ ಹೊಸದಾಗಿ ಬಂದ ಮಂತ್ರಿಗಳು ನಿಯಂತ್ರಣದ ಕಲಂಗಳನ್ನು ಮರು ಸ್ಥಾಪಿಸಿದರು. ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ, ಕೆಳ ಮಟ್ಟದ ಕಾಯಿದೆಯ ಕಲಂಗಳನ್ನು ಜಾರಿ ಮಾಡುವ ಅಧಿಕಾರಿಗಳಿಗೆ, ಈ ಎರಡೂ ಕಾಯಿದೆಗಳಲ್ಲಿನ ಧ್ಯೇಯೋದ್ದೇಶಗಳನ್ನು ಅರ್ಥೈಸಲಿಲ್ಲ. ಇದರ ಪರಿಣಾಮ, 1959ರ ಕಾಯಿದೆ ಜಾರಿ ಮಾಡಲು ಇರುವ ಅಧಿಕಾರಗಳನ್ನು ಕಿತ್ತು ಹಾಕಿದ್ದರಿಂದ, ಈ ಸೌಹಾರ್ದ ಸಹಕಾರಿಗಳು ಸ್ವತಂತ್ರ ಸಂಸ್ಥೆಗಳು ಮತ್ತು ನಮ್ಮ ನಿಯಂತ್ರಣದಲ್ಲಿ ಇಲ್ಲಿ ನಾನು ಅವುಗಳಿಗೆ ಮಾರ್ಗದರ್ಶನ ನೀಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿದರು. ಈ ಬಗ್ಗೆ ಇಲಾಖಾಧಿಕಾರಿಗಳಿಗೆ, ನಿಬಂಧಕರ ಸಮಕ್ಷಮ ಒಂದು ಮಾರ್ಗದರ್ಶನ ಸಮನ್ವಯ ಸಮಿತಿ ರಚಿಸಿ ನಿಯಂತ್ರಿಸುವ ಪ್ರಯತ್ನ ನಡೆಯಲೇ ಇಲ್ಲ.

ಈ ಕಾಯಿದೆ ರಚನೆಯಾದ ನಂತರ 1959ರ ಕಾಯಿದೆಯಲ್ಲಿನ ಶೇಕಡ 50ರಷ್ಟು ಸಂಘಗಳು ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದುತ್ತಾರೆಂದು ಭಾವಿಸಲಾಗಿತ್ತು. ಏಕೆಂದರೆ, ಬಹಳಷ್ಟು ರಾಜ್ಯ ಸಹಕಾರಿ ಮುಖಂಡರು ಎಲ್ಲಾ ವೇದಿಕೆಗಳಲ್ಲೂ ನಿಬಂಧಕರ ನಿಯಂತ್ರಣದಿಂದ ಸಹಕಾರ ಸಂಘಗಳ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ಪ್ರತಿಪಾದಿಸುತ್ತಿದ್ದರು. ಆದರೆ, ಈ ರೀತಿ ವರ್ಗಾವಣೆ ಹೊಂದಿದ ಸಹಕಾರಿಗಳ ಸಂಖ್ಯೆ 500ಕ್ಕೆ ಮೀರಲಿಲ್ಲ. ಇದಕ್ಕೆ ಮೂಲ ಹುಡುಕಿದರೆ, ತಿಳಿಯುವುದೇನೆಂದರೆ ಸೌಹಾರ್ದ ಕಾಯಿದೆಯಲ್ಲಿ ರಚಿಸಲಾದ ಸಂಸ್ಥೆಗಳಲ್ಲಿ ಸದಸ್ಯರು ಜಾಗೃತವಾಗಿರುತ್ತಾರೆ ಮತ್ತು ಸಹಕಾರಿ ಮುಖಂಡರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಂಸ್ಥೆಯನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳಲು ಸಾಧ್ಯವಾಗದೆಂದು ಮತ್ತು ಸರ್ಕಾರದ ಸವಲತ್ತುಗಳನ್ನು ಪಡೆಯಲು ಅಥವಾ ನಾಮನಿರ್ದೇಶನ ಮಾಡಿಸಿಕೊಂಡು ಹಿಂಬಾಗಿಲಿನಿಂದ ಪ್ರವೇಶ ಪಡೆಯಲು ಸಾಧ್ಯವಾಗುವುದಿಲ್ಲವೆಂದು. ಏಕೆಂದರೆ ಸೌಹಾರ್ದ ಕಾಯಿದೆಯ ಮೂಲ ಉದ್ದೇಶ, ಸಹಕಾರ ಸಂಸ್ಥೆಗಳು ಸ್ವಾಯತ್ತ, ಸ್ವಯಂ ನಿಯಂತ್ರಿತ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯಾದ ಮತ್ತು ಪ್ರಮುಖವಾಗಿ ಸರ್ಕಾರದ ಪ್ರತ್ಯಕ್ಷ ಮತ್ತು ಪರೋಕ್ಷ ಹಣ ಪಡೆಯಲು ಇರುವ ನಿರ್ಬಂಧದಿಂದ, ವರ್ಗಾವಣೆ ಹೊಂದಲು ಪ್ರಯತ್ನ ಪಡೆಯಲಿಲ್ಲವೆಂದು ಭಾವಿಸಬಹುದು. ಅಂದರೆ ಸಹಕಾರಿ ಮುಖಂಡರು ವೇದಿಕೆಯಲ್ಲಿ ಚಪ್ಪಾಳೆಗಿಟ್ಟಿಸಿಕೊಳ್ಳಲು ಮಾತ್ರ, ನಿಬಂಧಕರ/ಸರ್ಕಾರದ ನಿಯಂತ್ರಣವಿರಬಾರದೆಂದು ಪ್ರತಿಪಾದಿಸುವುದು, ಸ್ವಾಯತ್ತತೆ ನೀಡಿದಾಗ ಅದರ ಅನುಕೂಲ ಪಡೆಯಲು ನಿರಾಕರಿಸಿ, ರಾಜಕಾರಣ ಮಾಡಿ ಮುಖಂಡರಾಗಿ ಮುಂದುವರಿಯುವುದು.

ಸೌಹಾರ್ದ ಕಾಯಿದೆ ರಚನೆಯಾಗಿ 16 ವರ್ಷಗಳಾಗಿದ್ದರೂ ನೋಂದಣಿಯಾದ ಸಹಕಾರಿಗಳ ಸಂಖ್ಯೆ 4000 ಮಾತ್ರ ಮತ್ತು ಅವುಗಳ ಆರ್ಥಿಕ ಸ್ಥಿತಿಗತಿ ನೋಡಿದಾಗ, 1959ರ ಕಾಯಿದೆಯಲ್ಲಿ ರಚನೆಯಾದ ಸಹಕಾರ ಸಂಘಗಳು 115 ವರ್ಷಗಳಲ್ಲಿ ಕಂಡ ಪ್ರಗತಿಗಿಂತ, 16 ವರ್ಷಗಳಲ್ಲಿ ಸೌಹಾರ್ದ ಸಹಕಾರಿಗಳ ಪ್ರಗತಿ ಪ್ರಶಂಸನೀಯವೆಂದು ಗಮನಿಸಬಹುದು. ಸರ್ಕಾರದ/ನಿಬಂಧಕರ ಹಸ್ತಕ್ಷೇಪವಿಲ್ಲದಿದ್ದರೆ ಪ್ರಗತಿ ಸಾಧಿಸಬಹುದೆಂದು, ಸೌಹಾರ್ದ ಸಹಕಾರಿಗಳು ತೋರಿಸಿಕೊಟ್ಟಿವೆ.

ಸೌಹಾರ್ದ ಕಾಯಿದೆಯಲ್ಲಿ ಪ್ರಮುಖವಾದ ಸೇರ್ಪಡೆ ಎಂದರೆ, ಕಾಯಿದೆಯಲ್ಲಿಯೇ ಸೃಷ್ಟಿಯಾದ ನಿಬಂಧಕರ ಅಧಿಕಾರವನ್ನು ಚಲಾಯಿಸಲು, ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಶಾಸನಬದ್ಧ ಸಂಸ್ಥೆ "ಸಂಯುಕ್ತ ಸಹಕಾರಿ", ರಾಷ್ಟ್ರದಲ್ಲಿ ಯಾವುದೇ ಸಹಕಾರಿ ಕಾಯಿದೆಯೇ ರೂಪಿಸಲಾಗದ, ಒಂದು ಶಾಸನಬದ್ಧ ಸಂಸ್ಥೆಯನ್ನು ಹುಟ್ಟು ಹಾಕಿದ ಶ್ರೇಯಸ್ಸು ಕರ್ನಾಟಕ ಸರ್ಕಾರಕ್ಕೆ ಸಲ್ಲುತ್ತದೆ. ಇದಕ್ಕೆ ಪೂರಕವಾಗಿ ಯೋಜನಾ ಆಯೋಗದ

ಮೂಲಕ (ಬ್ರಹ್ಮಪ್ರಕಾಶ ವರದಿ) ರೂಪಿತವಾದ ಒಂದು ಮಾದರಿ ಸಹಕಾರ ಕಾಯಿದೆಯನ್ನು ರಾಜ್ಯಗಳಿಗೆ "ಏಕ ರೀತಿ ಸಹಕಾರ ಕಾಯಿದೆ" ಎಂಬ ನೀತಿಗೆ ಪೂರಕವಾಗಿ ಕಳುಹಿಸಿದಾಗ, 1959ರ ಕಾಯಿದೆಯಲ್ಲಿ ಸಂವಿಧಾನ ಪೂರಕ ತಿದ್ದುಪಡಿ ತಂದ ನಂತರವೂ ಹೊಸದಾಗಿ ಸೌಹಾರ್ದ ಕಾಯಿದೆ ರಚನೆ ಮಾಡಿದೆ. ಇದರ ಮಾದರಿಯಲ್ಲಿಯೇ 2011ರಲ್ಲಿ ಭಾರತ ಸರ್ಕಾರ, 97ನೇ ಸಂವಿಧಾನ ತಿದ್ದುಪಡಿಯಲ್ಲಿ ಹಲವಾರು ವಿಷಯಗಳ ಬಗ್ಗೆ ಏಕ ರೀತಿ ಕಾಯಿದೆ ರಚಿಸಲು ಸೇರ್ಪಡೆ ಮಾಡಿದೆ ಮತ್ತು ಅದಕ್ಕೆ ಕರ್ನಾಟಕದ ಸೌಹಾರ್ದ ಕಾಯಿದೆ ಮೂಲ ತತ್ವಗಳನ್ನು ಅಳವಡಿಸಿಕೊಂಡಿರುವುದು.

ಸೌಹಾರ್ದ ಕಾಯಿದೆ ರೂಪಿಸುವಾಗ ಮತ್ತೊಂದು ಅಂಶವನ್ನು ಗಮನದಲ್ಲಿರಿಸಿಕೊಳ್ಳಬೇಕು. ಅದೇನೆಂದರೆ, ನಿಬಂಧಕರ ನಿಯಂತ್ರಣ ಇಲ್ಲವೆಂದು ಮತ್ತು ಸ್ವಯಂ ನಿಯಂತ್ರಣವೆಂದು ತಿಳಿದ ನಂತರ ಅದನ್ನು ಸ್ವೇಚ್ಛತೆ ಎಂದು ಭಾವಿಸದೇ, ಜವಾಬ್ದಾರಿಯುತ ಸದಸ್ಯರು ಮತ್ತು ಮಂಡಲಿ ರಚನೆಯಾಗುತ್ತದೆ ಎಂದು ಸದಸ್ಯರು ಜಾಗೃತರಿದ್ದರೆ ಒಂದು ಸಂಸ್ಥೆ ಚುರುಕು ಪಡೆಯುತ್ತದೆ ಅಥವಾ ಸಂಘರ್ಷವೇರ್ಪಡುತ್ತದೆ. ಅಂದರೆ ಜಾಗೃತ ಸದಸ್ಯರು ತಾವು ಹೂಡಿದ ಬಂಡವಾಳ ಸುರಕ್ಷಿತವಾಗಿದೆಯೇ ಎಂಬುದನ್ನು ಆಗಿಂದ್ದಾಗ್ಗೆ ದೃಢೀಕರಿಸಿಕೊಳ್ಳುತ್ತಿರಬೇಕು. ಅದು ಜಾಗೃತ ಸದಸ್ಯರ ಜವಾಬ್ದಾರಿ, ಅಂತಹ ಸದಸ್ಯರಿಲ್ಲದಿದ್ದರೆ, ಸೌಹಾರ್ದ ಕಾಯಿದೆ ನಿಷ್ಕ್ರಿಯವಾಗುತ್ತದೆ. ಒಂದೇ ಗುಂಪಿನ ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಸೌಹಾರ್ದ ಸಹಕಾರಿ ಸ್ಥಾಪಿಸಿ, ಸ್ವಜನಪಕ್ಷಪಾತಗಳಾಗಬಹುದು ಮತ್ತು ಸಂಪನ್ಮೂಲವನ್ನು ತಿಂದು ಹಾಕಬಹುದು.

ಕಾಯಿದೆ ರೂಪಿಸಿದಾಗ ಗರಿಷ್ಠ ಸಂಖ್ಯೆಯ ನಿರ್ದೇಶಕರ ಸಂಖ್ಯೆ – ಜಿಲ್ಲೆಗೊಬ್ಬ ಪ್ರತಿನಿಧಿ ಎಂದು ಆಯ್ಕೆಯಾಗಬೇಕಾಗಿತ್ತು. ಸಂವಿಧಾನ ತಿದ್ದುಪಡಿ ನಂತರ ಗರಿಷ್ಠ ಸಂಖ್ಯೆ 21ಕ್ಕೆ ಸೀಮಿತಗೊಂಡಿದೆ. ಈ ಹಿಂದೆ ಜಿಲ್ಲೆಗೊಬ್ಬ ಪ್ರತಿನಿಧಿ ಎಂಬುದರಲ್ಲಿ ಕಾಯಿದೆ ರೂಪಿಸಿದಾಗ, ಆಯಾ ಜಿಲ್ಲೆ ಪ್ರತಿನಿಧಿಗಳು ತಮ್ಮಲ್ಲೇ ಒಬ್ಬರನ್ನು ಪ್ರತಿನಿಧಿಯಾಗಿ ಆಯ್ಕೆ ಮಾಡತಕ್ಕದೆಂದು.

ಆದರೆ, ಎರಡನೇ ಚುನಾವಣೆಗೆ ಪೂರ್ವದಲ್ಲಿ ತಂದ ಆಗಿನ ಮಂಡಲಿ ರಾಜ್ಯದ ಎಲ್ಲಾ ಸದಸ್ಯ ಸಹಕಾರಿಗಳು ಒಟ್ಟಾಗಿ ಮತ ಚಲಾಯಿಸುವುದು ಎಂದು ಇದರ ವಿರೋಧಾಭಾಸವೆಂದರೆ, ಪ್ರತಿನಿಧಿ ಆಯ್ಕೆ ಮಾಡುವಾಗ ತಮ್ಮ ಜಿಲ್ಲೆ ಪ್ರತಿನಿಧಿ ಬಗ್ಗೆ ಆ ಜಿಲ್ಲೆಯ ಸಹಕಾರಿಗಳಿಗೆ ಮಾತ್ರ ತಿಳುವಳಿ ಇದೆ. ಬೇರೆ ಜಿಲ್ಲೆ ಸಹಕಾರಿಗಳು ಮತ್ತೊಂದು ಜಿಲ್ಲೆಯ ಪ್ರತಿನಿಧಿ ಆಯ್ಕೆ ಮಾಡುವುದು ಸಾಧ್ಯವಿಲ್ಲದೇ ಇದ್ದರೂ ಉಪನಿಯಮಗಳನ್ನು ತಿದ್ದುಪಡಿ ಮಾಡಿ, ನಿಬಂಧಕರ ಒಪ್ಪಿಗೆ ಪಡೆದು ಜಾರಿ ಮಾಡಿದ್ದು. ಆದರೆ, ಸಂವಿಧಾನ ತಿದ್ದುಪಡಿ ನಂತರ ವಿಭಾಗವಾರು ಮತದಾರರ ಪಟ್ಟಿಯಲ್ಲಿ ಆ ವಿಭಾಗದ ಸದಸ್ಯ ಸಹಕಾರಿಗಳೇ ಮತದಾರರಾಗಿ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತಾರೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ರಚನೆಯಾದ ನಂತರ, ಆ ಮಂಡಲಿ ಶಾಸನಬದ್ಧ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ್ದರಿಂದ, ಅವರಿಗೆ ಕಾನೂನಿನ ಅರಿವಿನ ಅವಶ್ಯಕತೆ ಇದೆ. ಆದರೆ, ಅಂತಹ ತರಬೇತಿ ವ್ಯವಸ್ಥೆಯಾಗುತ್ತಿಲ್ಲ. ಒಂದು ಸದಸ್ಯ ಸಹಕಾರಿಯ ಆಡಳಿತ ಮಂಡಲಿ ರದ್ದುಪಡಿಸುವುದು ಅಥವಾ ಅಮಾನತ್ತಿನಲ್ಲಿಡುವುದು, ಸದಸ್ಯ ಸಹಕಾರಿಯ ವ್ಯವಹಾರದ ಮೇಲೆ ತಪಾಸಣೆ/ ಪರಿವೀಕ್ಷಣೆ ಮಾಡುವುದು, ಆ ಸದಸ್ಯ ಸಹಕಾರಿಯ ಚುನಾಯಿತ ನಿರ್ದೇಶಕರ ಅನರ್ಹತೆಗೊಳಿಸುವುದು ಇತ್ಯಾದಿ ಅಧಿಕಾರಗಳನ್ನು ನೀಡಲಾಗಿದೆ. ಈ ರೀತಿ ರಚನೆಯಾದ ಮಂಡಲಿ ಸದಸ್ಯರು ಅರೆನ್ಯಾಯಿಕ ಅಧಿಕಾರ ಚಲಾಯಿಸಲು ಶಕ್ತರೇ ಎಂಬುದನ್ನು ಖಾತ್ರಿ ಪಡಿಸಿಕೊಂಡಿಲ್ಲ. ಅದಕ್ಕಾಗಿ ಇಂತಹ ನಿರ್ದೇಶಕರುಗಳ ಅರೆನ್ಯಾಯಿಕ ಅಧಿಕಾರ ಚಲಾಯಿಸಲು ತರಬೇತಿ ಅವಶ್ಯ.

ಸೌಹಾರ್ದ ಕಾಯಿದೆಯಲ್ಲಿ 72 ಕಲಂಗಳು ಮಾತ್ರ ಇದೆ. ಸಹಕಾರಿಗಳು ನಿಯಂತ್ರಣವಿರುವ ಯಾವುದೇ ಅವಕಾಶಗಳನ್ನು ಸೇರಿಸಲಾಗಿಲ್ಲ. ಸೌಹಾರ್ದ ಕಾಯಿದೆಗೆ 2004ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದು, ವಿಚಾರಣೆ, ಚುನಾವಣೆ, ಸಮಾಪನೆಯನ್ನು ನಿಬಂಧಕರು ಚಲಾಯಿಸಲು ಮತ್ತು ಸಂವಿಧಾನದ 97ನೇ ತಿದ್ದುಪಡಿ ನಂತರ ಲೆಕ್ಕತಪಾಸಕರನ್ನು ನೇಮಿಸಲು, ಲೆಕ್ಕತಪಾಸಣಾ ನಿರ್ದೇಶಕರಿಗೆ ವರ್ಗಾಯಿಸಲು ಕ್ರಮ ಜರುಗಿಸಲಾಗಿದೆ. ಅಂದರೆ ನಿಬಂಧಕರ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ನೀಡಿದ್ದನ್ನು ಕಿತ್ತು ಹಾಕಿ, ಇಲಾಖೆಗೆ ವಾಪಸ್ ಪಡೆದಿರುವುದು, ಒಂದು ವಿರೋಧಭಾಸ. ಏಕೆಂದರೆ ಸ್ವಯಂ ನಿಯಂತ್ರಿತ ಸಂಸ್ಥೆಗಳೆಂಬ ನೀತಿಗೆ ತಿಲಾಂಜಲಿ ನೀಡಲಾಗಿದೆ. ಮತ್ತೊಂದು ಕೆಟ್ಟ ಬೆಳವಣಿಗೆ ಎಂದರೆ ವಿಶ್ವನಾಥನ್ ಸಮಿತಿ ವರದಿಯಲ್ಲಿ ಒಂದೇ ಕಾಯಿದೆ ಸಾಕೆಂದು ಮತ್ತು ವಿಧಾನ ಮಂಡಳದ ಒಂದು ಉಪಸಮಿತಿ ಆದೇಶದಂತೆ ನಿಬಂಧಕರೇ ಒಂದು ಸಮಿತಿ ರಚಿಸಿ, ಎರಡೂ ಕಾಯಿದೆಗಳನ್ನು ಒಂದೇ ಕಾಯಿದೆಯಡಿ ತರುವ ಪ್ರಯತ್ನ ನಡೆಸಲಾಗಿದೆ. ರಾಷ್ಟ್ರಕ್ಕೆ ಮಾದರಿ ಕಾಯಿದೆ ನೀಡಿದ ಸೌಹಾರ್ದ ಕಾಯಿದೆ ಉಳಿಸಿಕೊಂಡು ಸಹಕಾರ ಕಾಯಿದೆ 1959 ತಿಲಾಂಜಲಿ ನೀಡಿದರೆ ನಿಬಂಧಕರ ನಿಯಂತ್ರಣದಿಂದ ಸಹಕಾರಿ ಸಂಸ್ಥೆಗಳ ಮುಕ್ತಿ ಪಡೆಯಬಹುದು. ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಹಣ ಪಡೆಯದ ಸಂಸ್ಥೆಗಳ ಆರ್ಥಿಕವಾಗಿ ಸಬಲರಾಗಿ ಕೆಲಸ ಮಾಡುತ್ತಿವೆಂಬುದಕ್ಕೆ ಸೌಹಾರ್ದ ಕಾಯಿದೆ ಸಹಕಾರಿ ಸಂಸ್ಥೆಗಳ ಒಂದು ದೊಡ್ಡ ಉದಾಹರಣೆ.

ಸೌಹಾರ್ದ ಕಾಯಿದೆಯಲ್ಲಿ ರೂಪಿಸಿದ ಉದಾರೀಕೃತ ಸಹಕಾರ ಬೆಳವಣಿಗೆ ಪೂರಕವಲ್ಲದ ಒಂದು ದೊಡ್ಡ ತಪ್ಪು ನಡೆ ಎಂದರೆ ಸಂಯುಕ್ತ ಸಹಕಾರಿಗೆ 11.02.2016 ಚುನಾವಣೆಯನ್ನು (ಐದು ವರ್ಷ ಮುಕ್ತಾಯವಾದ ದಿನಾಂಕ) ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು, ಚುನಾವಣೆ ನಡೆಯದಂತೆ ಮತ್ತು ಆಡಳಿತಾಧಿಕಾರಿ ನೇಮಕ ಮಾಡಲಾರದಂತೆ ಆದೇಶ ಪಡೆದು 6 1/2 ವರ್ಷಗಳು ಅಧಿಕಾರದಲ್ಲಿ ಮುಂದುವರೆದದ್ದು. ಸಂಯುಕ್ತ ಸಹಕಾರಿ ಒಂದು ಮಾದರಿಯಾಗಿ ಕೆಲಸ ನಿರ್ವಹಿಸಬೇಕು. ಏಕೆಂದರೆ, ಈ ರಾಜ್ಯದ ಸದಸ್ಯ ಸಹಕಾರಿಗಳಿಗೆ ಒಂದು ಮಾದರಿಯಾಗಿರಬೇಕು. ಅದರಲ್ಲಿ ಸಂಯುಕ್ತ ಸಹಕಾರಿಯೇ ರಿಟ್ ಅರ್ಜಿ ದಾಖಲಿಸಿರುವುದು. ಸಂಯುಕ್ತ ಸಹಕಾರಿ ಒಂದು ಶಾಸನಬದ್ಧ ಸಂಸ್ಥೆ. ಅಂದರೆ ಅದು ನಿಬಂಧಕರ ಸ್ಥಾನದಲ್ಲಿದೆ. ಸರ್ಕಾರವೇ ಸರ್ಕಾರದ ಮೇಲೆ ದಾವಾ ದಾಖಲಿಸಿದಂತಾಗುತ್ತದೆ ಎಂದು ಅರಿವಿದ್ದರೂ, ಸಂಯುಕ್ತ ಸಹಕಾರಿ ರಿಟ್ ದಾಖಲಿಸಿರುವುದು ಸ್ವಹಿತಾಸಕ್ತಿ ಕಾಪಾಡಲು ಅಂದರೆ, ಸಂಯುಕ್ತ ಸಹಕಾರಿ ಖರ್ಚಿನಲ್ಲಿ ಕೆಲವು ನಿರ್ದೇಶಕರು ಪರಿಹಾರ ಪಡೆದಿದ್ದಾರೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಸಂವಿಧಾನಕ್ಕೆ ಅಪಚಾರ. ಏಕೆಂದರೆ, ಸಂವಿಧಾನದಲ್ಲಿ ಚುನಾಯಿತ ಮಂಡಲಿಯು ಅಧಿಕಾರವನ್ನು ಚುನಾವಣೆ ದಿನಾಂಕದಿಂದ ಐದು ವರ್ಷಗಳು. ಐದು ವರ್ಷಗಳ ನಂತರ ಚುನಾಯಿತ ಪ್ರತಿನಿಧಿಗಳು ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟಂತೆ. ಇದನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದರ ಜೊತೆಗೆ ನಿಬಂಧಕರಿಗೆ/ ಆಡಳಿತಾಧಿಕಾರಿ ನೇಮಿಸದಂತೆ ಆದೇಶ ಪಡೆದಿರುವುದು ಮತ್ತು ಉಚ್ಚ ನ್ಯಾಯಾಲಯದ ದಾರಿ ತಪ್ಪಿಸಿ, ಆದೇಶ ಪಡೆದಿರುವುದನ್ನು ಸದಸ್ಯ ಸಹಕಾರಿಗಳ ಒಂದು ಮಾದರಿಯಾಗಿ ಗಣನೆಗೆ ತೆಗೆದುಕೊಂಡರೆ, ಸ್ವಾಯತ್ತ, ಸ್ವಾತಂತ್ರ್ಯ, ಸ್ವಯಂ ನಿಯಂತ್ರಿತ ಸಂಸ್ಥೆಯೆಂಬ ಹೆಗ್ಗಳಿಕೆಗೆ ಅಪಚಾರವೆಸಗಿದಂತೆ ಎಂದು ಈ ಸಂಯುಕ್ತ ಸಹಕಾರಿಯ ನಿರ್ದೇಶಕರು ಅಧಿಕಾರ ವ್ಯಾಮೋಹದಿಂದ, ಸಂವಿಧಾನ ಮತ್ತು ಕಾಯಿದೆ ವಿರುದ್ಧವಾಗಿ ಅಂದರೆ ಉಲ್ಲಂಘಿಸಿ ಮುಂದುವರಿದದ್ದು ಒಂದು ಆಭಾಸ. ಇದರ ಜೊತೆಗೆ ಒಂದುವರೆ ವರ್ಷದ ಅವಧಿಯನ್ನು ಹೆಚ್ಚುವರಿಯಾಗಿ ಅನುಭವಿಸಿದರ ಸಾರ್ಥಕತೆ ಏನು ಸೌಹಾರ್ದ ಆಂದೋಲನಕ್ಕೆ ಒಂದು ಕಪ್ಪು ಚುಕ್ಕೆ.

ಉಚ್ಚ ನ್ಯಾಯಾಲಯದಲ್ಲಿ ಆಂತರಿಕ ಆದೇಶ ಪಡೆದಿದ್ದ – ಪ್ರಕರಣ ಮುಂದುವರಿಸುವುದು ಸಾಧ್ಯತೆ ಇಲ್ಲ. ಅಂದರೆ ಉಚ್ಚ ನ್ಯಾಯಾಲಯ ಪ್ರಕರಣವನ್ನು ವಜಾ ಮಾಡಿದಾಗ/ ಮಾಡುತ್ತದೆ. ಈ 1 1/2 ವರ್ಷದಲ್ಲಿ ಸಂಯುಕ್ತ ಸಹಕಾರಿ ತೆಗೆದುಕೊಂಡ ಎಲ್ಲಾ ತೀರ್ಮಾನಗಳ ಅಸಿಂಧುವಾಗುವುದಿಲ್ಲವೇ. ಇದಕ್ಕೆ 1959ರ ಕಾಯಿದೆಯಲ್ಲಿ ವಿನಾಯಿತಿ ಇದೆಯೇ? (ಅದೇನೆಂದರೆ, ಮಂಡಲಿ ರಚನೆಯಲ್ಲಿನ ದೋಷದಿಂದ, ನಡವಳಿಗಳು ಅಸಿಂಧುವಾಗತಕ್ಕದ್ದಲ್ಲವೆಂದು.)

# ಸವಾಲುಗಳನ್ನು ಮೀರಿ ಬೆಳೆಯಲು ಸಮರ್ಥವಾಗಿದೆ ಸಹಕಾರ ಕ್ಷೇತ್ರ

▶▶ ರಘುನಂದನ ಕೆ., ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು

ಮಾನವನ ಜೀವಿತದ ಇತಿಹಾಸದ ಆರಂಭದಿಂದಲೂ ಪರಸ್ಪರ 'ಸಹಕಾರ'ದೊಂದಿಗೆ ಅಲಿಖಿತವಾಗಿ ಜಾರಿಯಲ್ಲಿದ್ದ ಸಹಕಾರ ಪದ್ಧತಿಯು ಲಿಖಿತವಾಗಿ ಚಳುವಳಿಯ ರೂಪದಲ್ಲಿ ಉಗಮವಾಗಿದ್ದೇ ಸಂಕಷ್ಟ ಪರಿಸ್ಥಿತಿಯನ್ನು ಮೀರುವ ಉದ್ಧೇಶದಿಂದ. ಕೈಗಾರಿಕಾ ಕ್ರಾಂತಿಯ ಪರಿಣಾಮಗಳನ್ನು ಜಗತ್ತು ಎದುರಿಸುತ್ತಿರುವಾಗ, ಬಂಡವಾಳಶಾಹಿ ಪದ್ಧತಿಯ ಸಂಕಷ್ಟಗಳನ್ನು ಎದುರಿಸುವ ನಿಟ್ಟಿನಲ್ಲಿ ಹೊಸ ಆರ್ಥಿಕ ಪದ್ಧತಿಯಾಗಿ ಸಾಮಾಜಿಕ ಸಮಸ್ಯೆಗಳ ಸುಧಾರಣೆಗಾಗಿ 'ಸಹಕಾರ' ರೂಪುಗೊಂಡಿರುವುದನ್ನು ಸಹಕಾರ ಕ್ಷೇತ್ರದ ಇತಿಹಾಸವನ್ನು ಪರಿಶೀಲಿಸಿದಾಗ ಗಮನಿಸಬಹುದು. ಸಹಕಾರ ಚಳುವಳಿಯ ಪಿತಾಮಹ ರಾಬರ್ಟ್ ಓವನ್ ಅಥವಾ ಮೊದಲ ಸಹಕಾರ ಸಂಘದ ಸ್ಥಾಪಕರಾದ ರಾಕ್‌ಡೇಲ್ ಪಯೋನಿಯರ್ಸ್‌ರವರು 'ಸಹಕಾರ'ವನ್ನು ಆರಂಭಿಸಿದ್ದು ಕೂಡ ಬಂಡವಾಳಶಾಹಿ ಪದ್ಧತಿಯ ದುಷ್ಪರಿಣಾಮಗಳಿಂದ ಆಗಿದ್ದ ಸಾಮಾಜಿಕ ಕೆಡಕುಗಳನ್ನು, ಸ್ವಾರ್ಥ, ಶೋಷಣೆಗಳನ್ನು ನಿವಾರಿಸುವ ಉದ್ಧೇಶದಿಂದಲೇ ಅಲ್ಲವೇ?. 1752ಕ್ಕಿಂತಲೂ ಪೂರ್ವದಲ್ಲೇ ಸಹಕಾರಿ ಡೈರಿ ಸ್ಥಾಪನೆಯ ಪ್ರಯತ್ನಗಳು ಅಮೇರಿಕದಲ್ಲಿ ನಡೆದಿದ್ದವು, ನಂತರ ಕೂಡ ಅನೇಕ ಪ್ರಯತ್ನಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರತ್ಯೇಕವಾಗಿ ನಡೆದವು. ಆದರೆ, ಆರಂಭಿಕ ಪ್ರಯತ್ನಗಳು ವಿಫಲವಾದದ್ದೇ ಹೆಚ್ಚು. ಅಂದಿನ ವಿಫಲತೆಗೆ ಕಾರಣವಾಗಿದ್ದ ಬದ್ಧತೆಯ ಕೊರತೆ, ನಾಯಕತ್ವದ ಕೊರತೆ, ರಾಜಕೀಯ ಹಸ್ತಕ್ಷೇಪ ಇತ್ಯಾದಿಗಳು ಇಂದಿಗೂ ಮುಂದುವರೆದಿದ್ದರೂ ಕೂಡ, ಸಹಕಾರ ಕ್ಷೇತ್ರ ಈ ಕೊರತೆಗಳ ನಡುವಿನಿಂದಲೇ ರೂಪುಗೊಂಡು ವಿಶ್ವ ವ್ಯಾಪಿಯಾಗಿ ಬೆಳೆದು ಬಂದಿರುವುದಂತೂ ಸತ್ಯ.

ಬದಲಾಗುತ್ತಿರುವ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳಲ್ಲಿ ಸಹಕಾರ ಕ್ಷೇತ್ರ ಉಳಿಯುವುದು ಕಷ್ಟ, ಈ ಕ್ಷೇತ್ರ ಸಂಕಷ್ಟದಲ್ಲಿದೆ, ಹೊಸ ಆರ್ಥಿಕ ನೀತಿಗಳು, ಬದಲಾಗುತ್ತಿರುವ ಕಾಯ್ದೆಗಳು ಸಹಕಾರ ಕ್ಷೇತ್ರಕ್ಕೆ ಮಾರಕವಾಗಿ ಪರಿಣಮಿಸುತ್ತಿವೆ ಎನ್ನುವ ಕೂಗು ಇಂದಿನ ದಿನಗಳಲ್ಲಿ ಹೆಚ್ಚುತ್ತಿದೆಯಾದರೂ, ನಾವೆಲ್ಲ ಅರ್ಥ ಮಾಡಿಕೊಳ್ಳಬೇಕಾದ ಸತ್ಯವೆಂದರೆ – ಸಹಕಾರ ಕ್ಷೇತ್ರಕ್ಕೆ ಸಂಕಷ್ಟಗಳು ಹೊಸತಲ್ಲ, ಸಂಕಷ್ಟಗಳನ್ನು ಮೀರುವುದಕ್ಕಾಗಿಯೇ ಹುಟ್ಟಿರುವ ಕ್ಷೇತ್ರವಿದು. ಸಹಕಾರ ಕ್ಷೇತ್ರ ಬೆಳೆದು ಬಂದ ದಾರಿಯನ್ನು ಗಮನಿಸುತ್ತಾ ಹೋದರೆ ಇದು ಅರ್ಥವಾಗುತ್ತಾ ಹೋಗುತ್ತದೆ. ಇಂಗ್ಲೆಂಡ್, ಜರ್ಮನಿ, ಡೆನ್ಮಾರ್ಕ್ ಇತ್ಯಾದಿ ದೇಶಗಳಲ್ಲಿ ಸಹಕಾರ ಚಳುವಳಿ ಸಾಮಾಜಿಕ ಚಿಂತಕರಿಂದ ಆರಂಭಿಸಲ್ಪಟ್ಟು ಜನರ ಚಳುವಳಿಯಾಗಿ ರೂಪಗೊಂಡರೆ ಭಾರತದಲ್ಲಿ ಇದು ಸರ್ಕಾರದ ಆರಂಭಶೀಲತೆ ಹಾಗೂ ಸರ್ಕಾರದ ಪೋಷಣೆ, ಉತ್ತೇಜನದಿಂದ ಬೆಳೆದು ಬಂದಿರುತ್ತದೆ. ಆದ್ದರಿಂದಲೇ, ಸರ್ಕಾರದ ನೀತಿಗಳಲ್ಲಿ ಬದಲಾವಣೆಗಳುಂಟಾದ ಸಂದರ್ಭದಲ್ಲೆಲ್ಲಾ ಸಹಕಾರ ಚಳುವಳಿಯು ಸಂಕಷ್ಟದ ಆತಂಕವನ್ನು ಎದುರಿಸುತ್ತದೆ. ಆದರೆ, ಪ್ರಸಕ್ತ ದಿನಗಳಲ್ಲಿ ಸರ್ಕಾರದ ಪೋಷಣೆಯನ್ನು ಮೀರಿ ಕೂಡ ಸಹಕಾರ ಚಳುವಳಿ ಬೆಳೆಯುತ್ತಿರುವುದನ್ನು ಗಮನಿಸಬಹುದು.

ಸಹಕಾರ ಕ್ಷೇತ್ರ ಅನೇಕ ಹಂತದಲ್ಲಿ ಸಂಕಷ್ಟಗಳನ್ನು ಎದುರಿಸುತ್ತಲೇ ಬಂದಿದೆ, ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದಾಗ, ರೀಜಿನಲ್ ಬ್ಯಾಂಕುಗಳನ್ನು ಆರಂಭಿಸಿದಾಗ, ಬ್ಯಾಂಕ್ ಫೆಸಿಲಿಟೇಟರ್/ಕರೆಸ್ಪಾಂಡೆನ್ಸ್‌ಗಳಿಗೆ ಅವಕಾಶ ನೀಡಿದಾಗಲೆಲ್ಲಾ ಪರೋಕ್ಷವಾಗಿ ಸಹಕಾರ ಕ್ಷೇತ್ರ ನಿರ್ಲಕ್ಷಿಸಲ್ಪಟ್ಟಿತು. ಆರ್ಥಿಕ ಸೇರ್ಪಡೆಯ ಮುಖ್ಯವಾಹಿನಿಯಲ್ಲಿ ಸಹಕಾರ ಕ್ಷೇತ್ರವನ್ನು ಪರಿಗಣಿಸಲಿಲ್ಲ. ಉದಾರೀಕರಣ, ಜಾಗತೀಕರಣ, ಖಾಸಗೀಕರಣಗಳು ಜಾರಿಗೆ ಬಂದ 1991ರಲ್ಲಿ ನೂತನ ಆರ್ಥಿಕ ನೀತಿಯ ಸಂದರ್ಭದಲ್ಲಿ ಹಾಗೂ ನಂತರದ ದಶಕದಲ್ಲಿ, ಸ್ಪರ್ಧಾತ್ಮಕವಾಗಿ ಎಲ್ಲಾ ಕ್ಷೇತ್ರಗಳು ಬೆಳೆದು ಸಹಕಾರ ಕ್ಷೇತ್ರ ಸ್ಪರ್ಧೆಯ ವೇಗಕ್ಕೆ ಹೊಂದಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನೆ ಬಂದಾಗ ಕೂಡ, ಸಾಂಪ್ರದಾಯಿಕ ಪದ್ಧತಿಗಳಿಂದ ಆಚೆ ಬಂದು ವೃತ್ತಿಪರತೆಯೊಂದಿಗೆ ಸಹಕಾರ ಕ್ಷೇತ್ರ ಬದಲಾವಣೆಯತ್ತ ಮುಖ ಮಾಡಿ ಬೆಳವಣಿಗೆಯತ್ತ ನಡೆಯುತ್ತಲೇ ಇದೆ. ಈಗ ಡಿಜಟಲೀಕರಣದ ವೇಗಕ್ಕೆ ಹೊಂದಿಕೊಳ್ಳಲು ಸಹಕಾರ ಕ್ಷೇತ್ರ ಸಿದ್ಧವಾಗುತ್ತಿದೆ. 2008ರಲ್ಲಿ ಆರ್ಥಿಕ ಬಿಕ್ಕಟ್ಟಿನಿಂದ ಜಾಗತಿಕ ಅರ್ಥ ವ್ಯವಸ್ಥೆ ಅಸ್ತವ್ಯಸ್ತವಾದಾಗ ಕೂಡ ಸಹಕಾರ ಕ್ಷೇತ್ರ ಯಾವುದೇ ಪರಿಣಾಮಗಳಿಗೆ ಒಳಗಾಗದೇ ಭಾರತದ ಆರ್ಥಿಕತೆಗೆ ತನ್ನದೇ ಆದ ಕೊಡುಗೆಯನ್ನು ನೀಡಿತು.

ಪ್ರಸಕ್ತ ಸನ್ನಿವೇಶವನ್ನು ಗಮನಿಸಿದಾಗ, ತೆರಿಗೆ ವ್ಯಾಪ್ತಿಯಿಂದ ಹೊರಗಿದ್ದ ಅರ್ಬನ್ ಕೋ ಆಪರೇಟಿವ್ ಬ್ಯಾಂಕುಗಳು 2006ರಿಂದ ತೆರಿಗೆ ವ್ಯಾಪ್ತಿಗೊಳಪಟ್ಟಿವೆ. ನೇರ ತೆರಿಗೆ ಪದ್ಧತಿ ಜಾರಿಯಾದಲ್ಲಿ ಎಲ್ಲಾ ಸಹಕಾರ ಸಂಸ್ಥೆಗಳು ತೆರಿಗೆ ವ್ಯಾಪ್ತಿಗೆ ಒಳಪಡುತ್ತವೆ ಎನ್ನುವ ಸನ್ನಿವೇಶ ಸೃಷ್ಟಿಯಾಗಿ ಇದನ್ನು ವಿರೋಧಿಸಿ 2011ರಲ್ಲಿ ರಾಜ್ಯದಲ್ಲಿ ಸಹಕಾರಿಗಳ ಬೃಹತ್ ಸಮಾವೇಶ ಕೂಡ ನಡೆದಿತ್ತು, ಸದ್ಯಕ್ಕೆ ನೇರ ತೆರಿಗೆ ಪದ್ಧತಿ ಜಾರಿಯಾಗದೇ ಸಹಕಾರಿಗಳು ನಿಟ್ಟುಸಿರು ಬಿಡುವಂತಾಗಿದೆ. ನವೆಂಬರ್ 08, 2016ರಂದು ರೂ.500/– ಹಾಗೂ ರೂ.1000/–ಗಳ ನೋಟು ಅಮಾನ್ಯೀಕರಣವಾದ ಸಂದರ್ಭದಲ್ಲಿ ಸಹಕಾರ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು. ಆದಾಯ ತೆರಿಗೆ ಕಾಯ್ದೆಯಲ್ಲಾದ ಬದಲಾವಣೆಗಳು ಅದರಲ್ಲೂ ಮುಖ್ಯವಾಗಿ ಹೊಸದಾಗಿ 01 ಏಪ್ರಿಲ್ 2017ರಿಂದ ಜಾರಿಗೆ ಬಂದ 269ಎಸ್‌ಟಿ ಎನ್ನುವ ಕಲಂ ಸಹಕಾರ ಕ್ಷೇತ್ರದಲ್ಲಿ ಸಂಕಷ್ಟ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ದಿ ಸಿಟಿಜನ್ ಕೋ ಆಪರೇಟಿವ್ ಸೊಸೈಟಿ, ಹೈದರಾಬಾದ್ ಇದರ ಪ್ರಕರಣದಲ್ಲಿ ಆದಾಯ ತೆರಿಗೆ ಅನ್ವಯಿಸುವ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸಹಕಾರಿಗಳ ಆತಂಕಕ್ಕೆ ಕಾರಣವಾಗಿದೆ. ಆದಾಯ ತೆರಿಗೆ ಇಲಾಖೆಯಿಂದ ಸಹಕಾರ ಸಂಸ್ಥೆಗಳಿಗೆ ಬರುತ್ತಿರುವ ನೋಟೀಸುಗಳು ಸಹಕಾರಿಗಳಲ್ಲಿ ಆತಂಕ ಉಂಟು ಮಾಡುತ್ತಿವೆ. ಜಿಎಸ್‌ಟಿಯಿಂದಾಗಿ ಸಹಕಾರಿಗಳು ಪರೋಕ್ಷವಾಗಿ ತೊಂದರೆಗಳನ್ನು ಅನುಭವಿಸುತ್ತಿವೆ. ಇದೆಲ್ಲದರ ನಡುವೆಯೂ ಸಹಕಾರ ಕ್ಷೇತ್ರ ಸಂಕಷ್ಟ ಪರಿಸ್ಥಿತಿಯನ್ನು ಮೀರಿ ಬೆಳೆಯುತ್ತಿದೆ.

ಇಷ್ಟೆಲ್ಲ ಆತಂಕಗಳು ಎದುರಾಗುತ್ತಿದ್ದರೂ, ಸಹಕಾರ ಕ್ಷೇತ್ರದ ಬೆಳವಣಿಗೆಯ ಅನಿವಾರ್ಯತೆ ಜಾಗತಿಕ ಮಟ್ಟದಲ್ಲಿ ಪ್ರತಿಧ್ವನಿಸುತ್ತಿದೆ. ವಿಶ್ವವು ಸವಾಲಿನ ಸರಣಿಯನ್ನೇ ಎದುರಿಸುತ್ತಿರುವ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳು ಸಮರ್ಥ ಕಾರ್ಯಕರ್ತರಾಗಿ ತಮ್ಮನ್ನು ತಾವು ಹೊಂದಿಸಿಕೊಂಡು ಯಶಸ್ವಿಯಾಗಬಲ್ಲವು ಎಂದು 2013ರ ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಜಾಗತಿಕ ಸಮ್ಮೇಳನದಲ್ಲಿ ಅಭಿಪ್ರಾಯ ವ್ಯಕ್ತವಾಗಿದ್ದು, ಸಹಕಾರ ಸಂಸ್ಥೆಗಳು ಸಂಕಷ್ಟದಲ್ಲೂ ಕೂಡ ಉತ್ತಮವಾಗಿ ಕೆಲಸ ನಿರ್ವಹಿಸಬಲ್ಲವು ಎಂದು ಘೋಷಿಸಲಾಗಿದೆ. ಸಹಕಾರಿ ಸಂಸ್ಥೆಗಳಿಂದ ಉತ್ತಮ ರಾಷ್ಟ್ರ ನಿರ್ಮಾಣ ಎನ್ನುವ ಘೋಷದೊಂದಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ 2012ನ್ನು ಸಹಕಾರಿಗಳ ವರ್ಷವೆಂದು



# ಪ್ರಕೃತಿಯ ಋಣ ತೀರಿಸು

▶▶ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಈಗಿತ್ತಲಾಗಿನ ಜಗವು ಜಗಳದ್ದು, ಕಪಟದ್ದು, ಕೃತ್ರಿಮದ್ದೆಂಬ ಜನರ ಮನೋಇಂಗಿತವನ್ನು ಅರಿತ ಡಿ.ವಿ.ಜಿ.ಯವರು ಹಿಂದಿನವರ ಬದುಕಿನ ಉಸಿರುಗಳಲ್ಲಿದ್ದ "ಉದಾರ ಚರಿತಾನಾಂ" "ವಸುದೈವ ಕುಟುಂಬಕಂ" ಎಂಬ ವಾಕ್ಯಗಳಿಂದ ವಿಶ್ವವೇ ಒಂದು ಕುಟುಂಬವೆಂಬ ಭಾವನೆ ತಳೆದವರಾಗಿದ್ದರೆಂದು ತಿಳಿಸುತ್ತಾ ಹೃದಯ ವೈಶಾಲ್ಯತೆಯನ್ನು ಹೆಚ್ಚಿಸಿಕೊಳ್ಳಿ, ಸಮಷ್ಟಿಭಾವವನ್ನು ತಳೆಯಿರೆಂದು ಕರೆಕೊಡುತ್ತಿದ್ದಾರೆ.

ಸೂರ್ಯಚಂದ್ರರುಗಳ ಬೆಳಕು ನೀಡುವಿಕೆಯನ್ನು, ಭೂಮಿಗಾಳಿಗಳ ನಿರಂತರ ಸೇವೆಯನ್ನು ನೋಡಿಯಾದರೂ ತಮ್ಮಗಳ ಸ್ವಾರ್ಥಪರ ಜೀವನಕ್ಕೆ "ಹೊಡೆಸಲಾಂ" "ಒಲವಾತ್ಮ ವಿಸ್ತರಣ" ಭಾವವನ್ನು ಹೊಂದುವ ಮೂಲಕ ಸಮಾಜದ ಎಲ್ಲರ ಏಳಿಗೆಗೆ ಕಾರಣನಾಗೆಂದು ಮನೋಜ್ಞನವಾಗಿ ತಿಳಿಸಿದ್ದಾರೆ. ಪದ್ಯದ ಅರ್ಥವನ್ನು ಗ್ರಹಿಸೋಣ.

**"ವಿಸ್ತಾರದಲಿ ಬಾಳು ವೈಶಾಲ್ಯದಿಂಬಾಳು**
**ಕತ್ತಲೆಯ ಮೊಡಕು ಮೂಲೆಗಳ ಸೇರದಿರು**
**ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ವ**
**ಮೃತ್ಯುನಿನಗಲ್ಪತೆಯೋ ಮಂಕುತಿಮ್ಮ"**

ಯಾವುದೇ ತಂಡದ ಕಾರ್ಯದ ಯಶಸ್ವಿ ನಿರ್ವಹಣೆಯು ಅದರ ನಾಯಕನ ಅಥವಾ ಮುಂದಾಳುವಿನ ಜೀವನ ಧ್ಯೇಯ, ಗುರಿ, ಪರಿಶ್ರಮ, ಪರಿಪಕ್ವತೆ, ತ್ಯಾಗ, ಚಿಂತನ ವೈಶಾಲ್ಯತೆಯನ್ನು ಅವಲಂಬಿಸಿರುತ್ತದೆ. ನಾಯಕನೆಂದರೆ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸುವವನು, ಸಾಧಕರಿಗೆ ಸ್ಫೂರ್ತಿ ನೀಡುವವನು ಹಾಗೂ ನುಡಿದಂತೆ ನಡೆಯುವವನು, ಈ ಮೂರು ಅಂಶಗಳ ಸಂಗಮವೇ ನಾಯಕತ್ವ.

ನಾಯಕರು ಉತ್ತಮರಾದರೆ ತಳಹಂತದ ಸಾಧಕರು ಉತ್ತಮರಾಗುತ್ತಾರೆಂಬ ದೂರದೃಷ್ಟಿಯ ಕವಿಗಳು "ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ವ" ಎಂಬ ಪದಶ್ರೇಣಿಯಲ್ಲಿ ಅಳವಡಿಸಿರುತ್ತಾರೆ. ಸೂರ್ಯನನ್ನು ಜಗತ್ತಿನ ಕಣ್ಣೆಂದೂ ಅವನ ವ್ಯಾಪಕ ದೃಷ್ಟಿಯಿಂದ ಸಕಲ ಜೀವರಾಶಿಗಳೂ ಸಹ ಜನ್ಮತಾಳುತ್ತವೆಂದೂ ತಿಳಿಸುತ್ತಾ ಸಹಕಾರದ ಬೆಳವಣಿಗೆಗೆ ಸಹಕಾರಿ ಕಕ್ಷೆಯ ನಾಯಕರ ಮನೋಬಾನ್ದಳದ ವಿಸ್ತಾರತೆಗೆ ಕರೆಯಿತ್ತಿದ್ದಾರೆ.

ಆದ್ದರಿಂದ, ಈ ಪದ್ಯದ ತಿರುಳಾದ ವಿಸ್ತಾರವಾದ ಮನಸ್ಸನ್ನು ಹೊಂದೋಣ, ಸಂಕುಚಿತ ಭಾವವನ್ನು ತೊಲಗಿಸಿ ಸರ್ವರೂ ಒಂದೆಂಬ ಮನೋಭಿಪ್ರಾಯವನ್ನು ಹೊಂದೋಣ, ತನ್ಮೂಲಕ ಸರ್ವರ ಅಭಿವೃದ್ಧಿಗೆ ನಾಂದಿಯಾದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸೋಣವೆಂಬ ಅಂಶದೊಂದಿಗೆ ಇಂದಿನ ಪದ್ಯರ್ಥದ ವಿಧಿಗೆ ಮುಕ್ತಾಯ ನೀಡೋಣ.

ಆಚರಿಸಲಾಗಿದೆ. 2013ರಲ್ಲಿ ನಡೆದ ಜಾಗತಿಕ ಸಮ್ಮೇಳನದಲ್ಲಿ 2011 ರಿಂದ 2020ನ್ನು ಸಹಕಾರಿ ದಶಕವೆಂದು ಆಚರಿಸಲು ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯಿಂದ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆ. ಈ ಎಲ್ಲಾ ಪ್ರಯತ್ನಗಳು, ಅಧ್ಯಯನಗಳು ಸಹಕಾರ ಕ್ಷೇತ್ರದ ಮೇಲಿನ ವಿಶ್ವಾಸವನ್ನು ಹಾಗೂ ಎಂತಹ ಸಂಕಷ್ಟ ಸ್ಥಿತಿಯಲ್ಲೂ ಸಹಕಾರ ಕ್ಷೇತ್ರ ವಿಶ್ವಾಸಾರ್ಹವಾಗಿ, ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲದು ಎನ್ನುವುದನ್ನು ತೋರಿಸುತ್ತಿವೆ.

ಸರ್ಕಾರದ ನೀತಿ ನಿರೂಪಣೆಯಲ್ಲಿ ಸಹಕಾರ ಕ್ಷೇತ್ರ ಮಹತ್ವವನ್ನು ಪಡೆಯುತ್ತಿಲ್ಲ, ಬಹುಶಃ ಇದಕ್ಕೆ ಕಾರಣ, ಬೃಹತ್ ಆರ್ಥಿಕ ಚಟುವಟಿಕೆಯನ್ನು ಹೊಂದಿರುವ ಈ ಕ್ಷೇತ್ರ ಸಂಘಟಿತ ವಿಶ್ವಾಸಾರ್ಹ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುವಲ್ಲಿ ವಿಫಲತೆ ಕಾಣುತ್ತಿರುವುದೂ ಇರಬಹುದು. ಕಪ್ಪು ಹಣ ನಿಯಂತ್ರಣ, ಭ್ರಷ್ಟಾಚಾರ ನಿರ್ಮೂಲನೆ, ತೆರಿಗೆ ತಪ್ಪಿಸುವುದನ್ನು ನಿಯಂತ್ರಿಸುವುದು, ನಗದು ವ್ಯವಹಾರಗಳಿಗೆ ಕಡಿವಾಣ ಇಂತಹ ವಿಷಯಗಳಿಗೆ ಸರ್ಕಾರಗಳು ನಿಯಮ ರೂಪಿಸಿದಾಗಲೆಲ್ಲ ಸಹಕಾರ ಕ್ಷೇತ್ರದಲ್ಲಿ ಆತಂಕ ನಿರ್ಮಾಣ ಮಾಡುವ ಕೆಲಸವಾಗುತ್ತಿದೆ, ಸರ್ಕಾರದ ನೀತಿ ನಿಯಮಗಳ ರಚನೆಯಲ್ಲಿ ಸಹಕಾರ ಕ್ಷೇತ್ರವನ್ನು ಏಕೆ ಪರಿಗಣಿಸುತ್ತಿಲ್ಲ ಎನ್ನುವುದರ ಕುರಿತು ಸಹಕಾರಿಗಳು ಅವಲೋಕನ ಮಾಡಿಕೊಳ್ಳಬೇಕಿದೆ. ಸಹಕಾರ ಕ್ಷೇತ್ರವನ್ನು ಪರಿಗಣಿಸಬೇಕಾದ ಅನಿವಾರ್ಯತೆ ಸೃಷ್ಟಿಸುವಂತೆ ಸಹಕಾರಿಗಳು ವಿಶ್ವಾಸ ಮೂಡಿಸಬೇಕಿದೆ. ಸಹಕಾರ ಕ್ಷೇತ್ರ ಕೂಡ ಪಾರದರ್ಶಕವಾದ ಸಂಘಟಿತ, ಸ್ಪಷ್ಟ, ಆರ್ಥಿಕ ಉದ್ದಿಮೆ ಎನ್ನುವುದನ್ನು ನಿರೂಪಿಸುವ ಅಗತ್ಯವಿದೆ.

ಸಂಕಷ್ಟಗಳು ಹೆಚ್ಚಿದಂತೆ ಅದನ್ನು ಎದುರಿಸುವ, ಬೆಳೆಯುವ ಅವಕಾಶ ಕೂಡ ಹೆಚ್ಚುತ್ತದೆ ಎನ್ನುವುದನ್ನು ಅರಿತು ಸಹಕಾರಿಗಳು ಕಾರ್ಯನಿರ್ವಹಿಸುವ ಅವಶ್ಯಕತೆ ಎಂದಿಗಿಂತ ಹೆಚ್ಚಿದೆ. ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಡಿಜಟಲೀಕರಣದತ್ತ ನಡೆಯುವುದರೊಂದಿಗೆ, ತನ್ನ ಸದಸ್ಯರನ್ನು ಬದಲಾಗುತ್ತಿರುವ ಸಾಮಾಜಿಕ ಹಾಗೂ ಕಾನೂನಾತ್ಮಕ ಬದಲಾವಣೆಗೆ ಸಿದ್ಧಪಡಿಸುವ ಜವಾಬ್ದಾರಿಯನ್ನು ಸಹಕಾರಿಗಳು ನಿರ್ವಹಿಸುತ್ತಾ, ಸ್ಪರ್ಧಾತ್ಮಕವಾಗಿ ಬೆಳೆಯುತ್ತಿದ್ದು, ಇದರ ವೇಗ ಇನ್ನಷ್ಟು ಹೆಚ್ಚಬೇಕಿದೆ. ಕಪ್ಪು ಹಣ ನಿಯಂತ್ರಣ, ತೆರಿಗೆ ತಪ್ಪಿಸುವುದನ್ನು ತಡೆಗಟ್ಟುವಲ್ಲಿ ಸಹಕಾರಿಗಳು ಕೂಡ ಇದ್ದೇವೆ ಎನ್ನುವ ಸಂದೇಶವನ್ನು ಸರ್ಕಾರದ ಹಂತಕ್ಕೆ ತಲುಪಿಸಬೇಕಿದೆ. ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ, ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ ಸಹಕಾರಿಗಳನ್ನು ಕೂಡ ಬದಲಾವಣೆಯ ವೇಗಕ್ಕೆ ಹೊಂದಿಸಿ, ದೇಶದ ವಾಣಿಜ್ಯ ಪರಿಕಲ್ಪನೆಯಲ್ಲಿ ಸ್ವದೇಶವಾದದ ಸಹಕಾರ ಯೋಜನೆಗಳನ್ನು ಸೇರಿಸುವ ಕಾರ್ಯವಾಗಬೇಕಿದೆ. ಈ ನಿಟ್ಟಿನಲ್ಲಿ ಸಶಕ್ತವಾದ ಪ್ರಾಮಾಣಿಕ ನಾಯಕತ್ವವನ್ನು ಸಹಕಾರ ಕ್ಷೇತ್ರ ರೂಪಿಸಿಕೊಳ್ಳುವುದರೊಂದಿಗೆ ಸಂಕಷ್ಟ ಸ್ಥಿತಿಯಲ್ಲಿ ಸಹಕಾರವೊಂದೇ ಉತ್ತರ ಎನ್ನುವ ರೀತಿಯಲ್ಲಿ ಬೆಳವಣಿಗೆ ಹೊಂದಲು ಸಹಕಾರಿಗಳ ಶ್ರಮ ಆಶಾವಾದದೊಂದಿಗೆ ಜಾರಿಯಲ್ಲಿರಲಿ.

# ಡಿಜಿಟಲೀಕರಣದ ಮೂಲಕ ಮಹಿಳೆಯರ ಸಬಲೀಕರಣ
## ಇಂದು ಡಿಜಿಟಲೀಕರಣವು ಆಯ್ಕೆ ಅಲ್ಲ, ಅವಶ್ಯಕ

▸▸ **ಜಯಾ ಅರುಣಾಚಲಂ,** ಅಧ್ಯಕ್ಷರು, ವರ್ಕಿಂಗ್ ವುಮೆನ್ಸ್ ಫೋರಂ (ಭಾರತ), ▸▸ **ಅನುವಾದ : ದಿವ್ಯ ಟಿ.,** ಸಹಾಯಕಿ, ಕರಾಸೌಸಂಸನಿ.,

ಹಲವಾರು ಸರ್ಕಾರಿ ಯೋಜನೆಗಳ ಮತ್ತು ನೀತಿ ನಿರ್ಧಾರಗಳ ಹೊರತಾಗಿಯೂ, ಭಾರತದಲ್ಲಿ ಮಹಿಳೆಯರು ಶಿಕ್ಷಣ, ಉದ್ಯೋಗ, ತರಬೇತಿ ಮತ್ತು ದೃಷ್ಟಿಕೋನದಲ್ಲಿ ಸಮಾನ ಅವಕಾಶಗಳನ್ನು ಪಡೆದುಕೊಳ್ಳುವಲ್ಲಿ ವಂಚಿತರಾಗಿದ್ದಾರೆ. ನಗರ ಕೇಂದ್ರಗಳಲ್ಲಿ ಕೆಲವಷ್ಟು ಪ್ರಗತಿ ಕಂಡುಬಂದರೂ, ಗ್ರಾಮೀಣ ಮಹಿಳೆಯರು ಅಂತಹ ಅವಕಾಶಗಳ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿಲ್ಲ. ಆರ್ಥಿಕ ಸ್ವಾತಂತ್ರ್ಯವು ಸಮಾಜದಲ್ಲಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವಲ್ಲಿ, ಸಮಾನ ಅವಕಾಶಗಳನ್ನು ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಸನ್ನಿವೇಶದಲ್ಲಿ ಸಹಕಾರ ಕ್ಷೇತ್ರವು ಆರ್ಥಿಕ ಪ್ರಗತಿ ಮತ್ತು ಆರ್ಥಿಕ ಸ್ವಾತಂತ್ರ್ಯದ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಒಂದು ಅತ್ಯುತ್ತಮ ಸಾಧನವಾಗಿದೆ ಮತ್ತು ಪ್ರಾಥಮಿಕ ಆಧಾರವಾಗಿದೆ.

ಮಹಿಳೆಯರಿಗೆ ಸರ್ಕಾರ, ನಾಗರೀಕ ಸಮಾಜ, ಅಭಿವೃದ್ಧಿ ಸಂಸ್ಥೆಗಳಾದ ವಿಶ್ವಸಂಸ್ಥೆ ಮತ್ತು ಇತರೆ ಸಂಸ್ಥೆಗಳು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದ್ದಾಗ್ಯೂ ಸಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಡೆತಡೆಗಳಿಂದಾಗಿ ಬ್ಯಾಂಕಿಂಗ್ ಮತ್ತು ಅದರ ಸೇವೆಗಳನ್ನು ಪಡೆಯುವಲ್ಲಿ ವಿಫಲವಾಗಿದ್ದಾರೆ. ಆದ್ದರಿಂದ, ವರ್ಕಿಂಗ್ ವುಮೆನ್ಸ್ ಫೋರಮ್ (ಭಾರತ) ಮಹಿಳೆಯರಿಗೆ ಭಾರತೀಯ ಸಹಕಾರ ಜಾಲ (Indian Cooperative Network for Women) ವನ್ನು ಬಡ ಮಹಿಳೆಯರಿಗೆ ಸಾಲ ಸೌಲಭ್ಯ ಒದಗಿಸುವುದರ ಮೂಲಕ ಉತ್ತೇಜಿಸಿದೆ ಮತ್ತು ಸೂಕ್ಷ್ಮ ಉದ್ಯಮಶೀಲತೆಯ ಮೂಲಕ ಪ್ರಗತಿ ಸಾಧಿಸಲು ಶ್ರಮಿಸುತ್ತಿದೆ.

ಕಳೆದ ದಶಕದಲ್ಲಿ, ದೇಶದಾದ್ಯಂತ ಬ್ಯಾಂಕುಗಳು ತಮ್ಮ ಕಾರ್ಯ ನಿರ್ವಹಣೆಯನ್ನು ಬದಲಿಸಲು ಸತತವಾಗಿ ತಂತ್ರಜ್ಞಾನವನ್ನು ಬಳಸಿಕೊಂಡಿವೆ. ಈ ನಿಟ್ಟಿನಲ್ಲಿ ಭಾರತೀಯ ಸಹಕಾರ ವ್ಯವಸ್ಥೆ ಕೂಡ ತೀವ್ರ ಬದಲಾವಣೆಗೆ ಒಳಗಾಗುತ್ತಿದೆ. ಹಿಂದೆಂದಿಗಿಂತಲೂ ಮಾಹಿತಿ ತಂತ್ರಜ್ಞಾನದಿಂದ ಜಗತ್ತಿನಲ್ಲಿ ಕ್ರಾಂತಿಯಾಗುತ್ತಿದೆ. ಮಾಹಿತಿ ತಂತ್ರಜ್ಞಾನದ ಪ್ರಯೋಜನಗಳು ಸಮಾಜದ ಮೇಲ್ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ, ಸಮಾಜದ ಎಲ್ಲಾ ವಿಭಾಗಗಳಿಗೂ ಮತ್ತು ಮಹಿಳಾ ಜನಸಂಖ್ಯೆಗಳಿರುವಲ್ಲಿಯೂ ಸಹ ಮುಕ್ತವಾಗಿ ಪಸರಿಸುತ್ತಿದೆ. ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯು ಮಹಿಳೆಯರ ಅಸಮಾನತೆಯನ್ನು ಹೋಗಲಾಡಿಸಲು ಪ್ರಬಲ ಸಾಧನವಾಗಿದೆ, ಅವರ ಗುಣಮಟ್ಟ ಮತ್ತು ಭವಿಷ್ಯದ ಸಮುದಾಯಗಳ ಸುಧಾರಣೆಯ ಸಂದರ್ಭದಲ್ಲಿ, ನಿರ್ಧಾರಾತ್ಮಕ ಪ್ರಕ್ರಿಯೆಗಳಲ್ಲಿ, ಪೂರ್ಣ ಪ್ರಮಾಣದಲ್ಲಿ ಭಾಗವಹಿಸುವಿಕೆಯಲ್ಲಿ ಸಮಾನತೆಯನ್ನು ಸಾಧಿಸಲು ಸಹಕರಿಸುತ್ತದೆ. ಮಾಹಿತಿ ತಂತ್ರಜ್ಞಾನ ಪ್ರಕ್ರಿಯೆಯು ಮಹಿಳೆಯರಿಗೆ ಮತ್ತು ಸಮಾಜದ ಕೆಳವರ್ಗಗಳಲ್ಲಿರುವ ವಿಭಾಗಗಳಲ್ಲಿ ವೈಯಕ್ತಿಕ ಆತ್ಮವಿಶ್ವಾಸ ಮತ್ತು ಆತ್ಮಗೌರವಗಳನ್ನು ನಿರ್ಮಿಸುವಲ್ಲಿ ನಿಸ್ಸಂದೇಹವಾಗಿ ಬದಲಾವಣೆ ತರುತ್ತದೆ.

ಮಾಹಿತಿ ತಂತ್ರಜ್ಞಾನಕ್ಕೆ ಅವಕಾಶ ಹೊಂದಿರುವ ಭಾರತದ ಮಹಿಳೆಯರು, ತಂತ್ರಜ್ಞಾನ ಪ್ರಕ್ರಿಯೆಗಳ ಬಳಕೆ ಮತ್ತು ನಿಯಂತ್ರಣದಲ್ಲಿ ತಮ್ಮ ಗಮನಾರ್ಹವಾದ ತಿಳುವಳಿಕೆಯನ್ನು ಪ್ರದರ್ಶಿಸಿದ್ದಾರೆ. ಯಾವುದೇ ಪ್ರೋಗ್ರಾಂಗಳನ್ನು ಗಣಕೀಕರಣಗೊಳಿಸುವಲ್ಲಿ ಯಶಸ್ವಿ ಅನುಷ್ಠಾನದ ಮೂಲಕ ತಂತ್ರಜ್ಞಾನಗಳನ್ನು ಉನ್ನತೀಕರಿಸುವುದು, ಸಿಬ್ಬಂದಿಗಳ ಸಹಕಾರಕ್ಕೆ ಸಂಬಂಧಿಸಿದಂತೆ ಅವರಲ್ಲಿ ಯಾವುದೇ ರೀತಿಯ ತೊಡಕುಗಳಿದ್ದಲ್ಲಿ ಅವುಗಳನ್ನು ಅವಶ್ಯಕವಾಗಿ ತೆಗೆದುಹಾಕುವುದು.

ಮಹಿಳೆಯರಿಗೆ ಭಾರತೀಯ ಸಹಕಾರ ಜಾಲ (Indian Cooperative Network for Women) – ಬಹು–ರಾಜ್ಯ ಸಹಕಾರಿ ಸಂಸ್ಥೆಯು ಗ್ರಾಮೀಣ ಪ್ರದೇಶಗಳ ಯುವತಿಯರಿಗೆ ಗಣಕ ಯಂತ್ರಗಳನ್ನು ಮತ್ತು ಅಂತರ್ಜಾಲವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಲು ತರಬೇತಿ ನೀಡುತ್ತಿದೆ. ಜ್ಞಾನ, ಮಾಹಿತಿ ತಂತ್ರಜ್ಞಾನ, ಕೌಶಲ್ಯ ಮತ್ತು ತರಬೇತಿಗಳು ಈ ಸಂಪನ್ಮೂಲಗಳ ಮೇಲೆ ಹೆಚ್ಚಿನ ನಿಯಂತ್ರಣವನ್ನು ಪಡೆದುಕೊಳ್ಳುವುದರ ಮೂಲಕ ಅವರು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ರಾಷ್ಟ್ರದ ಪ್ರಗತಿಯಲ್ಲಿ ಮಹಿಳೆಯರ ಸಾಮರ್ಥ್ಯದ ನಿರ್ಮಾಣ ಮತ್ತು ಸಬಲೀಕರಣವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ, ಅವರು ಮೌಲ್ಯಯುತ ಉತ್ಪಾದನಾ ಮಾನವ ಸಂಪನ್ಮೂಲಗಳಾಗಿದ್ದಾರೆ (valuable productive human resources). ಮಹಿಳೆಯರು ತಾರತಮ್ಯದಿಂದ ಹೊರಬರಲು ಮತ್ತು ತಮ್ಮ ಜೀವನದ ಗುಣಮಟ್ಟವನ್ನು ಸುಧಾರಿಸಲು ಮಾಹಿತಿ ತಂತ್ರಜ್ಞಾನವು ಪ್ರಬಲ ಸಾಧನವಾಗಿದೆ.

### ICNW (Indian Cooperative Network for Women) – ಮಹಿಳೆ ಮತ್ತು ತಂತ್ರಜ್ಞಾನದ ಕಡೆಗೆ ಹೊಸ ನಿರ್ದೇಶನ :


ವರ್ಕಿಂಗ್ ವುಮೆನ್ಸ್ ಫೋರಮ್ (ಭಾರತ)ದಿಂದ ಪ್ರಾಯೋಜಿತವಾದ ಮಹಿಳೆಯರಿಗೆ ಭಾರತೀಯ ಸಹಕಾರ ಜಾಲವು (ICNW) ಬಹು–ರಾಜ್ಯ ಮಹಿಳಾ ಸಹಕಾರಿ ಸಂಸ್ಥೆಯಾಗಿದ್ದು, ಕಳೆದ 35 ವರ್ಷಗಳಿಂದ ದಕ್ಷಿಣ ಭಾರತದ 3 ರಾಜ್ಯಗಳಾದ ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಅಸಂಘಟಿತ ವಲಯದ ಬಡ ಮಹಿಳೆಯರ ಸಬಲೀಕರಣವನ್ನು ಸಾಧಿಸುವಲ್ಲಿ ಕಾರ್ಯನಿರ್ವಹಿಸುತ್ತಿದೆ. ICNW ಹಲವು ವರ್ಷಗಳಿಂದ ದಶಲಕ್ಷದಷ್ಟು ಬಡ ಮಹಿಳೆಯರ ಜೀವನವನ್ನು ರೂಪಾಂತರಿಸಿದೆ. ICNW ಲಕ್ಷಾಂತರ ಮಹಿಳಾ ಉದ್ಯಮಿಗಳಿಗೆ ಗುಂಪು ವ್ಯವಸ್ಥೆಯ ಮೂಲಕ ಸಾಲ ವಿಸ್ತರಣೆ ಹಾಗೂ ಸಾಲ ವಿಸ್ತರಣೆಯ ಉಸ್ತುವಾರಿ ಹೊಂದಿರುವ ಗುಂಪಿನ ನಾಯಕರನ್ನು ಸಬಲೀಕರಣ ಮಾಡುವುದರ ಮೂಲಕ ಮಹಿಳೆಯರ ಒಗ್ಗಟ್ಟನ್ನು ಹೆಚ್ಚಿಸುವುದು, ಜನಸಾಮಾನ್ಯರ ಮಟ್ಟದಲ್ಲಿ ಸದಸ್ಯರು ಅವರ ಜೀವನದ ಮತ್ತು ಕೆಲಸದ ಮೇಲೆ ಒಟ್ಟಾರೆಯಾಗಿ ಪ್ರಭಾವ ಬೀರುವ ಹಲವಾರು ಸಮಸ್ಯೆಗಳಿಂದ ಹೊರತರಲು ಕ್ರಮಗಳನ್ನು ಕೈಗೊಂಡಿದ್ದಾರೆ. ಇದು ಭಾರತೀಯ ಪುರುಷ ಪ್ರಾಬಲ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಅವರ ಮಟ್ಟವನ್ನು ಮತ್ತು ನಿರ್ಣಯ ಕೈಗೊಳ್ಳುವ ಅಧಿಕಾರವನ್ನು ಬಲಪಡಿಸುವುದು ಅತ್ಯಂತ ಸಾಮಾನ್ಯವಾಗಿದೆ.

1998ರಲ್ಲಿ ICNW ತನ್ನ ಬ್ಯಾಂಕಿಂಗ್ ಅನ್ನು ಗಣಕೀಕೃತಗೊಳಿಸುವ ಪ್ರಯತ್ನಗಳಿಂದ ಭಯದ ಹೊರತಾಗಿಯೂ ಮಾಹಿತಿ ತಂತ್ರಜ್ಞಾನ ಉದ್ಯಮವು ಕಡಿಮೆ ಮಟ್ಟದ ಸ್ನೇಹಿಯಲ್ಲ. ಇದು ದಕ್ಷಿಣ ಭಾರತದಲ್ಲಿ ಆರಂಭವಾಯಿತು. ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ತನ್ನ 13 ಶಾಖೆಗಳನ್ನು ನಿಧಾನವಾಗಿ ಅಭಿವೃದ್ಧಿಪಡಿಸಿದೆ. ಇಂದು ಮಾಹಿತಿ ತಂತ್ರಜ್ಞಾನ ಪ್ರಕ್ರಿಯೆಯು ICNW/ WWF ನ ಎಲ್ಲಾ ಶಾಖೆಗಳಲ್ಲಿ ಹೆಚ್ಚಿನ ಗುಣಮಟ್ಟವನ್ನು ಹೊಂದಿಲ್ಲದ ಬಡ ಮಹಿಳೆಯರಿಗಾಗಿ ಕಾರ್ಯನಿರ್ವಹಿಸುತ್ತಿದೆ. ಹಾಗೆಯೇ, ICNW ಯುವತಿಯರಿಗೆ ಮಾಹಿತಿ ತಂತ್ರಜ್ಞಾನವನ್ನು ಬಳಸಲು ತರಬೇತಿ ನೀಡುವಲ್ಲಿ ಅತ್ಯುತ್ತಮವಾದ ಧನಾತ್ಮಕ ಅನುಭವವನ್ನು ಹೊಂದಿದೆ.

### ICNWನಲ್ಲಿ ಗಣಕೀಕರಣದ ಅನುಕೂಲಗಳು :

ಆರಂಭದಲ್ಲಿ ICNW ತನ್ನ ಸದಸ್ಯತ್ವವನ್ನು ಹೆಚ್ಚಿನ ಸಂಖ್ಯೆಯ ಬಡ ಮಹಿಳೆಯರಿಗೆ ಸೂಕ್ಷ್ಮ ಸಾಲಗಳನ್ನು ಲಭ್ಯವಾಗುವಂತೆ ವಿಸ್ತರಿಸಲು ಸಹಾಯವಾಗುವಂತೆ ತಂತ್ರಾಂಶವನ್ನು ಅಳವಡಿಸಿರುವುದರ ಕುರಿತು ಹೆಮ್ಮೆ

40ನೇ ಪುಟಕ್ಕೆ...



# RBI NEWS - NOVEMBER 2017

**K. Vittal Shetty,** Banking Consultant, kohimavittal@Hotmail.com, Mobile:9845699904

The next meeting of the MPC is scheduled on December 5 and 6, 2017.

| Policy Rates with effect from 02 AUGUST 2017 | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 14 OCTOBER 2017 | 19.50% |

**Date : Nov 23, 2017**

**Scheduled Banks' Statement of Position in India as on Friday, November 10, 2017 (Revised)**

**(Amount in Billions of )**

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 11-Nov-16 | 27-Oct-17 | 10-Nov-17 | 11-Nov-16 | 27-Oct-17 | 10-Nov-17 |
| I | a) Deposits | 100676.7 | 108497.4 | 108869.84 | 103397.58 | 111426.4 | 111827.31 |
| | i) Demand | 9592.97 | 11504.03 | 11239.58 | 9843.37 | 11778.31 | 11512.69 |
| | ii) Time | 91083.73 | 96993.39 | 97630.26 | 93554.21 | 99648.08 | 100314.62 |
| II | CASH | 2528.83 | 763.61 | 715.98 | 2612.55 | 784.9 | 735.15 |
| III | BALANCES WITH R.B.I. | 4130.3 | 4370.59 | 4367.41 | 4249.22 | 4488.24 | 4487.81 |
| IV | INVESTMENTS | 28846.73 | 33425.5 | 33906.73 | 29613.87 | 34374.43 | 34860.16 |
| V | BANK CREDIT | 73243.32 | 79121.72 | 79581.56 | 75487.61 | 81584.15 | 82042.49 |

## IMPORTANT NEWS

**November 02, 2017: Introduction of Legal Entity Identifier for large corporate borrowers**

The Legal Entity Identifier (LEI) code is conceived as a key measure to improve the quality and accuracy of financial data systems for better risk management post the Global Financial Crisis. LEI is a 20-digit unique code to identify parties to financial transactions worldwide.

2. The LEI for the participants of the OTC derivatives market has since been implemented vide circular RBI/2016-17/314 FMRD.FMID No.14/11.01.007/2-16-17 dated June 01, 2017 in a phased manner.

3. In the Statement on Developmental and Regulatory Policies dated October 4, 2017 it was indicated that LEI system for all borrowers of banks having total fund based and non-fund based exposure of 5 crore and above will be introduced in a phased manner (extract enclosed). Accordingly, it has been decided that the banks shall advise their existing large corporate borrowers having total exposures of 50 crore and above to obtain LEI as per the schedule given in the Annex. Borrowers who do not obtain LEI as per the schedule are not to be granted renewal / enhancement of credit facilities. A separate roadmap for borrowers having exposure between 5 crore and upto 50 crore would be issued in due course.

4. Banks should encourage large borrowers to obtain LEI for their parent entity as well as all subsidiaries and associates.

5. Entities can obtain LEI from any of the Local Operating Units (LOUs) accredited by the Global Legal Entity Identifier Foundation (GLEIF) – the entity tasked to support the implementation and use of LEI. In India, LEI code may be obtained from Legal Entity Identifier India Ltd (LEIIL), a subsidiary of the Clearing Corporation of India Limited (CCIL), which has been recognised by the Reserve Bank as issuer of LEI under the Payment and Settlement Systems Act, 2007 and is accredited by the GLEIF as the Local Operating Unit (LOU) in India for issuance and management of LEI.

6. The rules, procedure and documentation requirements may be ascertained from LEIIL.

7. After obtaining LEI code, banks shall also ensure that borrowers renew the codes as per GLEIF guidelines.

8. These directions are issued under Section 21 and Section 35(A) of the Banking Regulation Act, 1949.

**Extracts from Statement on Developmental and Regulatory Policies dated October 4, 2017**

5. Legal Entity Identifier (LEI) - It has been decided to require banks to make it mandatory for corporate borrowers having aggregate fund-based and non-fund based exposure of 5 crore and above from any bank to obtain Legal Entity Identifier (LEI) registration and capture the same in the Central Repository of Information on Large Credits (CRILC). This will facilitate assessment of aggregate borrowing by corporate groups, and monitoring of the financial profile of an entity/group. This requirement will be implemented in a

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 40

calibrated, but time-bound manner. Necessary instructions will be issued by end-October 2017.

**Annex**

| Schedule for implementation of LEI | |
|---|---|
| Total Exposure to SCBs | To be completed by |
| 1000 crore and above | Mar 31, 2018 |
| Between 500 crore and 1000 crore | Jun 30, 2018 |
| Between 100 crore and 500 crore | Mar 31, 2019 |
| Between 50 crore and 100 crore | Dec 31, 2019 |

**Nov 29, 2017:** Caution against various Co-operative societies using the word "Bank" in their names.

It has come to the notice of Reserve Bank of India (RBI) that some Co-operative Societies are using the word "Bank" in their names. This is a violation of Section 7 of the Banking Regulation Act, 1949 (As Applicable to Co-operative Societies) (the B.R.Act, 1949).

It has also come to the notice of RBI that some Co-operative societies are accepting deposits from non-members / nominal members / associate members which tantamount to conducting banking business in violation of the provisions of the B.R.Act, 1949.

Members of the public are hereby informed that such societies have neither been issued any licence under B.R.Act, 1949 nor are they authorized by the RBI for doing banking business. The insurance cover from Deposit Insurance and Credit Guarantee Corporation (DICGC) is also not available for deposits placed with these societies. Members of public are advised to exercise caution and carry out due diligence of such Co-operative societies before dealing with them.

**Directions,Withdrwals,Penalties & Cancellation of Licences of Urban Co-operative Banks.**

**1) Nov 03, 2017:** Withdrawal of directions under sub-section (2) of section 35A of the Banking Regulation Act, 1949 (AACS) – Nashik District Girna Sahakari Bank Ltd., Nashik, District .

**2) Nov 06, 2017 :** RBI extends Directions issued to the Brahmawart Commercial Co-operative Bank Ltd., Kanpur, Uttar Pradesh till March 06, 2018.

**3) Nov 08, 2017 :** RBI penalised 0.50 lakh (Rupees Fifty thousand only)The Sind Co-operative Urban Bank Ltd., Hyderabad, Telangana.

**4) Nov 09, 2017 :** RBI issues Directions to the Karad Janata Sahakari Bank Ltd., Karad, Dist ; Satara, Maharashtra.

**5) Nov 15, 2017:** RBI issues directions on Vasantdada Nagari Sahakari Bank Ltd, Osmanabad, Maharashtra.

**6) Nov 22, 2017 :**RBI extends Directions issued to Rupee Co-operative Bank Ltd., Pune.

**7) Nov 29, 2017:** Directions under Section 35A of the Banking Regulation Act, 1949 (AACS) – The CKP Co-operative Bank Ltd, Mumbai, Maharashtra. **Source: www.rbi.org.in**

...38ನೇ ಪುಟದಿಂದ

ಇದೆ. ಇದರಿಂದ ಪ್ರಮುಖವಾಗಿ ಬಹಳಷ್ಟು ಸಮಯ ಉಳಿತಾಯವಾಗಿದೆ ಮತ್ತು ಬಹಳಷ್ಟು ಲೆಡ್ಜರ್ ಗಳನ್ನು ಕೈಬರಹದಲ್ಲಿ ಬರೆಯುವುದನ್ನು ಮತ್ತು ಕಾಗದ ಪತ್ರಗಳನ್ನು ನಿರ್ವಹಿಸುವ ಪ್ರಕ್ರಿಯಾ ಸಮಯುವನ್ನು ಕಡಿಮೆಗೊಳಿಸಿದೆ. ಆರ್ಥಿಕವಾಗಿ ಉತ್ತಮ ಸಂಸ್ಥೆಯಾಗಿರುವ ICNW ದಕ್ಷ ಕ್ಷೇತ್ರ ನಿರ್ವಹಣೆಯನ್ನು ಹೆಚ್ಚಿಸುವಲ್ಲಿ ಮತ್ತು ತಪ್ಪು ಮಾಡುವುದನ್ನು ಕಡಿಮೆ ಮಾಡುವುದರ ಮೂಲಕ ಅದರ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುತ್ತಿದೆ. ಬೃಹತ್ ಪ್ರಮಾಣದಲ್ಲಿ ಸದಸ್ಯತ್ವವನ್ನು ಹೊಂದಿರುವಲ್ಲಿ ಕೇವಲ ಒಂದು ಕೀಯನ್ನು ಒತ್ತುವುದರ ಮೂಲಕ ಒಬ್ಬ ಸದಸ್ಯರ ಮಾಹಿತಿಯನ್ನೂ ಸಹ ಪಡೆಯಬಹುದು ಮತ್ತು ಅಗತ್ಯವಿದ್ದಲ್ಲಿ ಬದಲಾವಣೆ ಮಾಡಬಹುದು ಎಂಬುದೇ ಒಂದು ಉತ್ತಮ ನಿದರ್ಶನವಾಗಿದೆ. ಅಲ್ಲದೇ, ತಪ್ಪಾದ ಮಾಹಿತಿಗಳನ್ನು ಸಹ ಪರಿಣಾಮಕಾರಿಯಾಗಿ ಹಿಂಪಡೆಯಬಹುದು. ಹುಡುಕುವ ಕಾರ್ಯ ಮತ್ತು ಸ್ವಯಂಚಾಲಿತವಾಗಿ ಖಾತೆ ಸಂಖ್ಯೆಗಳನ್ನು ಪಡೆಯವುದು ಬಹಳ ವೇಗವಾಗಿದೆ ಮತ್ತು ಸುಲಭವಾಗಿದೆ. ವಿಭಿನ್ನ ವರದಿಗಳನ್ನು ಮತ್ತು ಮಾಹಿತಿಗಳನ್ನು ಶೀಘ್ರವಾಗಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ತ್ವರಿತಗತಿಯಲ್ಲಿ ಶಾಖೆಗಳಲ್ಲಿಯೂ ಸಹ ಲಭ್ಯವಾಗುತ್ತದೆ. ಹೀಗಾಗಿ ICNWನಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯಿಂದ ಮಿತವ್ಯಯ ಮತ್ತು ಸಮಯದ ಉಳಿತಾಯವಾಗಿದೆ.

ಬಡ ಮಹಿಳೆಯರನ್ನು ಗುರಿಯಾಗಿಸಿಕೊಂಡ ಒಂದು ಸಂಸ್ಥೆಯಾಗಿ ಮಹಿಳೆಯರಿಗೆ ಭಾರತೀಯ ಸಹಕಾರ ಜಾಲ (Indian Cooperative Network for Women)ಕ್ಕೆ 1988ರಲ್ಲಿ ಜಾಗತಿಕ ನಾಯಕರುಗಳಾದ ನೆದರ್ ಲ್ಯಾಂಡಿನ ರಾಣಿ ಮದರ್ ಜುಲಿನಾ, ಭಾರತದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ರಾಜೀವ್ ಗಾಂಧಿ, 2011ರಲ್ಲಿ ಡಚ್ ಸರ್ಕಾರದ ಮಾಜಿ ಗ್ರಾಮೀಣ ಸಲಹೆಗಾರರಾದ ಶ್ರೀ ಪೌಲ್–ಟೇರ್ ವೀಲ್ ಮತ್ತು ಅಮೇರಿಕಾದ ಮಾಜಿ ಕಾರ್ಯದರ್ಶಿಯಾದ ಮೇಡಂ ಹಿಲರಿ ಕ್ಲಿಂಟನ್‌ರವರು ಭೇಟಿ ನೀಡಿದ್ದರು. ಯಶಸ್ವಿ ಸಹಕಾರಿ ಮಾದರಿಯ ಕಾರ್ಯನಿರ್ವಹಣೆಯನ್ನು ವೀಕ್ಷಿಸಲು ಈ ಗಣ್ಯರು ICNWಗೆ ಭೇಟಿ ನೀಡಿದ್ದರು. ಹೀಗೆ ಮಾಹಿತಿ ತಂತ್ರಜ್ಞಾನವು ಪ್ರಮುಖವಾದ ಕಾರ್ಯತಂತ್ರವಾಗಿದ್ದು, ಲಿಂಗ ಸಮಾನತೆ, ಮಹಿಳಾ ಆರ್ಥಿಕ ಸಬಲೀಕರಣ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಡತನವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಸಾಧನವಾಗಿದೆ ಎಂದು ICNW ಪ್ರಪಂಚಕ್ಕೆ ತೋರಿಸಿದೆ.

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010